ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳವರಿಗೆ ಸಲ್ಲಿಸಬೇಕಾದ ನಮೂನೆ (ಮಾರ್ಚ್–2019)

| | | |
|---|---|---|
| 1. | ಜಿಲ್ಲೆಯ ಹೆಸರು | ಶಿವಮೊಗ್ಗ ಜಿಲ್ಲೆ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಶ್ರೀ ಚಕ್ರವರ್ತಿ ಮೋಹನ್ ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ |
| 3. | ಭೇಟಿಯಾದ /ಪ್ರವಾಸದ ದಿನಾಂಕ | ದಿನಾಂಕ:7–03–2019 |
| 4. | ಅ) ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಸಭೆಗೆ ಸ್ವಾಗತಿಸುತ್ತಾ, ಜಿಲ್ಲಾಧಿಕಾರಿಯವರು, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ವಿವಿಧ ಇಲಾಖೆಗಳ ಫೆಬ್ರವರಿ ಅಂತ್ಯದವರೆಗಿನ ಪ್ರಗತಿ ಪರಿಶೀಲನೆ ಮಾಡಲಿದ್ದು, ಸಂಬಂಧಪಟ್ಟ ಇಲಾಖಾಧಿಕಾರಿಯವರು ಸಭೆಗೆ ಮಾಹಿತಿ ಒದಗಿಸುವಂತೆ ತಿಳಿಸಿದರು.<br><br>ಸಾಗರ ತಾಲ್ಲೂಕುನಲ್ಲಿ ದಿನಾಂಕ 23–11–2018 ರಂದು ಅರಳಗೊಡು ಪ್ರಾಥಮಿಕ ಆರೋಗ್ಯ ಕೇಂದ್ರದ ಜೇಗಳ ಗ್ರಾಮದಲ್ಲಿ ಪ್ರಥಮವಾಗಿ ಕೆಎಫ್‌ಡಿ ಕಾಯಿಲೆಯು ವರದಿಯಾಯಿತು. ದಿ: 24–11–2018 - 26–11–2018 ರಂದು ವಿಡಿಎಲ್ ಶಿವಮೊಗ್ಗ ದಿಂದ ವೈದ್ಯರ ತಂಡಗಳು ಬೇಟಿ ನೀಡಿ ಅರಳಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕಾಯಿಲೆ ಬಗ್ಗೆ ಸೂಕ್ತ ಮಾಹಿತಿ ನೀಡಲಾಯಿತು. ದಿನಾಂಕ 28–11–2018 ರಂದು ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಂತರ ಇಲಾಖಾ ಮಾಹಿತಿ ಶಿಬಿರವನ್ನು ಹಾಗೂ ಸಭೆಯನ್ನು ನಡೆಸಲಾಯಿತು ಮೈಕಿಂಗ್ ಹಾಗೂ ಕರ ಪತ್ರಗಳ ಮೂಲಕ ಸುತ್ತ ಮುತ್ತಲಿನ ಎಲ್ಲಾ ಗ್ರಾಮಸ್ಥರಿಗೂ ಕಾಯಿಲೆ ಹಾಗೂ ಲಸಿಕೆ ಬಗ್ಗೆ ಮಾಹಿತಿ ನೀಡಲಾಯಿತು - ಉಣ್ಣೆ ವಿಕರ್ಷಕ ಡಿಎಂಪಿ ತೈಲವನ್ನು ವಿತರಿಸಲಾಯಿತು. |

| | | |
|---|---|---|
| | ಆ) ಶಿವಮೊಗ್ಗ ಜಿಲ್ಲಾ ಆರೋಗ್ಯಾಧಿಕಾರಿಗಳು, ವಿಡಿಎಲ್ ಉಪ ನಿರ್ದೇಶಕರು ಹಾಗೂ ಇತರ ಆರೋಗ್ಯ ಅಧಿಕಾರಿಗಳೊಂದಿಗೆ **KFD** ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿ ಮಾಹಿತಿಯನ್ನು ಪಡೆಯಲಾಯಿತು. | ದಿನಾಂಕ 30-11-2018 ರಂದು ಅರಳಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಮೊದಲನೇ ಸುತ್ತಿನ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ನಿಗದಿತ 1953 ಗುರಿಯಲ್ಲಿ 1490 ಜನರಿಗೆ ಲಸಿಕೆಯ ಮೊದಲನೇ ವರಸೆಯನ್ನು ನೀಡಲಾಯಿತು. ಆರೋಗ್ಯ ಸಹಾಯಕರು ಆಶಾ ಕಾರ್ಯಕರ್ತೆಯರ ಮೂಲಕ ಸುತ್ತ ಮುತ್ತಲಿನ ಎಲ್ಲಾ ಗ್ರಾಮಗಳಲ್ಲೊ ಜ್ವರ ಸಮೀಕ್ಷೆಯನ್ನು ನಿರಂತರವಾಗಿ ನಡೆಸಲಾಯಿತು.<br><br>ಮಂಗ ಸತ್ತ ಪ್ರಕರಣಗಳು ವರದಿಯಾದ ಬಗ್ಗೆ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಹಾಗೂ ಇತರೇ ಇಲಾಖೆಗಳಲ್ಲಿ ಜಾಗೃತಿ ಮೂಡಿಸಲಾಯಿತು. ಸತ್ತ ಮಂಗದ ಶವಗಳ ಮರಣೋತ್ತರ ಪರೀಕ್ಷೆ, ಸೂಕ್ತ ವಿಲೇವಾರಿ ಮೇಲಾಥಿಯಾನ ಪುಡಿಯ ಧೂಳೀಕರಣ ಮುಂತಾದ ಮುಂಜಾಗ್ರತಾ ಕ್ರಮಗಳನ್ನು ಅರಣ್ಯ ಪಶು ಸಂಗೋಪನಾ, ಕಂದಾಯ ಹಾಗೂ ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ ಕೈಗೂಳ್ಳಲಾಯಿತು. ದಿನಾಂಕ 21-12-2018 ರಿಂದ ಜಿಲ್ಲಾ ಆರೋಗ್ಯ ಸಹಾಯಕರು ಇತರೆ ತಾಲ್ಲೊಕುಗಳಿಂದ ಕಿರಿಯ ಆರೋಗ್ಯ ಸಹಾಯಕರನ್ನು ನಿಯೋಜನೆಗೊಳಿಸಿ ಹಾಗೂ 24 **X** 7 ವೈದ್ಯರು ಲಭ್ಯವಿರುವಂತೆ ಕ್ರಮ ಕೈಗೂಳ್ಳಲಾಯಿತು. ಸಂಚಾರಿ ಆರೋಗ್ಯ ವಾಹನವನ್ನು ಸಿದ್ದಗೊಳಿಸಲಾಯಿತು. ಹಾಗೂ 24 ಘಂಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೂ ಸಹ ಆರೋಗ್ಯ ಸೇವೆ ಲಭ್ಯವಿರುವಂತೆ 3 ಜನ ವೈಧ್ಯರು, ಶುಶ್ರೂಷಕರು ಆರೋಗ್ಯ ಸಹಾಯಕರು ಪಾಳಿಯ ಮೇಲೆ ಕರ್ತವ್ಯ ನಿರ್ವಹಿಸುವಂತೆ ಏರ್ಪಡಿಸಲಾಯಿತು. ತುರ್ತು ಚಿಕಿತ್ಸೆಗೆ ಬೇಕಾಗುವ ಎಲ್ಲಾ ಔಷಧಗಳನ್ನು ಇಲ್ಲಿ ಸಂಗ್ರಹಿಸಿಡಲಾಯಿತು. ತುರ್ತು ಸಂದರ್ಭದಲ್ಲಿ ತಕ್ಷಣ ಸ್ಪಂದಿಸಲು ಕಾಲ್‌ಸೆಂಟರ್‌ಗಳನ್ನು ಗ್ರಾಮ ಪಂಚಾಯತ್ ಕಛೇರಿಯಲ್ಲಿ ಹಾಗೂ ಸಾರ್ವಜನಿಕ ಆಸ್ಪತ್ರೆ ಸಾಗರದಲ್ಲಿ ಸ್ಥಾಪಿಸಲಾಯಿತು. ಕಛೇರಿಯ ಉಪ ನಿರ್ದೇಶಕರು ಹಾಗೂ ತಜ್ಞ ವೈಧ್ಯರು, ಜಿಲ್ಲಾ ಆರೋಗ್ಯಾಧಿಕಾರಿಗಳು, ಜಿಲ್ಲಾಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ರೋಗವಾಹಕ ಆಶ್ರಿತ |

| | | |
|---|---|---|
| | | ರೋಗಗಳ ನಿಯಂತ್ರಣಾಧಿಕಾರಿಗಳವರು ಹಾಗೂ ಕೆಎಫ್‌ಡಿ ಕ್ಷೇತ್ರ ಕಛೇರಿಯ ವೈದ್ಯರು ಪ್ರತಿ ದಿನಾ ಸತತ ಮೇಲ್ವಿಚಾರಣೆ ವಹಿಸಲಾಯಿತು. ಇದನ್ನು ಜಿಲ್ಲಾ ಆಡಳಿತದ ಮಾರ್ಗದರ್ಶನದಲ್ಲಿ ಕ್ರಮವಹಿಸಲಾಗಿರುತ್ತದೆ.<br><br>ದಿನಾಂಕ 28-12-2018 ರಂದು ಎರಡನೇ ಸುತ್ತಿನ ಲಸಿಕಾ ಕಾರ್ಯಕ್ರಮ ನಡೆಸಲಾಯಿತು. ಸಾಗರ ತಾಲ್ಲೂಕಿನಾಂದ್ಯಂತ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸುವ ಆಂದೋಲನವನ್ನು ಜಿಲ್ಲಾ ಆರೋಗ್ಯ ಶಿಕ್ಷಣ ತಂಡದಿಂದ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಂದಕ್ಕಿತ ಹೆಚ್ಚು ಬಾರಿ ಹಮ್ಮಿಕೊಳ್ಳಲಾಯಿತು, ಅರಳಗೂಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 3 ಅತ್ಯಾಧುನಿಕ ಮಾದರಿಯ 108 ಆಂಬುಲೆನ್ಸಗಳನ್ನು ನಿಯೋಜನೆಗೊಳಿಸಿ ರೋಗಿಗಳ ತುರ್ತು ಚಿಕಿತ್ಸೆ ಮತ್ತು ತಜ್ಞ ವೈದ್ಯಕೀಯ ನೆರವಿಗೆ ಕ್ರಮ ಕೈಗೊಳ್ಳಲಾಯಿತು ಸಾಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಾಗೂ ಶಿವಮೊಗ್ಗ ಸಿಮ್ಸ ಮೆಡಿಕಲ್ ಕಾಲೇಜಿನಲ್ಲಿ ಮಂಗನ ಕಾಯಿಲೆ ರೋಗಿಗಳಿಗಾಗಿಯೇ ವಿಶೇಷ ಪ್ರತ್ಯೇಕ ವಾರ್ಡನ್ನು ಮೀಸಲಿಡಲಾಯಿತು. ರೋಗಿಗಳ ಹೆಚ್ಚುವರಿ ಚಿಕ್ಕಿತ್ಸೆಗಾಗಿ ರೋಗಿಗಳನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ದಾಖಲು ಮಾಡಲು ಹಾಗೂ ಉಚಿತವಾಗಿ ಚಿಕಿತ್ಸೆ ಸಿಗುವಂತೆ ಕ್ರಮ ಕೈಗೂಳ್ಳಲಾಯಿತು.<br><br>ದಿನಾಂಕ:04-01-2019 ರಂದು ಮಾನ್ಯ ಜಿಲ್ಲಾಧಿಕಾರಿಗಳವರು ಶಿವಮೊಗ್ಗ, ಜಿಲ್ಲಾ ಆಕುಕ ಅಧಿಕಾರಿಗಳು, ಉಪ ನಿರ್ದೇಶಕರು ವಿಡಿಎಲ್, ಸಾಗರ ಕ್ಷೇತ್ರ ಕಛೇರಿಯ ವೈದ್ಯಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ನಿರ್ದೇಶನಾಲಯದ ರಾಜ್ಯ ಕಣ್ಗಾವಲು ಘಟಕದ ಉಪ ನಿರ್ದೇಶಕರು ಹಾಗೂ ಸಿಬ್ಬಂದಿಯವರು ಸ್ಥಳ ಭೇಟಿ ನೀಡಿ ಮುಕ್ಕಾಂ ಮಾಡಿರುತ್ತಾರೆ. ಸ್ಥಳೀಯರಿಗೆ ಆರೋಗ್ಯ ಶಿಕ್ಷಣದ ಮಾಹಿತಿಯನ್ನು ನೀಡಲಾಯಿತು. |

ಮಾನ್ಯ ಜಿಲ್ಲಾಧಿಕಾರಿಗಳವರು, ಕಂದಾಯ, ಶಿಕ್ಷಣ, ಅರಣ್ಯ, ಪಶು ಸಂಗೋಪನಾ, ಸಮಾಜ ಕಲ್ಯಾಣ ಇಲಾಖೆಗಳೊಂದಿಗೆ ಕಾಯಿಲೆಯ ನಿಯಂತ್ರಣಕ್ಕೆ ಬೇಕಾದ ಎಲ್ಲಾ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲು ತಂಡವನ್ನು ರಚಿಸಲಾಯಿತು.

ಜನವರಿ ಮೊದಲನೇ ವಾರದಿಂದ ಮನುಷ್ಯರ ರಕ್ತದ ಮಾದರಿಗಳ ಕೆಎಫ್‌ಡಿ ಪರೀಕ್ಷೆಯನ್ನು ಶಿವಮೊಗ್ಗದ ವಿಡಿಎಲ್‌ನಲ್ಲಿ ನಡೆಸಲು ಕ್ರಮ ಕೈಗೊಳ್ಳಲಾಯಿತು ಇದಕ್ಕೆ ಅವಶ್ಯಕವಿರುವ ಪ್ರಯೋಗಶಾಲಾ ತಂತ್ರಜ್ಞರು ಹಾಗೂ ಇತರೇ ಸಿಬ್ಬಂದಿಗಳನ್ನು ವರ್ಗಾವಣೆ/ನಿಯೋಜನೆ ಮಾಡಲಾಯಿತು.

ತಾಲ್ಲೂಕಿನಾಂದ್ಯಂತ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಉಣ್ಣೆಗಳ ಮಾದರಿಗಳನ್ನು ಸಂಗ್ರಹಿಸಲು ವಿಶೇಷ ತಂಡಗಳನ್ನು ರಚಿಸಿ ತೀವ್ರ ಉಣ್ಣೆ ಸರ್ವೇಕ್ಷಣಾ ಕ್ರಮವನ್ನು ಕೈಗೊಳ್ಳಲಾಯಿತು.

ಮಂಗ ಹಾಗೂ ಉಣ್ಣೆಗಳ ಮಾದರಿಗಳನ್ನು ಎನ್‌ಐವಿ ಪೂನಾ ಇಲ್ಲಿಗೆ ತುರ್ತಾಗಿ ಕಳುಹಿಸಿ ಪರೀಕ್ಷಿಸಿ ವರದಿ ಪಡೆಯುವಂತೆ ಕ್ರಮ ವಹಿಸಲಾಯಿತು.

ಹಾಲಿ ಸಾಗರ ತಾಲ್ಲೂಕಿನಲ್ಲಿ ಕಾರ್ಗಲ್ ಹಾಗೂ ಅರಳಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಮಾತ್ರ ಕೆಎಫ್‌ಡಿ ರೋಗಿಗಳು ವರದಿಯಾಗುತ್ತಿದೆ.ಇಲ್ಲಿಯೋ ಸಹ 5 ಕ್ಕಿಂತ ಹೆಚ್ಚು ಕೆಎಫ್‌ಡಿ ರೋಗಿಗಳು ವರದಿಯಾದ ಮಜಿರೆ ಗ್ರಾಮಗಳ ಮೇಲೆ ವಿಶೇಷ ನಿಗಾ ವಹಿಸಲಾಗಿದೆ. 6 ಆರೋಗ್ಯ ಸಹಾಯಕ /ಆಶಾ ಕಾರ್ಯಕರ್ತೆಯರ ತಂಡಗಳನ್ನು ರಚಿಸಿ ಪ್ರತಿ ಮನೆಗಳಿಗೂ ಪ್ರತಿ ದಿನವೂ ಬೇಟಿ ನೀಡಿ ಯಾವುದೇ ಜ್ವರ ಪೀಡಿತ ರೋಗಿಗಳಿದ್ದರೂ ಅವರ ರಕ್ತದ ಮಾದರಿಯನ್ನು ಸಂಗ್ರಹಿಸಿ ಅವಶ್ಯಕವಿದ್ದಲ್ಲಿ ಮೇಲ್ದರ್ಜೆಯ ಆಸ್ಪತ್ರೆಗಳಿಗೆ

| | | |
|---|---|---|
| | | ತಕ್ಷಣವೇ ಸಾಗಿಸುವ ವ್ಯವಸ್ಥೆಯನ್ನು ನಿರಂತರವಾಗಿಡಲಾಗಿದೆ. ಉಣ್ಣಗಳ ಸಾಂದ್ರತೆ ಹೆಚ್ಚಿರುವ ಪ್ರದೇಶ/ಕಾಡು/ತೋಟ/ಗದ್ದೆ/ಇವುಗಳನ್ನು ಗುರುತಿಸಿ ಉಣ್ಣಿಗಳ ನಿಯಂತ್ರಣಕ್ಕಾಗಿ **Mist Blower** ಗಳ ಮುಖಾಂತರ ಮೇಲಾಥಿಯಾನ್ ಹಾಗೂ ಇತರೇ ಉಣ್ಣಿ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಪಶು ಸಂಗೋಪನಾ ಇಲಾಖೆಯ ಸಹಕಾರದಿಂದ ದನಗಳ ಮೈಮೇಲಿರುವ ಉಣ್ಣಿಗಳನ್ನು ನಾಶ ಪಡಿಸಲು ಫ್ಲೂ ಮೆಥ್ರಿನ್ ಔಷಧಿಯನ್ನು ಸಿಂಪಡಿಸಲು ಕ್ರಮ ಕೈಗೊಳ್ಳಲಾಯಿತು.<br><br>ಅರಣ್ಯ ಇಲಾಖೆಯವರು ಕಾಡಿನಲ್ಲಿ ವಾಸವಿರುವ ಜನರಿಗೆ ಅವರ ಮನೆಗಳ ಸುತ್ತ ಸಿಂಪಡಿಸಲು ಸುಣ್ಣ ಹಾಗೂ ಇತರೇ ಉಣ್ಣಿ ವಿಕರ್ಷಕಗಳನ್ನು ವಿತರಿಸಲು ಕ್ರಮ ಕೈಗೊಂಡಿರುತ್ತಾರೆ. ಅರಣ್ಯಗಳಲ್ಲಿ ಸಾಗುವ ರಸ್ತೆಗಳಲ್ಲಿ ಮಂಗನ ಕಾಯಿಲೆ ಬಗ್ಗೆ ಮಾಹಿತಿ ನೀಡುವ ಸೂಚನಾ ಫಲಕಗಳನ್ನು ಪ್ರದರ್ಶಿಸಲಾಗಿದೆ.<br><br>ಇಲ್ಲಿಯವರೆಗೂ ಸಾಗರ ತಾಲ್ಲೋಕಿನಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಕೆಎಫ್‌ಡಿ ರೋಗಿಗಳು ಕಂಡುಬಂದಿದ್ದು, ಅರಳಗೋಡು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ 136 ಕಾರ್ಗಲ್ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ 8, ಶಿರವಂತೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ 2, ಹಾಗೂ ತಾಳಗುಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ 1 ಒಟ್ಟು 147 ಪ್ರಕರಣಗಳು ಇಲ್ಲಿಯವರೆಗೂ ವರದಿಯಾಗಿರುತ್ತದೆ, 6 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಮಂಗ/ಉಣ್ಣಿಗಳ ಮಾದರಿಗಳಲ್ಲಿ ಕೆಎಫ್‌ಡಿ ಸೋಂಕಿರುವುದು ಕಂಡುಬಂದು ಒಟ್ಟು 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಭಾಧಿತವಾಗಿವೆ. |

| | | |
|---|---|---|
| | | ಫೇಬ್ರವರಿ 2019 ಅಂತ್ಯದವರೆಗೂ 44,000 ಕ್ಕೂ ಅಧಿಕ ಕೆಎಫ್‌ಡಿ ಲಸಿಕಾ ವರಸೆಗಳನ್ನು ನೀಡಲಾಗಿದೆ. 35,000 ಕ್ಕೂ ಹೆಚ್ಚು ಡಿಎಂಪಿ ತೈಲದ ಬಾಟಲಗಳನ್ನು ವಿತರಣೆಯಾಗಿದ್ದು, ಇದರ ಕೊರತೆ ಕಂಡುಬರದಂತೆ ಸೂಕ್ತ ಕ್ರಮ ಕೈಗೊಂಡು ಹೆಚ್ಚಿನ ದಾಸ್ತಾನು ಸಂಗ್ರಹಿಸಿಡಲಾಗಿದೆ. ಇಲ್ಲಿಯವರೆಗೂ ತಾಲ್ಲೋಕಿನಲ್ಲಿ 9 ರೋಗಿಗಳು ಕೆಎಫ್‌ಡಿ ಕಾಯಿಲೆಯಿಂದ ಮರಣ ಹೊಂದಿರುವುದು ದೃಢಪಟ್ಟಿರುತ್ತದೆ.<br><br>**ತೀರ್ಥಹಳ್ಳಿ ತಾಲ್ಲೂಕು :**<br>ಈ ಹಿಂದಿನಿಂದಲೂ ತೀರ್ಥಹಳ್ಳಿ ಕೆಎಫ್‌ಡಿ ಬಾಧಿತ ಪ್ರದೇಶವಾದ್ದರಿಂದ 2018-19 ನೇ ಸಾಲಿನಲ್ಲಿ ಅಕ್ಟೋಬರ್ - ನವೆಂಬರ್ ತಿಂಗಳಲ್ಲಿ ಕೆಎಫ್‌ಡಿ ಲಸಿಕಾ ಅಭಿಯಾನದಡಿಯಲ್ಲಿ ಸುಮಾರು 19,000 ಫಲಾನುಭವಿಗಳಿಗೆ ಲಸಿಕೆ ನೀಡಲಾಗಿದೆ. ಸುಮಾರು 3000 ಡಿಎಂಪಿ ತೈಲದ ಬಾಟಲ್‌ಗಳನ್ನು ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ವಿತರಿಸಲಾಗಿರುತ್ತದೆ.<br><br>ದಿನಾಂಕ 21-12-2018 ರಂದು ತೀರ್ಥಹಳ್ಳಿ ತಾಲ್ಲೋಕಿನ ಕೋಣಂದೂರು ಹಾಗೂ ಯೋಗೀಮಳಲೀ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಕೆಎಫ್‌ಡಿ ಪ್ರಕರಣಗಳು ಕಂಡುಬಂದಿರುತ್ತವೆ,ಆದ್ದರಿಂದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಜ್ವರ ಸಮೀಕ್ಷೆಗಳನ್ನು ನಿರಂತರವಾಗಿ ನಡೆಸಿ ಹೆಚ್ಚುವರಿ ಡಿಎಂಪಿ ತೈಲವನ್ನು ವಿತರಿಸಲಾಗಿದೆ. ಜನರಿಗೆ ಆರೋಗ್ಯ ಶಿಕ್ಷಣ ನೀಡಿ ಉಳಿದ ಫಲಾನುಭವಿಗಳಿಗೂ ಲಸಿಕೆಯನ್ನು ನೀಡಲಾಗಿದೆ. ಜನವರಿ ಮಾಹೆಯ ಮೊದಲವಾರದಲ್ಲಿ ಮಂಡಗದ್ದೆ ಪ್ರಾಥಮಿಕ ಆರೋಗ್ಯ ಕೇಂದ್ರದ ತೋಟದ ಕೊಪ್ಪ ಗ್ರಾಮದಲ್ಲಿ ಮಂಗನ ಕಾಯಿಲೆ ಪ್ರಕರಣಗಳು ಕಂಡು ಬಂದಿರುತ್ತವೆ. ತಕ್ಷಣವೇ ಅಂತರ ಇಲಾಖಾ ಸಮನ್ವಯ ಸಭೆಗಳನ್ನು |

| | | |
|---|---|---|
| | | ನಡೆಸಿ ಜನರಿಗೆ ಕಾಯಿಲೆ ಬಗ್ಗೆ ಮಾಹಿತಿ ನೀಡಲಾಗಿದೆ. 4 ತಂಡಗಳನ್ನು ರಚಿಸಿ ತೋಟದ ಕೊಪ್ಪ ಗ್ರಾಮದ ಪ್ರತಿ ಮನೆಗೂ ಪ್ರತಿ ದಿನ ಭೇಟಿ ನೀಡಿ ಜ್ವರ ಸಮೀಕ್ಷೆ ನಡೆಸಲು ಕ್ರಮ ವಹಿಸಲಾಗಿದೆ. ಉಳಿದ ಫಲಾನುಭವಿಗಳಿಗೂ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರಿಗೆ 1500 ವರಸೆ ಲಸಿಕೆಯನ್ನು ನೀಡಲಾಗಿದೆ. ಸಿಂಗನಬಿದ್ರೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಸುಮಾರು 2000ಕ್ಕೂ ಅಧಿಕ ಡಿಎಂಪಿ ತೈಲವನ್ನು ವಿತರಿಸಲಾಗಿದೆ. ಶಿವಮೊಗ್ಗದ **IMA** ಸಂಘದ ಸಹಯೋಗದೊಂದಿಗೆ ಪ್ರತಿದಿನವೂ ತಜ್ಞ ವೈದ್ಯರ ತಂಡವು ಬೇಟಿ ನೀಡುವಂತೆ ವ್ಯವಸ್ಥೆ ಮಾಡಲಾಗಿದೆ.<br><br>ಜನವರಿ ಮಾಹೆಯ ಮೂರನೇ ವಾರದಲ್ಲಿ ಕಟ್ಟೆ ಹಕ್ಲು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಹೆದ್ದೂರು ಹಾಗೂ ಶೇಡಗಾರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಂಗನ ಕಾಯಿಲೆ ಪ್ರಕರಣಗಳು ಕಂಡುಬರಲು ಅಲ್ಲಿಯೋ ಸಹ 8 ಆರೋಗ್ಯ ತಂಡಗಳನ್ನು ರಚಿಸಿ ಗ್ರಾಮದ ಪ್ರತಿ ಮನೆಗೂ ಪ್ರತಿ ದಿನ ಭೇಟಿ ನೀಡಿ ಜ್ವರ ಸಮೀಕ್ಷೆ ನಡೆಸಲು ಕ್ರಮ ವಹಿಸಲಾಗಿದೆ. ಉಳಿದ ಫಲಾನುಭವಿಗಳಿಗೂ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರಿಗೆ 2500 ವರಸೆ ಲಸಿಕೆಯನ್ನು ನೀಡಲಾಗಿದೆ. ಸಿಂಗನಬಿದ್ರೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಸುಮಾರು 2000ಕ್ಕೂ ಅಧಿಕ ಡಿಎಂಪಿ ತೈಲವನ್ನು ವಿತರಿಸಲಾಗಿದೆ.ಶಿವಮೊಗ್ಗದ **IMA** ಸಂಘದ ಸಹಯೋಗದೊಂದಿಗೆ ಪ್ರತಿದಿನವೂ ತಜ್ಞ ವೈದ್ಯರ ತಂಡವು ಬೇಟಿ ನೀಡುವಂತೆ ವ್ಯವಸ್ಥೆ ಮಾಡಲಾಗಿದೆ. ಇದಷ್ಟೇ ಅಲ್ಲದೇ ತಾಲ್ಲೂಕಿನ ಕನ್ನಂಗಿ, ಬೆಟ್ಟಬಸವಾನಿ, ಮಾಳೂರು ಹಾಗೂ ಆಗುಂಬೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಗಳಲ್ಲಿ ದೃಢೀಕೃತ ರೋಗಿಗಳು ಕಂಡು ಬಂದಿದ್ದು ಮೇಲೆ ಕಾಣಿಸಿದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. |

ಈ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣದ ತಂಡದಿಂದ ವಿಶೇಷ ತಂಡಗಳ ಸಹಯೋಗದೊಂದಿಗೆ ಆರೋಗ್ಯ ಶಿಕ್ಷಣ ಕಾರ್ಯ ಕ್ರಮಗಳನ್ನು ಗ್ರಾಮ ಪಂಚಾಯತ್ ಹಾಗೂ ಹಳ್ಳಿಗಳ ಮಟ್ಟದಲ್ಲಿ ಹಮ್ಮಿಕೊಳ್ಳಲಾಯಿತು. ತೀರ್ಥಹಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೆಎಫ್‌ಡಿ ರೋಗಿಗಳಿಗೆಂದು ವಿಶೇಷ ವಾರ್ಡ್‌ನ್ನು ಸಿದ್ಧಗೊಳಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗೆಂದು ದೊಡ್ಡ ಆಸ್ಪತ್ರೆಗಳಿಗೆ ತೆರಳುವ ರೋಗಿಗಳಿಗೆ ಉಚಿತಾವಾದ ಆಂಬುಲೆನ್ಸ ವ್ಯವಸ್ಥೆಯನ್ನು ಮಾಡಲಾಗಿದೆ.

ತಾಲ್ಲೊಕಿನಲ್ಲಿ ಇಲ್ಲಯವರೆಗೂ 35,000 ವರಸೆ ಲಸಿಕೆಗಳನ್ನು ನೀಡಲಾಗಿದೆ ಹಾಗೂ 17,000ಕ್ಕೊ ಹೆಚ್ಚು ಡಿಎಂಪಿ ತೈಲದ ಬಾಟಲ್‌ಗಳನ್ನು ವಿತರಿಸಲಾಗಿದ್ದು, ಡಿಎಂಪಿ ತೈಲದ ದಾಸ್ತಾನು ಸಹ ಸಾಕಷ್ಟು ಪ್ರಾಮಾಣದಲ್ಲಿ ದಾಸ್ತಾನು ಇರುತ್ತದೆ.

ಹಾಲಿ ಇಲ್ಲಿಯವರಗೂ ತಾಲ್ಲೊಕಿನಲ್ಲಿ 46 ಕೆಎಫ್‌ಡಿ ಪ್ರಕರಣಗಳು ಕಂಡುಬಂದಿದ್ದು 4 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಮಂಗ/ಉಣ್ಣೆ ಗಳಲ್ಲಿ ಸೊಂಕಿರುವುದು ಕಂಡು ಬಂದಿರುತ್ತದೆ. ಇಬ್ಬರು ವ್ಯಕ್ತಿಗಳು ಕೆಎಫ್‌ಡಿ ಕಾಯಿಲೆಯಿಂದ ಮರಣ ಹೊಂದಿರುತ್ತಾರೆ.

**ಹೊಸನಗರ ತಾಲ್ಲೂಕು :**

ಈ ಹಿಂದಿನಿಂದಲೂ ಹೊಸನಗರ ಕೆಎಫ್‌ಡಿ ಭಾಧಿತ ಪ್ರದೇಶವಾದ್ದರಿಂದ 2018-19 ನೇ ಸಾಲಿನಲ್ಲಿ ಅಕ್ಟೂಬರ್ - ನವೆಂಬರ್ ತಿಂಗಳಲ್ಲಿ ಕೆಎಫ್‌ಡಿ ಲಸಿಕಾ ಅಭಿಯಾನದಡಿಯಲ್ಲಿ ಸುಮಾರು 5,500

| | | |
|---|---|---|
| | | ಫಲಾನುಭವಿಗಳಿಗೆ ಲಸಿಕೆ ನೀಡಲಾಗಿದೆ. ಸುಮಾರು 1000 ಡಿಎಂಪಿ ತೈಲದ ಬಾಟಲ್‌ಗಳನ್ನು ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ವಿತರಿಸಲಾಗಿರುತ್ತದೆ.<br><br>ಫೆಬ್ರವರಿ ಮಾಹೆಯ ಎರಡನೇ ವಾರದಲ್ಲಿ ಹೊಸನಗರ ತಾಲ್ಲೋಕಿನ ಹರಿದ್ರಾವತಿ ಪ್ರಾಥಮಿಕ ಆರೋಗ್ಯ ಕೇಂದ್ರದ ಹರತಾಳ್ ಗ್ರಾಮದ ವ್ಯಾಪ್ತಿಯಲ್ಲಿ ಕೆಎಫ್‌ಡಿ ಪ್ರಕರಣ ಕಂಡುಬಂದಿರುತ್ತವೆ. ಆದ್ದರಿಂದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಜ್ವರ ಸಮೀಕ್ಷೆಗಳನ್ನು ನಿರಂತರವಾಗಿ ನಡೆಸಿ ಹೆಚ್ಚುವರಿ ಡಿಎಂಪಿ ತೈಲವನ್ನು ವಿತರಿಸಲಾಗಿದೆ. ಜನರಿಗೆ ಆರೋಗ್ಯ ಶಿಕ್ಷಣ ನೀಡಿ ಉಳಿದ ಫಲಾನುಭವಿಗಳಿಗೂ ಲಸಿಕೆಯನ್ನು ನೀಡಲಾಗಿದೆ. ಈ ಪ್ರದೇಶಗಳು ಸಾಗರ ತಾಲ್ಲೋಕಿನ ಹತ್ತಿರವಿರುವುದರಿಂದ ಆರೋಗ್ಯ ತಂಡವನ್ನು ರಚಿಸಿ ವಿಶೇಷ ನಿಗಾವಹಿಸಲಾಗಿದೆ. ಈ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣದ ತಂಡದಿಂದ ವಿಶೇಷ ತಂಡಗಳ ಸಹಯೋಗದೊಂದಿಗೆ ಆರೋಗ್ಯ ಶಿಕ್ಷಣ ಕಾರ್ಯ ಕ್ರಮಗಳನ್ನು ಗ್ರಾಮ ಪಂಚಾಯಿತ್ ಹಾಗೂ ಹಳ್ಳಿಗಳ ಮಟ್ಟದಲ್ಲಿ ಹಮ್ಮಿಕೊಳ್ಳಲಾಯಿತು.<br><br>ಹೊಸನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೆಎಫ್‌ಡಿ ರೋಗಿಗಳಿಗೆಂದು ವಿಶೇಷ ವಾಡನ್ನು ಸಿದ್ಧಗೂಳಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗೆಂದು ದೊಡ್ಡ ಆಸ್ಪತ್ರೆಗಳಿಗೆ ತೆರಲುವ ರೋಗಿಗಳಿಗೆ ಉಚಿತಾವಾದ ಆಂಬ್ಯಲೆನ್ಸ ವ್ಯವಸ್ಥೆಯನ್ನು ಮಾಡಲಾಗಿದೆ.<br><br>ತಾಲ್ಲೋಕಿನಲ್ಲಿ ಇಲ್ಲಿಯರೆಗೂ 9,000 ವರಸೆ ಲಸಿಕೆಗಳನ್ನು ನೀಡಲಾಗಿದೆ. |

ಹಾಲಿ ಇಲ್ಲಿಯವರಗೂ ತಾಲ್ಲೋಕಿನಲ್ಲಿ 2 ಕೆಎಫ್‌ಡಿ ಪ್ರಕರಣಗಳು ಕಂಡುಬಂದಿದ್ದು 2 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಮಂಗ/ಉಣ್ಣೆ ಗಳಲ್ಲಿ ಸೋಂಕಿರುವುದು ಕಂಡು ಬಂದಿರುತ್ತದೆ. ಇಲ್ಲಿಯವರೆಗೂ ತಾಲ್ಲೋಕಿನಲ್ಲಿ ಯಾರೂ ಸಹ ಕೆಎಫ್‌ಡಿ ಕಾಯಿಲೆಯಿಂದ ಮರಣ ಹೊಂದಿರುವುದಿಲ್ಲಾ.

ಇದಲ್ಲದೇ ಜಿಲ್ಲೆಯಲ್ಲಿ ಸೊರಬ ತಾಲ್ಲೋಕಿನ 1 ಪ್ರಾಥಮಿಕ ಆರೋಗ್ಯ ಕೇಂದ್ರ ಭದ್ರಾವತಿ ತಾಲ್ಲೋಕಿನ 2 ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶಿಕಾರಿಪುರ ತಾಲ್ಲೋಕಿನ 1 ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಮಂಗ/ಉಣ್ಣೆಗಳಲ್ಲಿ ಸೋಂಕಿರುವುದು ಕಂಡುಬಂದಿರುತ್ತದೆ.

2018-19 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮಂಗನ ಕಾಯಿಲೆಯ ಚಿತ್ರಣ :-

- ಕೆಎಫ್‌ಡಿ ಭಾಧಿತ ರೋಗಿಗಳು 195 ,
- ಕೆಎಫ್‌ಡಿ ಭಾಧಿತ ತಾಲ್ಲೂಕುಗಳು -6
- ಕೆಎಫ್‌ಡಿ ಸೊಂಕಿತ ಮಂಗಗಳ ಮರಣ -19
- ಕೆಎಫ್‌ಡಿ ಸೊಂಕಿತ ಉಣ್ಣೆಗಳ ಸಂಗ್ರಹ - 34
- ಒಟ್ಟು ನೀಡಿದ ಲಸಿಕಾ ವರಸೆಗಳು 1,02000
- ಕೆಎಫ್‌ಡಿಯಿಂದಾದ ಮರಣ ಪ್ರಕರಣಗಳು 10

ಸಾಗರ ತಾಲ್ಲೂಕಿನ ಅರಳಗೋಡು ಗ್ರಾಮದಲ್ಲಿ **KFD**ಯಿಂದ ಈ ಕೆಳಕಂಡಂತೆ ಮರಣ ಹೊಂದಿರುತ್ತಾರೆ.

**2018–19ನೇ ಸಾಲಿನಲ್ಲಿ KFD ಯಿಂದ ಮರಣದ ಪ್ರಕರಣಗಳ ಪಟ್ಟಿ**

| ಕ್ರ. ಸಂ | ಹೆಸರು | ವಯಸ್ಸು | ಲಿಂಗ | ಮರಣಹೊಂದಿದ ದಿನಾಂಕ | ಷರಾ |
|---|---|---|---|---|---|
| 1. | ಪಾರ್ಶನಾಥ್ | 47 | ಗಂಡಸು | 26.12.2018 | **KFD** ದೃಢಪಟ್ಟಿದ್ದು, ಮಣಿಪಾಲ್ **KMC** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |
| 2. | ಕೃಷ್ಣಪ್ಪ | 52 | ಗಂಡಸು | 28.12.2018 | **KFD** ದೃಢಪಟ್ಟಿದ್ದು, ಶಿವಮೊಗ್ಗದಲ್ಲಿ ಮರಣ ಹೊಂದಿರುತ್ತಾರೆ. |
| 3. | ಮಂಜುನಾಥ್ | 23 | ಗಂಡಸು | 01.01.2019 | **KFD** ದೃಢಪಟ್ಟಿದ್ದು, ಶಿವಮೊಗ್ಗದಲ್ಲಿ ಮರಣ ಹೊಂದಿರುತ್ತಾರೆ. |
| 4. | ಲೋಕರಾಜು | 31 | ಗಂಡಸು | 02.01.2019 | **KFD** ದೃಢಪಟ್ಟಿದ್ದು, ಮಂಗಳೂರು **AG** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |
| 5. | ಶ್ವೇತ | 17 | ಹೆಂಗಸು | 05.01.2019 | **KFD** ದೃಢಪಟ್ಟಿದ್ದು, **NH** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |
| 6. | ರಾಮಮ್ಮ | 48 | ಹೆಂಗಸು | 04.01.2019 | **KFD** ದೃಢಪಟ್ಟಿದ್ದು, ಶಿವಮೊಗ್ಗದಲ್ಲಿ ಮರಣ ಹೊಂದಿರುತ್ತಾರೆ. |
| 7. | ಸವಿತ | 40 | ಹೆಂಗಸು | 14.01.2019 | **KFD** ದೃಢಪಟ್ಟಿದ್ದು, ಮಣಿಪಾಲ್ **KMC** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |
| 8. | ಲಕ್ಷ್ಮೀದೇವಿ | 82 | ಹೆಂಗಸು | 18.01.2019 | **KFD** ದೃಢಪಟ್ಟಿದ್ದು, ಮಣಿಪಾಲ್ **KMC** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |
| 9. | ಪೂರ್ಣಿಮಾ | 38 | ಹೆಂಗಸು | 02.03.2019 | **KFD** ದೃಢಪಟ್ಟಿದ್ದು, ಮಣಿಪಾಲ್ **KMC** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |

ತೀರ್ಥಹಳ್ಳಿ ತಾಲ್ಲೂಕಿನ ತೋಟದಕೊಪ್ಪ ಗ್ರಾಮದಲ್ಲಿ ಹಾಗೂ ಬೆಟ್ಟಬಸವಾನಿ ಗ್ರಾಮದಲ್ಲಿ **KFD**ಯಿಂದ ಈ ಕೆಳಕಂಡಂತೆ ಮರಣ ಹೊಂದಿರುತ್ತಾರೆ.

| ಕ್ರ. ಸಂ | ಹೆಸರು | ವಯಸ್ಸು | ಲಿಂಗ | ಮರಣಹೊಂದಿದ ದಿನಾಂಕ | ಷರಾ |
|---|---|---|---|---|---|
| 1. | ಲಚ್ಚುಪೂಜಾರಿ | 78 | ಗಂಡಸು | 01.03.2019 | **KFD** ದೃಢಪಟ್ಟಿದ್ದು, ಮಣಿಪಾಲ್ **KMC** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |
| 2. | ರಾಜು | 50 | ಗಂಡಸು | 06.01.2019 | **KFD** ದೃಢಪಟ್ಟಿದ್ದು, ಮಣಿಪಾಲ್ **KMC** ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. |

ಶಿವಮೊಗ್ಗ, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು, ವೈಧ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಚರ್ಚಿಸಿದಾಗ **KFD** ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಪಡೆಯಲಾಯಿತು.

- Kyasanur Forest Disease is one of tick-borne associated diseases of flaviviruses caused by infected tick bite of *Haemaphysalis spingera*. Kyasanur Forest Disease Virus (KFDV) falls in mammalian tickborne virus group, belonging to family *Flaviviridae*, genus *Flavivirus*. It is principally transmitted to humans and animals by tick vector *Haemaphysalis spinigera*.

- Kyasanur Forest Disease Virus is classified in risk group 4 pathogens and causes endemic disease whose ecology and epidemiology is unpredictable because it is a forest borne disease and

| | | |
|---|---|---|
| | | involves different vertebrate species (including monkeys, shrews, bats, birds, and small rodents) for its transmission cycle.<br><br>➢ As the KFDV reservoir mainly exists in the jungle, controlling the disease emergence becomes an onerous task.<br><br>➢ Currently, there is a dearth of co-infection studies linked to KFDV but the incidence of co-infection has recently been reported to be high among ticks and there exists the possibility of KFDV being co-infecting ticks in synergism with other infectious agents.<br><br>➢ Infected nymphs and larvae are shed in the forest, mainly by the monkeys, rats, shrews, porcupines, squirrels, and probably a few birds that form enzootic foci. Destruction of infected ticks would necessitate control of ticks throughout the entire forested area, but is not technically and economically feasible. This is the main reason why, once focus of this disease becomes established in any biotope, it cannot be eliminated easily.<br><br>➢ People are educated as not to enter forest in and around areas of monkey deaths. But because of socioeconomic reasons this cannot be limited.<br><br>➢ In certain areas there is collection of dry leaves which are stored in backyard. Though this is discouraged as risk of ticks in vicinity of houses increases it is difficult to abort these practices. |

| | | |
|---|---|---|
| | | ➢ Preventive measures include use of protective gear which include gum boots, full clothing, gloves by persons who work in fields and enter forests with tick preponderance. But the majority of these population are labour class who do not use these protective gear either due to economic status or due to lack of knowledge feel they are not comfortable to work wearing these gear.<br><br>➢ Application of Dimethyl phthalate (DMP oil) supplied freely by government or DEET is required for persons with risk of exposure to tick bites. This application should be done over exposed parts which are susceptible for tick bites. This application is to repeated every 2-3 hours as effectiveness wanes over time.<br><br>➢ As association of human infections in the vicinity of dead monkeys has been shown, and the use of spray insecticides has been recommended in a 50-m radius around a dead monkey. However, although recommendations have been made for spraying of insecticides around the place of monkey death, it is technically difficult in certain inaccessible areas to transport the large volumes of water needed for the spray. At present malathion is used for dusting as per Standard operative procedures but other insecticides need to be studied as alternatives for this dusting technique.<br><br>➢ For significantly reducing the spread of KFD in Karnataka five districts, which are endemic, formalin-inactivated tissue culture vaccine has been exploited since 1990. |

ಕರ್ನಾಟಕ ಸರ್ಕಾರ

ಸಂಖ್ಯೆ: ಹಿಂವಕ 203 ಸಕಾ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ, ಬೆಂಗಳೂರು
ದಿನಾಂಕ: 19.03.2019

# ಟಿಪ್ಪಣಿ

ವಿಷಯ: ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಫೆಬ್ರವರಿ ಮತ್ತು ಮಾರ್ಚ್ ಮಾಹೆಯ ಸಂಕ್ಷಿಪ್ತ ಪ್ರವಾಸ ವರದಿ

ಉಲ್ಲೇಖ: ಸುತ್ತೋಲೆ ಸಂಖ್ಯೆ: ಸಿಆಸುಇ.19.ಇಸಪ.2018, ದಿನಾಂಕ: 11.07.2018

***

| ಕ್ರ.ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಮೊಹಮ್ಮದ್ ಮೊಹಸಿನ್, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 3 | ಬೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ:05.03.2019 ಮತ್ತು 06.03.2019 |

4. ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು:

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತೃಶ್ರೀ ಯೋಜನೆಯಡಿ ಗರ್ಭಿಣಿ ಮಹಿಳೆಯರಿಗೆ ಮೂರು ಹಂತದಲ್ಲಿ ತಲಾ 2 ಸಾವಿರ ರೂ.ಗಳಂತೆ ಒಟ್ಟು 6 ಸಾವಿರ ರೂ. ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಯಲ್ಲಿದ್ದು. ಈ ಯೋಜನೆಯ ಲಾಭ ಅರ್ಹ ಮಹಿಳೆಯರಿಗೆ ದೊರೆಯಲು ಅನುಕೂಲವಾಗುವಂತೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಪಡೆದು ಸಕಾಲಕ್ಕೆ ಈ ಸೌಲಭ್ಯ ಅವರಿಗೆ ದೊರೆಯುವಂತೆ ನೋಡಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಲಾಯಿತು.

ಈ ಯೋಜನೆಯಡಿ ಮುಂಬರುವ ಒಂದು ತಿಂಗಳ ಅವಧಿಯಲ್ಲಿ ಹತ್ತು ಸಾವಿರ ಅರ್ಹ ಫಲಾನುಭವಿಗಳ ಅರ್ಜಿ ಪಡೆಯುವ ಜೊತೆಗೆ ಅಂಗನವಾಡಿ ಕೇಂದ್ರಗಳಲ್ಲಿ ಈಗಾಗಲೇ ಮಾತೃಪೂರ್ಣ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಜಿಲ್ಲೆಯ ಅರ್ಹ ಗರ್ಭಿಣಿ ಮಹಿಳೆಯರನ್ನು ಈ ಯೋಜನೆಯಡಿ ಸೌಲಭ್ಯ ಕಲ್ಪಿಸಲು ಪ್ರಯತ್ನಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಈ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಗಂಭೀರವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಾಗೂ ಪಿಆರ್‌ಇಡಿ ಇಲಾಖೆ ಅಧಿಕಾರಿಗಳ ಮಧ್ಯೆ ಸಮನ್ವಯ ಕೊರತೆ ಕಾಣುತ್ತಿದ್ದು, ಈ ಹಿನ್ನಲೆಯಲ್ಲಿ ಇಬ್ಬರೂ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಬೇಕು. ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು ಈ ಕುರಿತು ಪರಿಶೀಲನೆ ನಡೆಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ನಿಗಮಗಳ ವ್ಯಾಪ್ತಿಯಲ್ಲಿ ಬರುವ ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆ ಮಾಡಲಾಗಿರುವ ಫಲಾನುಭವಿಗಳ ಮಾಹಿತಿ, ಈವರೆಗೆ ಕೊರೆಯಿಸಲಾದ ಕೊಳವೆಬಾವಿಗಳ ಮಾಹಿತಿ, ವಿವಿಧ ಸಲಕರಣೆ, ಸಾಮಗ್ರಿಗಳ ವಿತರಣೆ ಮತ್ತು ಯಂತ್ರಗಳಿಗೆ ವಿದ್ಯುತ್ ಸಂಪರ್ಕದ ಮಾಹಿತಿ ಸೇರಿದಂತೆ ಸದ್ಬಳಕೆಯಾಗಿರುವ ಅನುದಾನದ ವರದಿಯನ್ನು ಸಹ ಸಂಬಂಧಪಟ್ಟ ಅಧಿಕಾರಿಗಳು ಸಲ್ಲಿಸುವಂತೆ ಸೂಚನೆ ನೀಡಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗೆ ಸಂಬಂಧಪಟ್ಟಂತೆ ಸೂಕ್ತ ಪರಿಶೀಲನೆ ನಡೆಸಬೇಕು. ಈವರೆಗೆ ನೀಡಲಾದ ಅನುದಾನ, ಖರ್ಚಾಗದೇ ಉಳಿದಿರುವ ಬಗ್ಗೆ ಪರಿಶೀಲಿಸಬೇಕು. ಆಯುಷ್ ಇಲಾಖೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸಬೇಕು. ಪರಿಶಿಷ್ಟ ಜಾತಿ ಕಾಲೋನಿಗಳಿಗೆ ಮೂಲಸೌಕರ್ಯ ಕಲ್ಪಿಸಿರುವ ಬಗ್ಗೆ ಗಮನಿಸಬೇಕು. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾನೂನು ಪದವೀಧರರಿಗೆ ಪ್ರತಿ ಮಾಹೆ ನೀಡಲಾಗುವ 4 ಸಾವಿರ ರೂ. ಶಿಷ್ಯವೇತನ ಕುರಿತು ಸೂಕ್ತ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕಲ್ಪಿಸುವ ಕುರಿತು ಆಧಾರ್‌ಸೀಡಿಂಗ್ ಕಾರ್ಯ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಇತ್ತೀಚೆಗೆ ವಿಜಯಪುರದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಹಾಗೂ ಉದ್ಯೋಗಾವಕಾಶ ಲಭ್ಯವಾಗಿರುವ ಬಗ್ಗೆ ಸಮಗ್ರ ಅಂಕಿ-ಅಂಶಗಳನ್ನು ಸಂಗ್ರಹ ಮಾಡಬೇಕು. ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಉದ್ಯೋಗ ಲಭಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ತಿಳಿಸಲಾಯಿತು, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸುವಂತೆ ಸೂಚನೆ ನೀಡಲಾಯಿತು.

ಜಿಲ್ಲೆಯಲ್ಲಿ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಸೇರಿದಂತೆ ವಿವಿಧ ಸಮುದಾಯ ಭವನಗಳಿಗೆ ಜಮೀನು ಇದ್ದಲ್ಲಿ ತಕ್ಷಣ ಒದಗಿಸಬೇಕು. ಮಂಜೂರಾತಿಗಾಗಿ ಜಮೀನು ಇಲ್ಲದಿದ್ದಲ್ಲಿ ಹಾಗೂ ದಾಖಲಾತಿಗಳು ನೀಡದಿದ್ದಲ್ಲಿ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಅವಶ್ಯಕ ನೀರು ಪೂರೈಕೆ ಮಾಡಬೇಕು. ಮೇವಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಬಾಕಿ ಇರುವ ಪೋಡಿ ಪ್ರಕರಣಗಳನ್ನು ಶೀಘ್ರ ವಿಲೇವಾರಿಗೊಳಿಸುವಂತೆ ಸೂಚಿಸಲಾಯಿತು, ಸಾರಿಗೆ ಇಲಾಖೆಯಿಂದ ತಾಳಿಕೋಟೆ ಹಾಗೂ ಇಂಡಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಪಟ್ಟ ಸೂಕ್ತ ವರದಿಯನ್ನು ಸಲ್ಲಿಸುವಂತೆ ಸೂಚನೆ ನೀಡಲಾಯಿತು.

ಜಿಲ್ಲೆಯ ಎಲ್ಲ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಆಯಾ ತಾಲೂಕಾ ಮಟ್ಟದ ಅಧಿಕಾರಿಗಳೊಂದಿಗೆ ಸೂಕ್ತ ಸಮನ್ವಯತೆ ಸಾಧಿಸಬೇಕು. ಯಾವುದೇ ಪರಿಸ್ಥಿತಿಯಲ್ಲಿ ಅನುದಾನ ಲ್ಯಾಪ್ಸ್ ಆಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ತಿಳಿಸಲಾಯಿತು, ಅನುದಾನ ಲ್ಯಾಪ್ಸ್ ಮಾಡುವಂತಹ ಅಧಿಕಾರಿಗಳ ಬಗ್ಗೆ ಸರ್ಕಾರಕ್ಕೆ ಸೂಕ್ತ ವರದಿ ಸಲ್ಲಿಸಲಾಗುವುದು. ಇಂದಿನ ಸಭೆಗೆ ಗೈರು ಹಾಜರಾಗಿರುವ ಕೆಬಿಜೆಎನ್‌ಎಲ್ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ, ಶಂಕುಸ್ಥಾಪನೆ ಹಂತದಲ್ಲಿರುವ ಕಾಮಗಾರಿಗಳು, ಉದ್ಘಾಟನೆ ಹಂತದಲ್ಲಿರುವ ಕಾಮಗಾರಿಗಳು, ಆರಂಭವಾಗಿರುವ ಹಾಗೂ ಆರಂಭಿಸದೇ ಇರುವ ಕಾಮಗಾರಿಗಳ ಬಗ್ಗೆ ಎಲ್ಲ ಇಲಾಖಾಧಿಕಾರಿಗಳು ಎರಡು ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಯಿತು. ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು, ಗುರಿಗೆ ತಕ್ಕಂತೆ ಪ್ರಗತಿ ಸಾಧಿಸಬೇಕು. ಅನುದಾನ ಸಮರ್ಪಕವಾಗಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು. ಅದರಂತೆ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಜವಾಬ್ದಾರಿ ಹೊಂದಿರುವ ಪಿಆರ್‌ಇಡಿ, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹಾಗೂ ನಿರ್ಮಿತಿ ಕೇಂದ್ರದೊಂದಿಗೆ

| | | |
|---|---|---|
| | | - However, the immunity gained following vaccination is short lived; yearly boosters are suggested for about 5 successive years starting from the time when the latest case in the region was reported.<br><br>- The vaccine involves 2 doses given at an interval of 30 days. Effectiveness starts only after 60 days of first dose of vaccine. Complete immunity is developed only after administration of booster dose given after 9-12 months of 2nd dose of vaccine. But sero surveillance studies have not been done to determine actual efficacy of vaccine.<br><br>ಜಿಲ್ಲೆಯ ಅಂಕಿ ಅಂಶಗಳ ನೋಟದ ಬಗ್ಗೆ ಸಭೆಗೆ ಮಾಹಿತಿ ನೀಡಿದ ಜಂಟಿ ಕೃಷಿ ನಿರ್ದೇಶಕರು, ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 2237 ಮಿಲಿ ಮೀಟರ್ ಆಗಿದ್ದು, ಮಲೆನಾಡು ಪ್ರದೇಶಗಳನ್ನಾಗಿ ಸಾಗರ, ಹೊಸನಗರ, ತೀರ್ಥಹಳ್ಳಿ ಮತ್ತು ಸೊರಬ ತಾಲ್ಲೂಕುಗಳನ್ನಾಗಿಯೂ, ದಕ್ಷಿಣ ಅರೆ ಮಲೆನಾಡು ತಾಲ್ಲೂಕುಗಳನ್ನಾಗಿ ಶಿವಮೊಗ್ಗ, ಭದ್ರಾವತಿ ಮತ್ತು ಶಿಕಾರಿಪುರ ತಾಲ್ಲೂಕುಗಳನ್ನು ಗುರುತಿಸಲಾಗಿದೆ. ಜಿಲ್ಲೆಯ ಒಟ್ಟು ಸಾಗುವಳಿ ವಿಸ್ತೀರ್ಣ 2,62,267 ಹೆಕ್ಟೇರ್ ಪ್ರದೇಶಗಳಾಗಿದ್ದು, 1,36,529 ಹೆಕ್ಟೇರ್ ಪ್ರದೇಶಗಳು ನೀರಾವರಿಯಾಗಿರುತ್ತವೆ. 84,771 ಹೆಕ್ಟೇರ್ ಪ್ರದೇಶಗಳನ್ನು ಮಳೆ ಆಶ್ರಿತ ಪ್ರದೇಶಗಳೆಂದೂ, 2,27,708 ಹೆಕ್ಟೇರ್ ಪ್ರದೇಶಗಳನ್ನು ನಿವ್ವಳ ಬಿತ್ತನೆ ಪ್ರದೇಶಗಳೆಂದೂ, ಒಟ್ಟು 2,46,176 ಹೆಕ್ಟೇರ್ ಗಳಷ್ಟು ಒಟ್ಟು ಬಿತ್ತನೆ ಪ್ರದೇಶಗಳಾಗಿರುತ್ತವೆ ಎಂದು ತಿಳಿಸಿದರು. |

2018ನೇ ಸಾಲಿನಲ್ಲಿ ದಿನಾಂಕ: 31-12-2018ರವರೆಗಿನ ಶಿವಮೊಗ್ಗ ಜಿಲ್ಲೆಯಲ್ಲಿ ಜನವರಿ 1 ರಿಂದ ಮೇ 31ರವರೆಗೆ ಪೂರ್ವ ಮುಂಗಾರು ಮಳೆಯ ವಿವರವನ್ನು ಸಭೆಗೆ ಮಂಡಿಸುತ್ತಾ, ಸದರಿ ಸಾಲಿನಲ್ಲಿ 212 ಮಿ.ಮೀ ವಾಸ್ತವ ಮಳೆಗೆ ಎದುರಾಗಿ 147 ಮಿ.ಮೀ ಮಳೆಯಾಗಿರುತ್ತದೆ. ಅದೇ ರೀತಿ ಜೂನ್ 1 ರಿಂದ ಸೆಪ್ಟೆಂಬರ್ 30ರವರೆಗಿನ ಮುಂಗಾರು ಅವಧಿಯಲ್ಲಿ 1984 ಮಿ.ಮೀ ಮಳೆಯಾಗಬೇಕಾಗಿತ್ತು. ಆದರೆ 1889 ಮಿ.ಮೀ ಮಳೆಯಾಗಿರುತ್ತದೆ. ಅಕ್ಟೋಬರ್ 1 ರಿಂದ ಡಿಸೆಂಬರ್ 31 ರವರೆಗಿನ ಅವಧಿಯಲ್ಲಿ 116 ಮಿ.ಮೀ ವಾಸ್ತವ ಮಳೆಗೆ ಎದುರಾಗಿ 202 ಮಿ.ಮೀ ಮಳೆಯಾಗಿರುತ್ತದೆ ಎಂದು ತಿಳಿಸಿದರು.

ಶಿವಮೊಗ್ಗ ಜಿಲ್ಲೆಯಲ್ಲಿ 2018-19ನೇ ಸಾಲಿನಲ್ಲಿ ಅಕಾಲಿಕ ಮಳೆಯಿಂದ ಹಾನಿಯಾದ ಬೆಳೆ ಹಾನಿ ವಿವರವನ್ನು ಸಭೆಗೆ ಮಂಡಿಸುತ್ತಾ, ಜಿಲ್ಲೆಯಲ್ಲಿ 4220.48 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿಯಾಗಿದ್ದು, ರೂ.358.84 ಲಕ್ಷ ಪರಿಹಾರಕ್ಕೆ ಅರ್ಹವಾಗಿರುತ್ತದೆ. ಈ ಪೈಕಿ ತೋಟಗಾರಿಕಾ ಬೆಳೆಯು 10401.02 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದ್ದು, ರೂ. 1867.87 ಲಕ್ಷಗಳಷ್ಟು ಮೊತ್ತ ಪರಿಹಾರಕ್ಕೆ ಅರ್ಹವಾಗಿರುತ್ತದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಈವರೆಗೆ 14709 ರೈತರಿಗೆ ರೂ.8.60 ಕೋಟಿ ಪರಿಹಾರ ತಂತ್ರಾಂಶದಿಂದ ನೇರವಾಗಿ ಅವರ ಖಾತೆಗೆ ಜಮಾ ಆಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ಸಭೆಗೆ ತಿಳಿಸಿದರು.

ಜಮೀನುಗಳಲ್ಲಿ ಮರಳು ಜಮೆ ಆಗಿರುವ ಬಗ್ಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿಯವರು, ಹೊಸನಗರ ತಾಲ್ಲೂಕಿನ ನಗರ ಹೋಬಳಿಯಲ್ಲಿ ದಿನಾಂಕ: 12 ಮತ್ತು 13ನೇ ಜೂನ್ 2018 ರಂದು ಕ್ರಮವಾಗಿ 200.7 ಮತ್ತು

255.7 ಮಿ.ಮೀ ಮಳೆಯಾಗಿದ್ದು, ಈ ಪೈಕಿ 240 ಜನ ರೈತರ 83.3 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಮತ್ತು 81 ಜನ ರೈತರ 67.24 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆ ಹಾನಿಯಾಗಿದ್ದು, ರೂ.19.43 ಲಕ್ಷ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು.

ಹೊಸನಗರ ತಾಲ್ಲೂಕಿನಲ್ಲಿ 01 ಮಾನವ ಹಾನಿಯು ಕೇರಳ ರಾಜ್ಯಕ್ಕೆ ಸಂಬಂಧಿಸಿದ್ದು, ಪರಿಹಾರ ನೀಡುವ ಬಗ್ಗೆ ತಾಲ್ಲೂಕು ಕಛೇರಿಯಿಂದ ಮರಣ ಹೊಂದಿದ ವ್ಯಕ್ತಿಯ ಸಂಬಂಧಿಕರನ್ನು ಪತ್ತೆ ಹಚ್ಚುವ ಬಗ್ಗೆ ಕ್ರಮ ವಹಿಸಲಾಗಿರುತ್ತದೆ ಎಂದು ತಿಳಿಸಿದರು.

ಈ ಮಾಹಿತಿಯನ್ನು ಶಿವಮೊಗ್ಗ ಜಿಲ್ಲೆಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆಯಲ್ಲಿರುವ ಜಲಾಶಯಗಳ ಮಟ್ಟವನ್ನು ದಿನಾಂಕ: 6-3-2019 ರಲ್ಲಿರುವಂತೆ ವಿವರಿಸುತ್ತಾ, ಲಿಂಗನಮಕ್ಕಿ ಜಲಾಶಯದ ಗರಿಷ್ಟ ಮಟ್ಟ 1819.00 ಅಡಿಗಳಾಗಿದ್ದು, ಹಿಂದಿನ ವರ್ಷದಲ್ಲಿ 1778.50 ಅಡಿಗಳಾಗಿತ್ತು. ಹಾಲಿ 1787.10 ಅಡಿಗಳಾಗಿದೆ ಎಂದು ತಿಳಿಸಿ, ಒಳ ಹರಿವು 290 ಮತ್ತು ಹೊರ ಹರಿವು 5152.04 ಕ್ಯೂಸೆಕ್ಸ್‌ಗಳಾಗಿರುತ್ತವೆ ಎಂದು ತಿಳಿಸಿದರು.

ಭದ್ರಾ ಜಲಾಶಯದ ಗರಿಷ್ಟ ಮಟ್ಟ 186.00 ಅಡಿಗಳಾಗಿದ್ದು, ಹಿಂದಿನ ವರ್ಷದಲ್ಲಿ 148.30 ಅಡಿಗಳಾಗಿತ್ತು. ಹಾಲಿ 160.90 ಅಡಿಗಳಾಗಿದೆ ಎಂದು ತಿಳಿಸಿ, ಒಳ ಹರಿವು 260 ಮತ್ತು ಹೊರ ಹರಿವು 2950.00 ಕ್ಯೂಸೆಕ್ಸ್‌ಗಳಾಗಿರುತ್ತವೆ ಎಂದು ತಿಳಿಸಿದರು.

ತುಂಗಾ ಜಲಾಶಯದ ಗರಿಷ್ಟ ಮಟ್ಟ 588.24 ಅಡಿಗಳಾಗಿದ್ದು, ಹಿಂದಿನ ವರ್ಷದಲ್ಲಿ 586.96 ಅಡಿಗಳಾಗಿತ್ತು. ಹಾಲಿ 587.42 ಅಡಿಗಳಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಶಿವಮೊಗ್ಗ ಜಿಲ್ಲೆಯಲ್ಲಿ 2018-19ನೇ ಸಾಲಿನಲ್ಲಿ ರೂ.431.57 ಲಕ್ಷಗಳ ಅಂದಾಜು ಮೊತ್ತದಲ್ಲಿ 255 ಶಾಲೆಗಳನ್ನು, ರೂ.92.48 ಲಕ್ಷಗಳ ಅಂದಾಜು ಮೊತ್ತದಲ್ಲಿ 77 ಅಂಗನವಾಡಿ ಕೇಂದ್ರಗಳನ್ನು, ರೂ.205.37 ಲಕ್ಷಗಳ ಅಂದಾಜು ಮೊತ್ತದಲ್ಲಿ 86 ರಸ್ತೆ/ಮೋರಿ/ಸೇತುವೆ ಮತ್ತು ಇತರೆ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಹೊಸನಗರ ತಾಲ್ಲೂಕಿನಲ್ಲಿ ಇತ್ತೀಚೆಗೆ ಲಘು ಭೂಕಂಪ ಸಂಭವಿಸಿದ್ದು, ಭಾರೀ ಶಬ್ದವಾಗಿರುವ ಬಗ್ಗೆ ಗ್ರಾಮಸ್ಥರು ಮನವಿ ಮಾಡಿಕೊಂಡ ಮೇರೆಗೆ ಪರಿಶೀಲನೆಗಾಗಿ ವಿಜ್ಞಾನಿಗಳನ್ನು ಕರೆಸಲಾಗಿತ್ತೆಂದು ತಿಳಿಸಿದರು.

ಸರ್ಕಾರದ ಆದೇಶ ಸಂಖ್ಯೆ: ಕಂಇ 319 ಟಿಎನ್.ಆರ್ 2018, ಬೆಂಗಳೂರು, ದಿನಾಂಕ: 29-12-2018ರ ಪ್ರಕಾರ 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ, ಸೊರಬ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ, ಸೊರಬ ಬರಪೀಡಿತ ತಾಲ್ಲೂಕುಗಳಿಗೆ ತಲಾ ರೂ.1.00 ಕೋಟಿಯಂತೆ ರೂ.4.00 ಕೋಟಿ ಬಿಡುಗಡೆಯಾಗಿರುತ್ತದೆ ಎಂದು ತಿಳಿಸಿ, ಹಿಂಗಾರು ಹಂಗಾಮಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಹಾನಿಯಾದ ಬಗ್ಗೆ ವರದಿಯಾಗಿರುವುದಿಲ್ಲವೆಂದು ತಿಳಿಸಿದರು.

| | | | |
|---|---|---|---|
| | | | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಶೀಘ್ರದಲ್ಲಿಯೇ ಲೋಕಸಭಾ ಚುನಾವಣೆ ಘೋಷಣೆಯಾಗಲಿದ್ದು, ಮತದಾನ ಕೇಂದ್ರಗಳನ್ನು ಗುರುತಿಸಲಾಗಿರುವ ಶಾಲಾ ಕೊಠಡಿಗಳು, ಅಂಗನವಾಡಿ ಕೇಂದ್ರಗಳು ಸುಸ್ಥಿತಿಯಲ್ಲಿವೆಯೇ?, ರ್‍ಯಾಂಪ್, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿದೆಯೇ? ಎಂಬ ಬಗ್ಗೆ ವಿವರ ನೀಡುವಂತೆ ತಿಳಿಸಿದರು.<br><br>ಜಿಲ್ಲಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಮತದಾನ ಕೇಂದ್ರಗಳನ್ನು ಗುರುತಿಸಲಾಗಿರುವ ಪೈಕಿ ೩೯ ಕಡೆಗಳಲ್ಲಿ ರ್‍ಯಾಂಪ್‌ಗಳನ್ನು, ೨೦ ಕಡೆಗಳಲ್ಲಿ ಪೀಠೋಪಕರಣಗಳನ್ನು ವ್ಯವಸ್ಥೆಗೊಳಿಸಬೇಕಾಗಿದೆ. ಈ ಸಂಬಂಧದಲ್ಲಿ ಈ ದಿನ ಸಂಜೆ ಇಂಜಿನಿಯರುಗಳ ಸಭೆ ಕರೆಯಲಾಗಿದ್ದು, ಕೆಲವು ಶಾಲೆಗಳಲ್ಲಿ ಶೌಚಾಲಯಗಳನ್ನು ದುರಸ್ತಿಪಡಿಸಲು ತಿಳಿಸಲಾಗಿದೆ ಎಂದು ತಿಳಿಸಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯಲ್ಲಿ ಅತೀ ತುರ್ತು, ತುರ್ತು ಮತ್ತು ಸಾಧಾರಣವಾಗಿ ದುರಸ್ತಿಯಾಗಬೇಕಾಗಿರುವ ಶಾಲಾ ಕೊಠಡಿಗಳ ಸರ್ವೆ ಮಾಡಿಸಿ ಆದ್ಯತೆಯ ಮೇಲೆ ಶಾಲಾ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುವಂತೆ ತಿಳಿಸಿದರು.<br>**(ಕ್ರಮ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ)**<br><br>ಪ್ರಸ್ತುತ ಬೇಸಿಗೆ ಸಮೀಪಿಸುತ್ತಿದ್ದು, ಜಿಲ್ಲೆಯ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೇ? ಎಂಬ ಬಗ್ಗೆ ವಿವರ ನೀಡುವಂತೆ ತಿಳಿಸಿದರು. |

| | | |
|---|---|---|
| | | ಜಿಲ್ಲಾಧಿಕಾರಿಯವರು ಮಾತನಾಡಿ, ಸದ್ಯದ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ. ಜಿಲ್ಲೆಯಲ್ಲಿ ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ 216 ಗ್ರಾಮಗಳನ್ನು ಗುರುತಿಸಲಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪ್ರಸ್ತುತ ಬೇಸಿಗೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ತಿಳಿಸಿ, ಬೇಸಿಗೆಯಲ್ಲಿ ನೀರಿನ ತೊಂದರೆ ಉಂಟಾಗುವ ಗ್ರಾಮಗಳನ್ನು ಗುರುತಿಸಿ, ಅಂತಹ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ತಿಳಿಸಿ, ಪೈಪ್‌ಲೈನ್ ಅಳವಡಿಸುವ ಮತ್ತು ಕುಡಿಯುವ ನೀರಿನ ಮೂಲಗಳನ್ನು ಗುರುತಿಸುವ ಕಾರ್ಯ ಕೈಗೊಳ್ಳುವಂತೆ ತಿಳಿಸಿದರು.<br><br>ಮುಂದುವರೆದು, ಶಿವಮೊಗ್ಗ ನಗರದ ಬಹಳಷ್ಟು ಬಡಾವಣೆಗಳಲ್ಲಿ 24★7 ಕುಡಿಯುವ ನೀರು ಪೂರೈಕೆ ಯೋಜನೆ ಅನುಷ್ಠಾನಗೊಳಿಸಿದ್ದರೂ ಸಮರ್ಪಕ ನೀರು ಸಿಗುತ್ತಿಲ್ಲವೆಂಬ ದೂರುಗಳಿದ್ದು, ಸಂಬಂಧಿಸಿದ ಅಧಿಕಾರಿಗಳು ಶೀಘ್ರ ಸರಿಪಡಿಸುವ ಕೆಲಸ ಮಾಡುಂತೆ ತಿಳಿಸಿದರು. ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಶಿವಮೊಗ್ಗ ನಗರದ ಭವಿಷ್ಯದ ದೃಷ್ಟಿಯಿಂದ ನೀರಿನ ಮರು ಬಳಕೆ, ತ್ಯಾಜ್ಯ ನೀರು ಸಂಸ್ಕರಣೆ ಸೇರಿ ವಿವಿಧ ಕ್ರಮಗಳ ಕುರಿತು ಯೋಜನೆ ಸಿದ್ಧಪಡಿಸಿ ಸ್ಮಾರ್ಟ್ ಸಿಟಿ ಕಾರ್ಯಕ್ರಮದಡಿ ಅನುಷ್ಠಾನ ಮಾಡುವಂತೆ ತಿಳಿಸಿದರು.<br>**(ಕ್ರಮ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)** |

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯಲ್ಲಿ ಮೇವಿನ ಸಮಸ್ಯೆ ಇರುವ ಕುರಿತು ಸಭೆಗೆ ವಿವರ ನೀಡುವಂತೆ ತಿಳಿಸಿದರು.

ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ ಇವರು ಮಾತನಾಡಿ, 2012ರ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 7,17,991 ಜಾನುವಾರುಗಳಿದ್ದು, ಸದರಿ ಜಾನುವಾರುಗಳಿಗೆ 5 ಕೆ.ಜಿ ಒಣಹುಲ್ಲು ಒಂದು ವಾರಕ್ಕೆ ಅವಶ್ಯಕತೆ ಇದ್ದು, ಅದರಂತೆ ಒಟ್ಟು 25,130 ಮೆಟ್ರಿಕ್ ಟನ್ ಬೇಕಾಗಲಿದೆ. ಆದರೆ ಜಿಲ್ಲೆಯಲ್ಲಿ ಒಟ್ಟು 5,77,797 ಮೆಟ್ರಿಕ್ ಟನ್‌ನಷ್ಟು ಮೇವು ಲಭ್ಯವಿದ್ದು, ಮುಂದಿನ 23 ವಾರಗಳಿಗಾಗುಷ್ಟು ಮೇವು ದಾಸ್ತಾನಿದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಉಪ ನಿರ್ದೇಶಕರು, ಸಾಗರ ತಾಲ್ಲೂಕು ಅರಳಗೋಡು ಗ್ರಾಮಕ್ಕೆ ಅಗತ್ಯವಿರುವ ಪ್ರಮಾಣದ ಮೇವು ಹೊಲದಲ್ಲಿದೆ. ಆದರೆ ಸದರಿ ಗ್ರಾಮದಲ್ಲಿ ಮಂಗನ ಕಾಯಿಲೆ ಕಾಣಿಸಿಕೊಂಡಿದ್ದರಿಂದ ಸದರಿ ಗ್ರಾಮದಲ್ಲಿ ಜಾನುವಾರುಗಳನ್ನು ಹೊರಗೆ ಬಿಡದಂತೆ ಸೂಚನೆ ನೀಡಲಾಗಿರುತ್ತದೆ. ಆದ್ದರಿಂದ ಸದರಿ ಜಾನುವಾರುಗಳಿಗೆ ಅಗತ್ಯವಿರುವ ಪ್ರಮಾಣದ ಮೇವನ್ನು ಮನೆ-ಮನೆಗೆ ಒದಗಿಸುವಂತೆ ಕೋರಿಕೆ ಬರುತ್ತಿದೆ ಎಂದು ತಿಳಿಸಿದರು.

ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ:- ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಶಿವಮೊಗ್ಗ)**

ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಮತ್ತು ಪರಿಹಾರ ನೀಡಿರುವ ಪ್ರಕರಣಗಳ ಬಗ್ಗೆ ವಿವರ ನೀಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

| | | |
|---|---|---|
| | | ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 1, ಹೊಸನಗರ ತಾಲ್ಲೂಕಿನಲ್ಲಿ 2, ಶಿಕಾರಿಪುರ ತಾಲ್ಲೂಕಿನಲ್ಲಿ 1 ಒಟ್ಟು 4 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಪೈಕಿ ಒಂದು ಪ್ರಕರಣದಲ್ಲಿ ಲ್ಯಾಬ್‌ನಿಂದ ವರದಿ ಬರಬೇಕಾಗಿದೆ ಎಂದು ತಿಳಿಸಿದರು.<br><br>ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.<br>**(ಕ್ರಮ:- ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ)**<br><br>ಜಿಲ್ಲಾಧಿಕಾರಿಯವರು ಮಾತನಾಡಿ, ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಸಾಲಮನ್ನಾ ಯೋಜನೆಯಡಿ ೩೩,೮೮೬ ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಈವರೆಗೆ 5,004 ಫಲಾನುಭವಿಗಳಿಗೆ ರೂ.೨೧.೭೦ ಕೋಟಿ ಮೊತ್ತದ ಸಾಲ ಮನ್ನಾ ಮಾಡಲಾಗಿದೆ. ಹಂತ ಹಂತವಾಗಿ ಸಾಲ ಮನ್ನಾ ಮಾಡಲಾಗುತ್ತಿದೆ ಎಂದು ತಿಳಿಸಿದರು.<br><br>16ನೇ ಲೋಕಸಭಾ ಸದಸ್ಯರ ಅನುದಾನದಲ್ಲಿ ಮಂಜೂರಾದ ಕಾಮಗಾರಿಗಳು ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ಕುರಿತು ಜಿಲ್ಲಾಧಿಕಾರಿಗಳು ಸಭೆಗೆ ವಿವರ ನೀಡಿದರು.<br><br>ಎಲ್ಲಾ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗಾಗಿ ಪೂರ್ಣಗೊಳಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.<br>**(ಕ್ರಮ:- ಜಿಲ್ಲಾದಿಕಾರಿಗಳು, ಶಿವಮೊಗ್ಗ ಜಿಲ್ಲೆ)** |

| | | |
|---|---|---|
| | | ಶಿವಮೊಗ್ಗ ಜಿಲ್ಲೆಯಲ್ಲಿ ರುದ್ರಭೂಮಿಗಳ ಸೌಲಭ್ಯ ಇರುವ ಕುರಿತು ಜಿಲ್ಲಾದಿಕಾರಿಗಳು ಸಭೆಗೆ ಮಾಹಿತಿ ನೀಡುತ್ತಾ, ಜಿಲ್ಲೆಯಲ್ಲಿ ಒಟ್ಟು 1484 ಜನವಸತಿ ಇರುವ ಗ್ರಾಮಗಳಿದ್ದು, ಇದರಲ್ಲಿ 135 ಬೇಚರಾಕ ಗ್ರಾಮಗಳಿರುತ್ತವೆ. ಈ ಪೈಕಿ 580 ಗ್ರಾಮಗಳಲ್ಲಿ ರುದ್ರಭೂಮಿಗಳಿದ್ದು, 899 ಗ್ರಾಮಗಳಲ್ಲಿ ರುದ್ರಭೂಮಿಗಳಿರುವುದಿಲ್ಲ. ರುದ್ರಭೂಮಿಗಳಿಲ್ಲದ ಒಟ್ಟು 394 ಗ್ರಾಮಗಳಲ್ಲಿ ಸರ್ಕಾರಿ ಜಮೀನು ಗುರುತಿಸಲಾಗಿದ್ದು, ಇನ್ನು 904 ಗ್ರಾಮಗಳಲ್ಲಿ ರುದ್ರಭೂಮಿಗಾಗಿ ಜಮೀನು ಗುರುತಿಸಬೇಕಾಗಿದೆ ಎಂದು ತಿಳಿಸಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರುದ್ರಭೂಮಿಗಳಿಲ್ಲದ ಗ್ರಾಮಗಳಲ್ಲಿ ಸರ್ಕಾರಿ ಜಮೀನು ಗುರುತಿಸುವಂತೆ ತಿಳಿಸಿದರು.<br>**(ಕ್ರಮ:- ಜಿಲ್ಲಾದಿಕಾರಿಗಳು, ಶಿವಮೊಗ್ಗ ಜಿಲ್ಲೆ)**<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ವೃದ್ದಾಪ್ಯ ವೇತನ, ಅಂಗವಿಕಲ ಮಾಸಾಶನ ಇತ್ಯಾದಿ ಸೌಲಭ್ಯಗಳಿಗೆ ಆನ್ ಲೈನ್ ಅರ್ಜಿ ಸಲ್ಲಿಸಲು ಅಂಗವಿಕಲ ಅಭ್ಯರ್ಥಿಗಳಿಗೆ ನೆರವು ನೀಡುವಂತೆ ತಿಳಿಸಿದರು.<br>**(ಕ್ರಮ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**<br><br>ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರು ಮಾತನಾಡಿ, ಶಿವಮೊಗ್ಗ ಜಿಲ್ಲೆಯ 9 ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ 2018-19ನೇ ಸಾಲಿಗೆ ವಿವಿಧ ವಸತಿ ಯೋಜನೆಯಡಿ ವಿವಿಧ ಸಾಲಿನಲ್ಲಿ ಮಂಜೂರಾದ ಮನೆಗಳಲ್ಲಿ ಮನೆ ನಿರ್ಮಾಣಕ್ಕೆ 1361 ಮನೆಗಳ ನಿರ್ಮಾಣದ ಎಂ.ಪಿಕ್ ಗುರಿಯನ್ನು ನೀಡಿದ್ದು, |

ಇದರಲ್ಲಿ 539 ಮನೆಗಳು ಇದುವರೆಗೆ ಪೂರ್ಣಗೊಂಡಿದ್ದು, ಬಾಕಿ ಉಳಿದ ಮನೆಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಕಾಲ ಕ್ರಮೇಣ ಫಲಾನುಭವಿಗಳಿಗೆ ನಿಗಮದಿಂದ ಸಹಾಯಧನ ಬಿಡುಗಡೆಯಾಗದೇ ಇರುವುದರಿಂದ ಪ್ರಗತಿ ಕುಂಠಿತವಾಗಿದೆ ಎಂದು ತಿಳಿಸಿದರು.

ಮುಂದುವರೆದು ಶಿವಮೊಗ್ಗ ಜಿಲ್ಲೆಯ 9 ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ 2017-18ನೇ ಸಾಲಿಗೆ ವಿವಿಧ ವಸತಿ ಯೋಜನೆಗಳಡಿ 2380 ಗುರಿ ನಿಗಧಿಪಡಿಸಿದ್ದು, ಈ ಗುರಿಯಂತೆ ಇದುವರೆಗೂ 1832 ಫಲಾನುಭವಿಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಆಶ್ರಯ ಸಮಿತಿಗಳ ಮೂಲಕ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ವಸತಿ ಯೋಜನೆಯಡಿ ನಿಗಧಿತ ಗುರಿ ಸಾಧಿಸುವಂತೆ ತಿಳಿಸಿದರು.

**(ಕ್ರಮ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ)**

ಜಿಲ್ಲಾಧಿಕಾರಿಗಳು ಮಾತನಾಡಿ, ರಾಜ್ಯಾಧ್ಯಂತ ಇಂದಿರಾ ಕ್ಯಾಂಟೀನ್ ತೆರೆಯುವ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ 7 ತಾಲ್ಲೂಕು ಕೇಂದ್ರ ಹೊಂದಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರವು ಒಂದು ಪ್ರತ್ಯೇಕ ಅಡುಗೆ ಕೋಣೆ ಸೇರಿದಂತೆ ಒಟ್ಟು 11 ಇಂದಿರಾ ಕ್ಯಾಂಟೀನ್ ಮಂಜೂರು ಮಾಡಿದೆ. ಜಿಲ್ಲೆಯಲ್ಲಿ 1 ಅಡುಗೆ ಕೋಣೆಗೆ ಮತ್ತು 10 ಕ್ಯಾಂಟೀನ್ ಗೆ ಜಾಗ ಗುರುತಿಸಿ ಸರ್ಕಾರದಿಂದ ನೇಮಕವಾದ ಸಂಸ್ಥೆಗೆ ಕಟ್ಟಡ ನಿರ್ಮಿಸಲು ಹಸ್ತಾಂತರಿಸಲಾಗಿದೆ. ಇದರಲ್ಲಿ 1 ಅಡುಗೆ ಕೋಣೆ ಮತ್ತು 5 ಕ್ಯಾಂಟೀನ್‌ಗಳನ್ನು ನಿರ್ಮಿಸಲಾಗಿದೆ. ಶಿವಮೊಗ್ಗ

| | | |
|---|---|---|
| | | ಮಹಾ ನಗರಪಾಲಿಕೆ ವ್ಯಾಪ್ತಿಯಲ್ಲಿ 1 ಅಡುಗೆ ಕೋಣೆ, 4 ಕ್ಯಾಂಟೀನ್‌ಗಳು ಪ್ರಾರಂಭವಾಗಿದ್ದು, ಆಹಾರವನ್ನು ಒದಗಿಸುತ್ತಿವೆ. ನಗರಸಭೆ ಸಾಗರದ ವ್ಯಾಪ್ತಿಯಲ್ಲಿ ಕ್ಯಾಂಟೀನ್ ಪ್ರಾರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.<br><br>ಮುಂದುವರೆದು, ಕ್ಯಾಂಟೀನ್ ನಿರ್ಮಾಣದ ಬಿಲ್ ಪಾವತಿ ನಿರ್ವಹಣೆಯನ್ನು ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ನಿರ್ವಹಿಸಲಾಗುತ್ತಿದೆ. ಶಿವಮೊಗ್ಗ ಜಿಲ್ಲೆಗೆ ಊಟೋಪಚಾರಕ್ಕೆ ರೂ.96.30 ಲಕ್ಷ ಬಿಡುಗಡೆಯಾಗಿದ್ದು, ಇದರಲ್ಲಿ ರೂ.66.92 ಲಕ್ಷಗಳನ್ನು ಬಳಸಲಾಗಿದ್ದು, ಇನ್ನು ರೂ.29.23 ಲಕ್ಷ ಉಳಿಕೆಯಾಗಿರುತ್ತದೆ ಎಂದು ತಿಳಿಸಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿಗಳಿಗೆ ಜಾಗದ ಸಮಸ್ಯೆ ಇದೆಯೇ? ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ತಿಳಿಸಿದರು.<br><br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 232 ಅಂಗನವಾಡಿಗಳಿಗೆ ಜಾಗದ ಸಮಸ್ಯೆ ಇರುತ್ತದೆ. ಈ ಕುರಿತು ಇಲಾಖಾ ಮುಖ್ಯಸ್ಥರಿಗೂ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮಾತೃಪೂರ್ಣ ಯೋಜನೆಯಡಿ ಗ್ರಾಮಾಂತರ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಗಳು ಜನವಸತಿಗಿಂತ ದೂರವಿದ್ದಲ್ಲಿ ಗರ್ಭಿಣಿ ಮಹಿಳೆಯರು ಅಂಗನವಾಡಿ ಕೇಂದ್ರಗಳಿಗೆ ಬಂದು ಹೋಗಲು ತೊಂದರೆಯಾಗುತ್ತದೆಯಾದ್ದರಿಂದ ಜನವಸತಿಗೆ ಸಮೀಪದಲ್ಲಿಯೇ |

ಅಂಗನವಾಡಿ ಕೇಂದ್ರಗಳನ್ನು ತೆರೆಯುವಂತೆ ತಿಳಿಸಿ, ಒಂದು ವೇಳೆ ದೂರದಲ್ಲಿ ಅಂಗನವಾಡಿ ಕೇಂದ್ರಗಳಿದ್ದಲ್ಲಿ, ಸಮೀಪದ ಶಾಲೆಗಳಲ್ಲಿ ಒಂದು ಕೊಠಡಿಯನ್ನು ಪಡೆದು ಅಲ್ಲಿ ಅಂಗನವಾಡಿ ಕೇಂದ್ರವನ್ನು ತೆರೆಯುವಂತೆ ತಿಳಿಸಿದರು.

**(ಕ್ರಮ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**

ಜಿಲ್ಲಾಧಿಕಾರಿಗಳು ಮಾತನಾಡಿ, ಬಹುತೇಕ ಎಲ್ಲಾ ಇಲಾಖೆಗಳಲ್ಲೂ ಅಧಿಕಾರಿ/ನೌಕರರ ಬಹಳಷ್ಟು ಹುದ್ದೆಗಳು ಖಾಲಿಯಾಗಿದ್ದು, ಕೆಲಸ ಕಾರ್ಯಗಳ ನಿರ್ವಹಣೆಗೆ ಕೆಲವು ಹುದ್ದೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನೌಕರರುಗಳನ್ನು ನೇಮಿಸಿಕೊಳ್ಳಲಾಗಿದೆ. ಆದರೆ ಹೊರ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೂ ಕಳೆದ ಆರೇಳು ತಿಂಗಳುಗಳಿಂದ ವೇತನ ಪಾವತಿಸಲಾಗಿಲ್ಲವೆಂದು ತಿಳಿಸಿದರು.

ಮುಂದುವರೆದು, ಶಿವಮೊಗ್ಗ ಜಿಲ್ಲೆಯಲ್ಲಿ ತಹಶೀಲ್ದಾರರು ಹಾಗೂ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ವೃಂದದ ಹುದ್ದೆಗಳಿಗೆ ಸಕಾರಣವಿಲ್ಲದೆ ವರ್ಗಾವಣೆ ಮಾಡಲಾಗುತ್ತಿದ್ದು, ಇದರಿಂದ ಕೆಲಸ ನಿರ್ವಹಿಸಲು ಬಹಳ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಚುನಾವಣಾ ಸಮಯವಾದ್ದರಿಂದ ಚುನಾವಣಾ ಆಯೋಗದ ನಿರ್ದೇಶನದಂತೆ ವರ್ಗಾವಣೆ ಮಾಡಲಾಗಿರಬಹುದೆಂದು ತಿಳಿಸಿ, ಇದು ಸರ್ಕಾರದ ಮಟ್ಟದಲ್ಲಿ ಕ್ರಮ ವಹಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು, ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ

| | | |
|---|---|---|
| | | ಮಂಜೂರಾದ ಹುದ್ದೆಗಳ ವಿವರ, ಖಾಲಿ ಹುದ್ದೆಗಳ ವಿವರ, ಹೊರ ಗುತ್ತಿಗೆ ಆಧಾರದ ನೌಕರರುಗಳಿಗೆ ಪಾವತಿಸಬೇಕಾಗಿರುವ ವೇತನದ ಒಟ್ಟು ಮೊತ್ತ, ಇತ್ಯಾದಿ ವಿವರಗಳನ್ನು ತಮಗೆ ಒದಗಿಸುವಂತೆ ತಿಳಿಸಿದರು.<br>**(ಕ್ರಮ:- ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ)**<br>ಅಪರ ಜಿಲ್ಲಾಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. |

ಸರ್ಕಾರದ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಹಾಗೂ
ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆರವರ ಅಧ್ಯಕ್ಷತೆಯಲ್ಲಿ ದಿನಾಂಕ:13/03/2019ರಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಪರಿಶೀಲಿಸಿದ ಅಂಶಗಳು**

| ಕ್ರ ಸಂ | ಅಂಶಗಳು | ಷರಾ |
|---|---|---|
| 1 | ಜಿಲ್ಲೆಯ ಹೆಸರು | ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಯಹೆಸರು | ಡಾ:ಬಿ. ಬಸವರಾಜು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ. |
| 3 | ಭೇಟಿಯಾದ ದಿನಾಂಕ | 13/03/2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ➢ ಮುಖ್ಯವಾಗಿ ಬರ ಪರಿಸ್ಥಿತಿ ಹಾಗೂ ಋತುಮಾನ ಪರಿಸ್ಥಿಯ ಬಗ್ಗೆ ಪರಿಶೀಲಿಸಿ ಪ್ರಸುತ್ತ ಹಿಂಗಾರಿನಲ್ಲಿ ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಸರ್ಕಾರವು ಬರ ಪೀಡಿತ ಪ್ರದೇಶವೆಂದು ಘೋಷಿಸಿದ್ದು, ಈ ಹಿನ್ನಲೆಯಲ್ಲಿ ಎಲ್ಲಾ ಇಲಾಖೆಗಳು ಮುಂಜಾಗ್ರತೆ ಕ್ರಮವಾಗಿ ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವಿನ ಬಗ್ಗೆ ಕ್ರಮವಹಿಸಲು ತಿಳಿಸಲಾಯಿತು. ಹಿಂದಿನ ಸಭೆಯಲ್ಲಿ ಕುಡಿಯುವ ನೀರಿನ ಕೊರತೆಯ ಪ್ರಮಾಣ ಈ ಮಾಹೆಯ ಸಭೆಯಲ್ಲಿ ಚರ್ಚಿಸಲಾದಂತೆ ಹಾಲಿ ನೀರಿನ ಕೊರತೆಯ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತದೆ.<br>➢ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ನೀರಿನ ಅಭಾವ ಇರುವುದಿಲ್ಲ. ಮುಂಗಾರು ಮಳೆ ಸಕಾಲದಲ್ಲಿ ಬಿಳದಿದ್ದಲ್ಲಿ ನೀರಿನ ಅಭಾವ ಉಂಟಾಗುವ ಭೀತಿ ಇರುತ್ತದೆ. ನೆಲಮಂಗಲ ಮತ್ತು ದೇವನಹಳ್ಳಿ ನಗರಸಭಾ ವ್ಯಾಪ್ತಿಗಳಲ್ಲಿ ಮೂರು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದ್ದು ಎರಡು ದಿನಗಳಿಗೊಮ್ಮೆಯಾದರು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು. ಹೊಸಕೋಟೆ ತಾಲ್ಲೂಕಿನಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ನೀರಿನ ಅಭಾವ ಇರುವುದಿಲ್ಲ.<br>➢ ನಾಲ್ಕು ತಾಲ್ಲೂಕುಗಳಲ್ಲಿ ಮುಂಜಾಗೃತ ಕ್ರಮವಾಗಿ ಕುಡಿಯುವ ನೀರಿನ ಅಭಾವ ಉಂಟಾಗುವ ಮುಂಚಿತವಾಗಿ ಖಾಸಗಿ ಕೊಳವೆ ಭಾವಿಗಳನ್ನು ಗುರುತಿಸಿ ಪಟ್ಟಿ ಮಾಡಲು ತಿಳಿಸಲಾಯಿತು.<br>➢ ಬರದ ಹಿನ್ನಲೆಯಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ಎಲ್ಲಾ ಇಲಾಖೆಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಯಿತು.<br>➢ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ ವತಿಯಿಂದ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮ ಹಮ್ಮಿಕೊಂಡು ಕೆರೆಗಳ ಹೂಳೆತ್ತಿ, ಕೆರೆಗೆ ಹರಿದು ಬರುವ ನೀರಿನ ಕಾಲುವೆಗಳನ್ನು ಸ್ವಚ್ಛ ಮಾಡಿ, ಒತ್ತುವರಿಯಾಗಿದ್ದಲ್ಲಿ ಒತ್ತುವರಿಯನ್ನು ತೆರವುಗೊಳಿಸಿ ಮಳೆಗಾಲದಲ್ಲಿ ಕೆರೆಗಳಿಗೆ ಸರಾಗವಾಗಿ ನೀರು ಹರಿಯುವಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.<br>➢ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಹಲವಾರು ಯೋಜನೆಗಳಲ್ಲಿ ಸಾರ್ವಜನಿಕರ ಸಹಭಾಗಿತ್ವದೊಂದಿಗೆ, ಸೃಜನಾತ್ಮಕವಾಗಿ, ಸಾರ್ವಜನಿಕರಿಗೆ |

ಹೆಚ್ಚಿನ ರೀತಿಯಲ್ಲಿ ಉಪಯೋಗವಾಗುವಂತೆ ಕಾರ್ಯ ನಿರ್ವಹಿಸಲು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು, ಈ ವಿಷಯದ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪರಿಶೀಲಿಸಲಾಯಿತು.

- ಜಿಲ್ಲಾಧಿಕಾರಿಗಳು ಮಾತಾನಾಡುತ್ತಾ ರೈತರಿಗೆ ಗಿರಿರಾಜ ಕೋಳಿ ಬಗ್ಗೆ ಈಗಾಗಲೇ ಹೆಚ್ಚು ಜಾಗೃತಿ ಮೂಡಿದ್ದು, **'ಕಡಕ್‌ನಾಥ್'** ಎಂಬ ಜಾತಿಯ ಕೋಳಿ ಸಾಗಾಣಿಕೆಯಲ್ಲಿ ಹೆಚ್ಚು ಆದಾಯ ಇದ್ದು, ಈ ಜಾತಿಯ ಕೋಳಿಯ ಬಗ್ಗೆ ಇನ್ನಷ್ಟು ಸಮೀಕ್ಷೆ ನಡೆಸಿ ಈ ಜಿಲ್ಲೆಯಲ್ಲಿ ರೈತರಿಗೆ ಇದರ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಲು ಕ್ರಮ ವಹಿಸುವಂತೆ ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆರವರಿಗೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು, ಈ ಬಗ್ಗೆ ಕ್ರಮ ವಹಿಸಿರುವ ಬಗ್ಗೆ ಪರಿಶೀಲಿಸಲಾಗಿ ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆರವರು ಸಕಲೇಶಪುರ ಬಳಿ ಕಡಕ್‌ನಾಥ್ ಕೋಳಿಗಳನ್ನು ಸಾಕಲಾಗುತ್ತಿದ್ದು, ಅಲ್ಲಿಂದ ಮೊಟ್ಟೆ ಅಥವಾ ಕೋಳಿ ಮರಿಗಳನ್ನು ತರಿಸಿ ರೈತರಿಗೆ ವಿತರಣೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಸರ್ಕಾರದಿಂದ ಯಾವುದೇ ಯೋಜನೆ/ಅನುದಾನ ಮಂಜೂರಾದಲ್ಲಿ ಈ ಜಿಲ್ಲೆಗೆ ಸದರಿ ಯೋಜನೆ/ಅನುದಾನವನ್ನು ಆದಷ್ಟು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವಲ್ಲಿ ಕ್ರಮವಹಿಸಲು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತಿಳಿಸಲಾಯಿತು.
- ಜಿಲ್ಲಾಧಿಕಾರಿಗಳು ಮಾತಾನಾಡುತ್ತಾ ಕೃಷಿ ಸಿಂಚಯಿ ಯೋಜನೆಯಲ್ಲಿ ಬಿಡುಗಡೆಯಾಗುವ ಅನುಧಾನವನ್ನು ಆದಷ್ಟು ಪರಿಣಾಮಕಾರಿಯಾಗಿ ಹಾಗೂ ತಾಂತ್ರಿಕವಾಗಿ ಬಳಕೆ ಮಾಡಿಕೊಂಡಿದ್ದಲ್ಲಿ ಈ ಜಿಲ್ಲೆಯಲ್ಲಿ ಶೇ.100 ರಷ್ಟು Drip Irrigationಅನ್ನು ಜಾರಿಗೆ ತರಬಹುದಾಗಿ, ಈ ಬಗ್ಗೆ ಹೆಚ್ಚಿನ ಗಮನ ವಹಿಸಿ, ಸದರಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು, ಕ್ರಮ ವಹಿಸಲು ಜಂಟಿ ಕೃಷಿ ನಿರ್ದೇಶಕರು, ಬೆಂ.ಗ್ರಾ.ಜಿ ರವರಿಗೆ ಹಿಂದಿನ ಸಭೆಯಲ್ಲಿ ಸೂಚಿಸಲಾದಂತೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ಹೆಚ್ಚಿನ ಪ್ರಗತಿ ಸಾಧಿಸಲು ತಿಳಿಸಲಾಯಿತು.
- ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರೊಂದಿಗೆ ಈ ಕೆಳಕಾಣಿಸಿದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**ಮಳೆ ವಿವರಗಳು:**

**2019**ರ ಜನವರಿ 01.01.2019 ರಿಂದ 05.02.2019 ರವರೆಗೆ 1.7 ಮಿ.ಮೀ. ವಾಡಿಕೆ ಮಳೆಗೆ 3.5 ಮಿ.ಮೀ. ವಾಸ್ತವ ಮಳೆ ಪಡೆಯಲಾಗಿದೆ.

**ರಸಗೊಬ್ಬರಗಳ ಮಾಹಿತಿ**

- 2018-19 ನೇ ಸಾಲಿನ ಜನವರಿ 2018 ರ ಮಾಹೆಯವರೆಗೆ 38606 ಟನ್ ಬೇಡಿಕೆಗೆ 34842 ಟನ್ ಸರಬರಾಜಾಗಿದ್ದು, 23428 ರಷ್ಟು ವಿತರಣೆಯಾಗಿದ್ದು, ಇದುವರೆಗೂ 4530 ಟನ್‌ರಷ್ಟು ಉಳಿಕೆ ಇರುತ್ತದೆ.

- 463 ಮೆ.ಟನ್ ವಿವಿಧ ರಸಗೊಬ್ಬರಗಳ ಕಾಪು ದಾಸ್ತಾನುಇರುತ್ತದೆ. ಅಭಾವ (ತುರ್ತು ಪರಿಸ್ಥಿತಿಯಲ್ಲಿ) ಕಂಡು ಬಂದಲ್ಲಿ ವಿತರಿಸಲುಕ್ರಮ ವಹಿಸಲಾಗುತ್ತಿದೆ.

**ಬೀಜಗಳ ಪೂರೈಕೆ :**

- 2018–19 ನೇ ಸಾಲಿನಲ್ಲಿ**ಮುಂಗಾರು ಹಂಗಾಮಿನಲ್ಲಿ** 4141.95 ಕ್ವಿಂ. ಬೇಡಿಕೆಗೆ 3019.35 ಕ್ವಿಂ. ತೊಗರಿ, ಮು.ಜೋಳ ಮತ್ತುರಾಗಿ ವಿವಿಧ ಬಿತ್ತನೆ ಬೀಜಗಳು ಸರಬರಾಜುಆಗಿದ್ದು, 2041.14 ಕ್ವಿಂ. ವಿತರಣೆಯಾಗಿರುತ್ತದೆ.
- 2018–19 ನೇ ಸಾಲಿನಲ್ಲಿ**ಹಿಂಗಾರು ಹಂಗಾಮಿನಲ್ಲಿ** 157.00 ಕ್ವಿಂ. ರಾಗಿ ಹಾಗೂ ಕಡಲೆ ಬಿತ್ತನೆ ಬೀಜ ಬೇಡಿಕೆಗೆ 76.60 ಕ್ವಿಂ ಸರಬರಾಜಾಗಿದ್ದು, 59.6ಕ್ವಿಂ. ವಿತರಣೆಯಾಗಿರುತ್ತದೆ.

**ಮೇವಿನ ಪರಿಸ್ಥಿತಿ:**

19ನೇಜಾನುವಾರುಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು **183184** ಜಾನುವಾರುಗಳಿರುತ್ತವೆ. ಜಿಲ್ಲೆಯ 4 ತಾಲ್ಲೂಕುಗಳಲ್ಲಿ ದಿನಾಂಕ **02.02.2019**ರ ಅಂತ್ಯಕ್ಕೆ ಒಟ್ಟು **134471** ಮೆ.ಟನ್ ಮೇವು ಲಭ್ಯವಿದ್ದು, ಸದ್ಯದ ಪರಿಸ್ಥಿಯಲ್ಲಿ ಮೇವಿನ ಅಭಾವ ಇರುವುದಿಲ್ಲ.

**ಕುಡಿಯುವ ನೀರಿನ ಪರಿಸ್ಥಿತಿ:**

**ಗ್ರಾಮೀಣ:**

- ಜಿಲ್ಲೆಯಲ್ಲಿ ಒಟ್ಟು 4 ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ದಿನಾಂಕ **03.02.2019** ರಂತೆ **15** ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಈ ಗ್ರಾಮಗಳ ಪೈಕಿ ಟ್ಯಾಂಕರ್ ಮೂಲಕ **12** ಮತ್ತು **3** ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

**ನಗರ ಸ್ಥಳೀಯ ಸಂಸ್ಥೆ:**

- ಜಿಲ್ಲೆಯ 5 ಪಟ್ಟಣ ಪ್ರದೇಶಗಳಲ್ಲಿ ಒಟ್ಟು **131** ವಾರ್ಡ್‌ಗಳಿದ್ದು, ದಿನಾಂಕ **04.02.2019**ರಂತೆ ವಿಜಯಪುರ ಪುರಸಭೆಯ **2** ವಾರ್ಡ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

***ಶಾಲಾ ಕಟ್ಟಡಗಳ ದುರಸ್ಥಿಗಾಗಿ:***

- 2018–19ನೇ ಸಾಲಿನಲ್ಲಿ ಶಾಲಾ ಕಟ್ಟಡಗಳ ದುರಸ್ಥಿಗಾಗಿ ಎಸ್.ಡಿ.ಆರ್.ಎಫ್. ನಿಧಿಯಡಿ ಒಟ್ಟು **305** ಶಾಲಾ ಕಟ್ಟಡಗಳು/ಕಾಮಗಾರಿಗಳಿಗೆ ಅಂದಾಜು ಮೊತ್ತ**ರೂ.405.985 ಲಕ್ಷಗಳಿಗೆ** ಮೊದಲನೇ ಹಂತದಲ್ಲಿ ಶೇ.75ರಷ್ಟು, **ರೂ.304.48 ಲಕ್ಷ**ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**ಜಿಲ್ಲಾ ಪಂಚಾಯತ್ ವ್ಯಾಪ್ತಿಯ ವಿಷಯಗಳು:**

- 2018-19ನೇ ಸಾಲಿನ ಆರ್ಥಿಕ ವರ್ಷವು ಮುಗಿಯುತ್ತಿರುವುದರಿಂದ ಎಲ್ಲಾ ಬಾಕಿ ಇರುವ ಕಾಮಗಾರಿಗಳನ್ನು/ವಾರ್ಷಿಕ ಗುರಿಯನ್ನು ಸಾಧಿಸುವ ಬಗ್ಗೆ ಖುದ್ದು ಗಮನ ಹರಿಸಿ ಮುಕ್ತಾಯಗೊಳಿಸಲು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಿಂದಿನ ಸಭೆಯಲ್ಲಿ ನೀಡಿದ ನಿರ್ದೇಶನದಂತೆ ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲಿಸಲಾಯಿತು.
- ಬಾಕಿ ಇರುವ ಕಾಮಗಾರಿಗಳ ಬಗ್ಗೆ ಪ್ರತಿ ವಾರ ಪರಿಶೀಲಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ರವರಿಗೆ ಸೂಚಿಸಲಾಯಿತು.
- ಈ ಬಗ್ಗೆ ಇಲಾಖಾವಾರು ಆರ್ಥಿಕ ಹಾಗೂ ಭೌತಿಕ ಶೇಕಡವಾರು ಪ್ರಗತಿಯನ್ನು ಪರಿಶೀಲಿಸಲಾಗಿ, ನಿಗದಿತ ಗುರಿಯನ್ನು ಸಾಧಿಸದೇ ಇರುವ ಇಲಾಖೆಗಳಿಗೆ ಕೂಡಲೇ ಈ ಬಗ್ಗೆ ಗಮನ ಹರಿಸಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.

**ಕಂದಾಯ ವಿಷಯಗಳು:**

- **ಸಕಾಲ:**

  ಸಕಾಲ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ, ನಿಗದಿತ ಅವಧಿಯೊಳಗೆ ಬಾಕಿ ಇರುವ ಎಲ್ಲಾ ಪ್ರಕರರಣಗಳನ್ನು ಕಾಲ ಮಿತಿಯೊಳಗೆ ವಿಲೇವಾರಿ ಮಾಡಲು ಸೂಚಿಸಲಾಯಿತು.

- ***ದರಖಾಸ್ತು ಪೋಡಿ ಆಂದೋಲನ:***

  ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರೆ ಹೋಬಳಿ, 2 ಹೋಬಳಿಗಳಲ್ಲಿ ಬರುವ ಎಲ್ಲಾ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡುವ ಕಾರ್ಯವನ್ನು ಪೂರ್ಣಗೊಳಿಸಲು ತಹಶೀಲ್ದಾರ್, ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲ್ಲೂಕುರವರಿಗೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು, ಹೆಚ್ಚಿನ ಪ್ರಗತಿ ಸಾಧಿಸಿಲ್ಲವಾದ ಕಾರಣ ಮುಂದಿನ ಸಭೆಯೊಳಗೆ ಪ್ರಕರಣಗಳನ್ನು ಮುಕ್ತಾಯಗೊಳಿಸಲು ತಹಶೀಲ್ದಾರ್ ಹಾಗೂ ಡಿ.ಡಿ.ಎಲ್.ಆರ್ ರವರಿಗೆ ಸೂಚಿಸಲಾಯಿತು.

- **94ಎ, 94ಬಿ, 94ಸಿ ಮತ್ತು 94ಸಿಸಿ:**

  ಈ ವಿಷಯದ ಬಗ್ಗೆ ಮಾತನಾಡುತ್ತಾ, 94(ಎ)ರಡಿ ಸ್ವೀಕೃತವಾದ ಎಲ್ಲಾ ಅರ್ಜಿಗಳು ವಿಲೇವಾರಿಯಾಗಿದ್ದು, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 63 ಪ್ರಕರಣಗಳು ಹಾಗೂ ನೆಲಮಂಗಲ ತಾಲ್ಲೂಕಿನಲ್ಲಿ 198 ಪ್ರಕರಣಗಳಿಗೆ ಸಾಗುವಳಿ ಚೀಟಿ ನೀಡಲು ಬಾಕಿ ಇದ್ದು ಹಾಗೂ ಅನಧಿಕೃತ ಸಾಗುವಳಿ ಸಕ್ರಮೀಕರಣ ನಿಯಮ 94(ಬಿ)ರಡಿಯಲ್ಲಿ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ–09 ಅರ್ಜಿಗಳು, ದೇವನಹಳ್ಳಿ ತಾಲ್ಲೂಕಿನಲ್ಲಿ–15 ಅರ್ಜಿಗಳು, ಹೊಸಕೋಟೆ ತಾಲ್ಲೂಕಿನಲ್ಲಿ–171 ಅರ್ಜಿಗಳು ಹಾಗೂ ದೊಡ್ಡಬಳ್ಳಾಪುರ

ತಾಲ್ಲೂಕಿನಲ್ಲಿ–127 ಅರ್ಜಿಗಳು ಬಾಕಿ ಇದ್ದು, ಈ ಅರ್ಜಿಗಳನ್ನು ಕೂಡಲೇ ನಿಯಮಾನುಸಾರ ವಿಲೇವಾರಿ ಮಾಡಲು ಎಲ್ಲಾ ತಹಶೀಲ್ದಾರ್‌ರವರಿಗೆ ಸೂಚಿಸಲಾಯಿತು.

94(ಸಿ)ರಡಿಯಲ್ಲಿ ಹೊಸಕೋಟೆ ತಾಲ್ಲೂಕಿನಲ್ಲಿ 68, ನೆಲಮಂಗಲ ತಾಲ್ಲೂಕಿನಲ್ಲಿ 8 ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 51 ಪ್ರಕರಣಗಳು ಸಕ್ರಮಗೊಳಿಸಲು ಬಾಕಿ ಇದ್ದು, ಹಾಗೂ 94ಸಿಸಿ ರಡಿಯಲ್ಲಿ ಹೊಸಕೋಟೆ 36, ನೆಲಮಂಗಲ 122, ದೇವನಹಳ್ಳಿ 1264 ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 780 ಪ್ರಕರಣಗಳು ಬಾಕಿ ಇದ್ದು, ಈ ಎಲ್ಲಾ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟ ತಹಶೀಲ್ದಾರರಿಗೆ ಸೂಚಿಸಲಾಯಿತು.

- **ಕಂದಾಯ/ಪಿಂಚಣಿ ಅದಾಲತ್:**

  ಕಂದಾಯ/ಪಿಂಚಣಿ ಅದಾಲತ್ ಯೋಜನೆಗಳು ಸಾರ್ವಜನಿಕರಿಗೆ ನೇರವಾಗಿ ಸೇವೆಗಳನ್ನು ಒದಗಿಸುವಂತಹ ಯೋಜನೆಗಳಾಗಿದ್ದು, ಹೆಚ್ಚಿನ ಅದಾಲತ್‌ಗಳನ್ನು ನಡೆಸಿ ಸ್ವೀಕೃತವಾದ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಎಲ್ಲಾ ತಹಶೀಲ್ದಾರ್ ರವರಿಗೆ ಸೂಚಿಸಲಾಯಿತು.

➢ ಸ್ಮಶಾನ ಜಮೀನು ಒತ್ತುವರಿಯಾಗಿದ್ದಲ್ಲಿ ಒತ್ತುವರಿ ತೆರವುಗೊಳಿಸಲು ಸೂಚಿಸಲಾಯಿತು.

➢ ಜಿಲ್ಲಾ ಆರೋಗ್ಯಾಧಿಕಾರಿಗಳು, ಈ ಬಾರಿ ಪಲ್ಸ್‌ಪೋಲಿಯೊ ಕಾರ್ಯಕ್ರಮಗಳನ್ನು ನೂರಕ್ಕೆ ನೂರರಷ್ಟು ಯಶಸ್ವಿಯಾಗಿ ನಡೆಸಲಾಯಿತು ಎಂದು ತಿಳಿಸಿದರು.

➢ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2 ಚಿಕನ್‌ಗುನ್ಯಾ ಪ್ರಕರಣಗಳು ಹಾಗೂ 12 ಡೆಗ್ಯೂ ಪ್ರಕರಣಗಳು ದಾಖಲಾಗಿದ್ದು, ಎಲ್ಲರೂ ಗುಣಮುಖರಾಗಿ ಆರೋಗ್ಯದಿಂದಿರುತ್ತಾರೆಂದು ತಿಳಿಸಿದರು.

➢ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ, ಅನಾಥಾಲಯಗಳಿಗೆ ಅನುದಾನ ನೀಡಲು ಎಷ್ಟು ಅನಾಥಾಲಯಗಳು ಇವೆ ಎಂಬುದನ್ನು ಪರಿಶೀಲಿಸಲು ಸೂಚಿಸಲಾಯಿತು.

ಎಲ್ಲಾ ಇಲಾಖೆಗಳ ಪ್ರಗತಿ ವರದಿಗಳನ್ನು ಪರಿಶೀಲಿಸಲಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಯಿತು

28/03/19

(ಡಾ:ಬಿ.ಬಸವರಾಜು)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಾರಿಗೆ ಇಲಾಖೆ ಹಾಗೂ
ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳು
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು ದಿನಾಂಕ:18/3/2019ರಂದು ಕೈಗೊಂಡ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಪ್ರಮುಖವಾಗಿ ಪರಿಶೀಲಿಸಿದ ಅಂಶಗಳು**

| ಕ್ರ ಸಂ | ಅಂಶಗಳು | ಷರಾ |
|---|---|---|
| 1 | ಜಿಲ್ಲೆಯ ಹೆಸರು | ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ:ಬಿ. ಬಸವರಾಜು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ. |
| 3 | ಭೇಟಿಯಾದ ದಿನಾಂಕ | 18/3/2019 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ದೇವನಹಳ್ಳಿ ತಾಲ್ಲೂಕು, ವಿಜಯಪುರ ರಸ್ತೆಯಲ್ಲಿರುವ ಗುಡುವನಹಳ್ಳಿ ಸಾಮಾಜಿಕ ಅರಣ್ಯ ಇಲಾಖೆಯ ನರ್ಸರಿಯಲ್ಲಿ ಹೊಂಗೆ, ಸಿಲ್ವರ್ ಓಕ್, ಹೆಬ್ಬೇವು, ಕರಿಬೇವು, ಹೊನ್ನೆ, ಬೀಟೆ, ಟೀಕ್ ಮುಂತಾದ ವಿವಿಧ ಜಾತಿಯ ಸಸಿಗಳನ್ನು ಆರ್.ಎಸ್.ಎಫ್.ಡಿ, ಸಾಮಾಜಿಕ ಅರಣ್ಯ, ನರೇಗಾ, ಎಸ್.ಎಂ.ಎ.ಎಫ್ ಮತ್ತು ಹಸಿರು ಕರ್ನಾಟಕ ಯೋಜನೆಯಲ್ಲಿ ಮುಂದಿನ ಸಾಲಿಗೆ ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳಿಗೆ ಬೇಕಾಗುವ ಒಟ್ಟು 331816 ಸಸಿಗಳನ್ನು ಬೆಳೆಸಿರುವ ಬಗ್ಗೆ ವಲಯ ಅರಣ್ಯಾಧಿಕಾರಿ ರವರು ಮಾಹಿತಿ ನೀಡಿದರು.<br><br>ನರ್ಸರಿಯ ಇಲಾಖಾಧಿಕಾರಿಗಳಿಗೆ ಸಾರ್ವಜನಿಕರಿಗೆ ಕಾಣುವ ಹಾಗೆ ನರ್ಸರಿಯ ನಾಮಫಲಕ ಹಾಕಲು ಹಾಗೂ ನರ್ಸರಿ ಸುತ್ತಲೂ ಇರುವ ಕಾಂಪೌಂಡ್ ಒಳಗೆ ನೆರಳು ಬರುವಂತಹ ಗಿಡಗಳನ್ನು ನೆಡಲು ಮತ್ತು ಖಾಸಗಿಯವರು ವೈಜ್ಞಾನಿಕವಾಗಿ ನರ್ಸರಿಯನ್ನು ನಿರ್ವಹಣೆ ಮಾಡುವ ರೀತಿ ಖಾಸಗಿ ನರ್ಸರಿಗಳನ್ನು ಅಧ್ಯಯನ ಮಾಡಿ ಅಳವಡಿಸಿಕೊಳ್ಳಲು ಸಲಹೆ ನೀಡಲಾಯಿತು.<br><br>ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯಲ್ಲಿ 2017–18ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಾಳೆಹಣ್ಣು ಮಾಗಿಸುವ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು. ಈ ಘಟಕವು 175 ಟನ್ ಸಾಮರ್ಥ್ಯದ ಬಾಳೆಹಣ್ಣನ್ನು ನಿಯಮಿತವಾಗಿ ಒಂದೇ ಬಾರಿ ಮಾಗಿಸುವುದಾಗಿದ್ದು, ಬೆಂಗಳೂರು ಗ್ರಾಮಾಂತರ ಹಾಗೂ ಸುತ್ತಮುತ್ತಲಿನ ಜಿಲ್ಲೆಯ ರೈತರು ಸಹ ಈ ಘಟಕದಲ್ಲಿ ಬಾಳೆಹಣ್ಣು ಮಾಗಿಸುವ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಘಟಕದ ಫಲಾನುಭವಿಯಾದ ಶ್ರೀ ಭಾಸ್ಕರ್ ರೆಡ್ಡಿಯವರು ಈ ಘಟಕದ ಕಾರ್ಯ ವಿಧಾನಗಳನ್ನು ವಿವರವಾಗಿ ತಿಳಿಸಿರುತ್ತಾರೆ. ಈ ಘಟಕವು ಬಾಳೆಹಣ್ಣು ಅಲ್ಲದೆ ಮಾವಿನ ಹಣ್ಣನ್ನು ಸಹ ನೈಸರ್ಗಿಕವಾಗಿ ಮಾಗಿಸುವ ಸಾಮರ್ಥ್ಯ ಹೊಂದಿದ್ದು, ಈ ಸಾಲಿನಲ್ಲಿ ಮಾವಿನ ಹಣ್ಣನ್ನು ಸಹ ಮಾಗಿಸಲು ಕ್ರಮ ವಹಿಸಿರುವುದಾಗಿ ತಿಳಿಸಿರುತ್ತಾರೆ.<br><br>ಬಾಲೇಪುರ ಗ್ರಾಮದಲ್ಲಿ ಶಿಕ್ಷಣ ಇಲಾಖೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 5 ಕೊಠಡಿ ನಿರ್ಮಾಣ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಲಾಗಿ, ಶಾಲೆಯ 3 ಕೊಠಡಿಗಳ ಅಂದಾಜು ಮೊತ್ತ |

| | | |
|---|---|---|
| | | ರೂ. 25.56 ಲಕ್ಷಗಳಾಗಿದ್ದು, ಈ ಶಾಲಾ ಕಟ್ಟಡವನ್ನು ರಾಷ್ಟ್ರೀಯ ಹೆದ್ದಾರಿಯಿಂದ ಪರಿಹಾರ ನೀಡಿದ ಮೊತ್ತದಲ್ಲಿ ನಿರ್ಮಿಸಲಾಗಿದೆ. ಮತ್ತು 2 ಕೊಠಡಿಗಳ ಅಂದಾಜು ಮೊತ್ತ 17.40 ಲಕ್ಷದಲ್ಲಿ ಅನುಷ್ಠಾನ ಏಜೆನ್ಸಿ, ನಿರ್ಮಿತಿ ಕೇಂದ್ರದವರಿಂದ ನಿರ್ಮಾಣ ಮಾಡಲಾಗಿದೆ ಎಂದು ಸ್ಥಳದಲ್ಲಿ ಹಾಜರಿದ್ದ ಶಾಲಾ ಕಟ್ಟಡದ ಇಂಜಿನಿಯರ್ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಶಾಲಾ ಮುಂಭಾಗದಲ್ಲಿರುವ ಮೈದಾನವನ್ನು ಶುಚಿಗೊಳಿಸಿ, ನೆರಳು ಬರುವಂತಹ ಗಿಡಗಳನ್ನು ನೆಟ್ಟು ಶಾಲಾ ಆಟದ ಮೈದಾನವನ್ನು ಅಭಿವೃದ್ಧಿ ಪಡಿಸಲು ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.<br><br>ಚೀಮಾಚನಹಳ್ಳಿ ಗ್ರಾಮದಲ್ಲಿರುವ ಶ್ರೀ ನಂಜಪ್ಪ ಬಿನ್ ರಾಮಾಂಜಿನಪ್ಪ ರವರ ಪಾಲಿ ಹೌಸ್ ಘಟಕಕ್ಕೆ ಭೇಟಿ ನೀಡಲಾಯಿತು.<br><br>ಸೂಲಿಬೆಲೆ (ರಾಂಪುರ) ಗ್ರಾಮದಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ರೂ. 50.00 ಲಕ್ಷಗಳ ಅಂದಾಜು ಮೊತ್ತದಲ್ಲಿ 480 ಮೀಟರ್ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿದ್ದು, ಸದರಿ ಕಾಮಗಾರಿಯನ್ನು ಪರಿಶೀಲಿಸಿ ಕಾಂಕ್ರೀಟ್ ರಸ್ತೆ ಎರಡು ಬದಿಗಳಲ್ಲಿ ಚರಂಡಿ ವ್ಯವಸ್ಥೆ ಹಾಗೂ ಚರಂಡಿ ನಿರ್ಮಾಣವನ್ನು ಸಮರ್ಪಕವಾಗಿ ಮಾಡದಿರುವುದನ್ನು ಗಮನಿಸಿ, ಸಮರ್ಪಕ ಚರಂಡಿ ನಿರ್ಮಾಣ ಮಾಡಲು ಸೂಚಿಸಲಾಯಿತು. ಸೂಲಿಬೆಲೆ (ರಾಂಪುರ) ಗ್ರಾಮದ ಗ್ರಾಮಸ್ಥರನ್ನು ಕುಡಿಯುವ ನೀರಿನ ಬಗ್ಗೆ ವಿಚಾರಿಸಲಾಗಿ, ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ ಬಗೆ ಹರಿದಿದ್ದು, ಕುಡಿಯುವ ನೀರಿನ ವ್ಯವಸ್ಥೆ ಉತ್ತಮವಾಗಿದೆ ಎಂದು ಗ್ರಾಮಸ್ಥರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.<br><br>ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸದರಿ ಗ್ರಾಮದ ವ್ಯಾಪ್ತಿಯಲ್ಲಿ ಬಹು ಕಮಾನು ಚೆಕ್ ಡ್ಯಾಂ (Multiyar Check Dam) ನ್ನು ನಿರ್ಮಿಸಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 5.00 ಲಕ್ಷ, ಪ್ರಸ್ತುತ ಖರ್ಚು ರೂ. 3.30 ಲಕ್ಷಗಳಾಗಿದ್ದು, ಸದರಿ ಕಾಮಗಾರಿಯನ್ನು ಪರಿಶೀಲಿಸಿ ಬಹು ಕಮಾನು ಚೆಕ್ ಡ್ಯಾಂ ನ ಎರಡು ಬದಿಗಳಲ್ಲಿ ರಿವೀಟ್‌ಮೆಂಟ್ ಮಾಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಯಿತು.<br><br>ಸೂಲಿಬೆಲೆ ಗ್ರಾಮದಲ್ಲಿ 2018-19ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅಂದಾಜು ಮೊತ್ತ ರೂ. 9.9 ಲಕ್ಷಗಳಲ್ಲಿ ಕಲ್ಯಾಣಿಯನ್ನು ಅಭಿವೃದ್ಧಿ ಮಾಡಲಾಗಿದ್ದು, ಸದರಿ ಕಲ್ಯಾಣಿ ಅಭಿವೃದ್ಧಿಗೆ ಒಟ್ಟು ಖರ್ಚು ರೂ. 8.8 ಲಕ್ಷಗಳಾಗಿರುತ್ತದೆ. ಕಲ್ಯಾಣಿ ಸುತ್ತಲೂ ಬೇಲಿ ಹಾಕಿ, ಗಾರ್ಡನ್ ಅಭಿವೃದ್ಧಿ ಹಾಗೂ ವಾಕಿಂಗ್ ಪಾತ್ ನಿರ್ಮಾಣ ಮಾಡಿ ಗಿಡ ನೆಡಲು ಸ್ಥಳದಲ್ಲಿ ಹಾಜರಿದ್ದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಲಾಯಿತು.<br><br>ಸದರಿ ಗ್ರಾಮದ ಕಲ್ಯಾಣಿ ಪಕ್ಕದಲ್ಲಿರುವ ಸ್ಮಶಾನವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ |

| | | |
|---|---|---|
| | | ಅಭಿವೃದ್ಧಿಪಡಿಸಿ ಸುತ್ತಲೂ ಕಾಂಪೌಂಡ್ ನಿರ್ಮಾಣ ಮಾಡಿದ್ದು, ಅಗತ್ಯ ವ್ಯವಸ್ಥೆ ಕಲ್ಪಿಸಿರುತ್ತಾರೆ. ಸ್ಮಶಾನದಲ್ಲಿ ಜಾಗ ಇರುವ ಕಡೆ ಮುಂದಿನ ಸಾಲಿನಲ್ಲಿ ಗಿಡ ನೆಟ್ಟು ಬೆಳೆಸಲು ಸೂಚಿಸಲಾಯಿತು. |

28/03/19

(ಡಾ:ಬಿ.ಬಸವರಾಜು)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಾರಿಗೆ ಇಲಾಖೆ ಹಾಗೂ
ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳು
ಬೆಂಗಳೂರು ಗ್ರಾಮಾಂತರ ಜಿಲ್ಲೆ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಜಿಲ್ಲಾ ಪ್ರಗತಿ ಪರಿಶೀಲನಾ ವರದಿ:-

| ಕ್ರ ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಕೊಡಗು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ವಿ. ಅನ್ಬುಕುಮಾರ್ ಭಾ.ಆ.ಸೇ |
| 3 | ಭೇಟಿಯಾದ/ಪ್ರವಾಸದ ದಿನಾಂಕ | ಮಾರ್ಚ್-2019<br>ದಿನಾಂಕ: 21.03.2019 ರಿಂದ ದಿನಾಂಕ: 22.03.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಈ ಕೆಳಗಿನಂತಿದೆ. |

ಮಾರ್ಚ್ ದಿನಾಂಕ:21.03.2019 ರಿಂದ ದಿನಾಂಕ:22.03.2019 ರವರೆಗೆ ಕೊಡಗು ಜಿಲ್ಲೆಗೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಲಾಗಿದೆ. ವಿವರ ಈ ಕೆಳಗಿನಂತಿದೆ.

### ಸಂಕ್ಷಿಪ್ತ ಮಾಹಿತಿ:-

ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನೆಯ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

- ಬರ ಪೀಡಿತ ಪ್ರದೇಶಗಳ ಕಾಮಗಾರಿ ಪ್ರಗತಿ ಪರಿಶೀಲನೆ
- ಸಂತ್ರಸ್ಥರಿಗೆ ನಿರ್ಮಿಸಲಾಗುತ್ತಿರುವ ಮನೆಗಳ ಪ್ರಗತಿ ಪರಿಶೀಲನೆ.
- ಕುಡಿಯುವ ನೀರು ಮತ್ತು ನೈರ್ಮಲ್ಯದ ಬಗ್ಗೆ ಪರಿಶೀಲನೆ.
- ರಸ್ತೆ/ಡಾಂಬರೀಕರಣ/ಒಳಚರಂಡಿ ವ್ಯವಸ್ಥೆಯ ಕಾಮಗಾರಿ.
- ಇತರೆ ವಿಷಯಗಳು

**ಸಭೆಯ ಛಾಯಚಿತ್ರಗಳು:-**











## ಪ್ರಸ್ತುತ ಮನೆ ಕಾಮಗಾರಿಯ ವಿವರ:


| Sl No: | Location | Total No of Houses | Started | Foundation | Roof | 80% Finishing | 100% Finishing |
|---|---|---|---|---|---|---|---|
| 1 | Madhe | 80 | 80 | 64 | 16 | - | - |
| 2 | Karnagere | 40 | 36 | 35 | 29 | 25 | - |
| 3 | Madap ura | 318 | 318 | 318 | - | - | - |
| | **Total** | **438** | **434** | **433** | **45** | **25** | - |

## ಕರ್ಣಂಗೇರಿ ಪ್ರದೇಶ



**ಮದೆ ಪ್ರದೇಶ**




## ಮಾದಾಪುರ ಪ್ರದೇಶ











## ಮನೆ ಬಾಡಿಗೆ ಪಾವತಿಯ ವಿವರ

| ಕ್ರ.ಸಂ | ಮಾಹೆ | ಒಟ್ಟು ಸಂತ್ರಸ್ತರ ಸಂಖ್ಯೆ | ಬಾಡಿಗೆ ಭತ್ಯೆ ಪಾವತಿಸಲಾದ ಸಂತ್ರಸ್ಥರ ಸಂಖ್ಯೆ | ಸಂತ್ರಸ್ತರಿಗೆ ಬಿಡುಗಡೆ ಮಾಡಿದ ಅನುದಾನ (ರೂ ಲಕ್ಷಗಳಲ್ಲಿ) |
|---|---|---|---|---|
| 1 | ನವೆಂಬರ್–2018 | 480 | 480 | 48.00 |
| 2 | ಡಿಸಂಬರ್–2018 | 415 | 174 | 17.40 |
| 3 | ಜನವರಿ–2019 | 415 | 174 | 17.40 |
| ಒಟ್ಟು | | | | **82.80** |

**ಷರಾ:** ಕೊಡಗು ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಲ್ಲಿ ಪೂರ್ಣ/ ತೀವ್ರ ಮನೆ ಹಾನಿಯಾದ ಒಟ್ಟು 415 ಸಂತ್ರಸ್ತರ ಪೈಕಿ 174 ನಿರಾಶ್ರಿತರಿಗೆ ಡಿಸಂಬರ್–2018 ಮತ್ತು ಜನವರಿ–2019 ಮಾಹೆಯ ಬಾಡಿಗೆ ಭತ್ಯೆ ಪಾವತಿಸಲಾಗಿದ್ದು, ಉಳಿದ 241 ನಿರಾಶ್ರಿತರಿಗೆ ಡಿಸಂಬರ್–2018 ಮತ್ತು ಜನವರಿ–2019 ಮಾಹೆಯ ಬಾಡಿಗೆ ಭತ್ಯೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರಗತಿ ಪರಿಶೀಲನೆ ಕುರಿತು ದಿನಪತ್ರಿಕೆಗಳಲ್ಲಿ ವರದಿ:–



ಕುಡಿಯುವ ನೀರು ಪೂರೈಕೆಯತ್ತ ಗಮನಹರಿಸಲು ಸೂಚನೆ

## 'Initiate measures to solve water crisis in Kodagu'

MADIKERI, DHNS: District In-charge Secretary Anbu Kumar directed the officials to initiate precautionary measures to solve the drinking water woes in Kodagu district.

Chairing a meeting on Friday, he said the officials should ensure that there no disruption in the supply of water. The work on repairing the collapsed roads has been completed. The work on the collapsed retaining walls is yet to finished.



Kodagu District In-charge Secretary Anbu Kumar (second from right) speaks at a meeting in Madikeri on Friday.

He said the works taken up under the Rural Drinking Water and Sanitation, Panchayat Raj Departments and PWD should be completed at the earliest. He directed officials to clear wooden logs that have remained buried in silt. The wooden logs will pose a hurdle for the free flow of water during monsoon.

DC Annies Kanmani Joy said the construction of houses at Madapura, Karnangeri and Madenadu is in progress. The work on construction of houses by Infosys Foundation will commence from April first week.

## ನೀರಿನ ಸಮಸ್ಯೆ ಬಗೆಹರಿಸಲು ಕ್ರಮಕ್ಕೆ ಸೂಚನೆ



*—*—*—*—*—*—*

## ದಿನಾಂಕ 07.03.2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು ಇವರು ತುಮಕೂರಿನಲ್ಲಿ ಕೈಗೊಂಡ ಸಭೆ ಮತ್ತು ಕ್ಷೇತ್ರ ಪರಿವೀಕ್ಷಣೆಯ ವಿವರಗಳು.

- ಬೆಳಗ್ಗೆ 10.30 ಗಂಟೆಗೆ ತುಮಕೂರಿಗೆ ಆಗಮನ ಹಾಗೂ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್ ಹಾಗೂ ಇತರೆ ಅಧಿಕಾರಿಗಳೊಂದಿಗೆ ಬರ ಪರಿಹಾರಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.
- ಬೆಳಗ್ಗೆ 11.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಗಳಲ್ಲಿ ಒಂದಾದ ಹೊರವರ್ತುಲ ರಸ್ತೆಯ ಅಭಿವೃದ್ಧಿ ಕಾಮಗಾರಿಯ ಪ್ರಗತಿಯ ಕುರಿತು ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ಕಾಮಗಾರಿಗಳು ವೇಗವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.
- ಮಧ್ಯಾಹ್ನ 12.00 ಗಂಟೆಗೆ ಕಿರಿಯ ಆರೋಗ್ಯ ಕೇಂದ್ರ, ಜಯನಗರ, ತುಮಕೂರು ಇಲ್ಲಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಡಿಜಿಟಲ್ ನರ್ವ್ ಸೆಂಟರ್ ಯೋಜನೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳು, ಆಯುಕ್ತರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಜಿಲ್ಲಾ ಆರೋಗ್ಯ ಅಧಿಕಾರಿಗಳೊಂದಿಗೆ ಭಾಗವಹಿಸಿದರು.
- ಮಧ್ಯಾಹ್ನ 12.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಗಳಲ್ಲಿ ಇನ್ನೊಂದಾದ ಇಂಟಿಗ್ರೇಟೆಡ್ ಕಮ್ಯಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICMCC) ಕಾಮಗಾರಿಯ ಅನುಷ್ಠಾನಕ್ಕೆ ಸ್ಥಳ ಗುರುತಿಸುವ ಕುರಿತು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಕಛೇರಿಗೆ ತೆರಳಿ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಅಪರ ಪೋಲಿಸ್ ವರಿಷ್ಠಾಧಿಕಾರಿಗಳೊಂದಿಗೆ ಸಭೆ ನಡೆಸಿ ಸ್ಥಳ ಪರಿಶೀಲನೆ ನಡೆಸಲಾಯಿತು.
- ಮಧ್ಯಾಹ್ನ 02.00 ಗಂಟೆಗೆ ಸರ್ಕಾರಿ ಕಿರಿಯ ಪ್ರಾಥಾಮಿಕ ಶಾಲೆ, ಕ್ಯಾತ್ಸಂದ್ರಕ್ಕೆ ತೆರಳಿ ಶಾಲಾ ಮಕ್ಕಳಿಗೆ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳೊಂದಿಗೆ Sai Sure Milk Powder ನ್ನು ವಿತರಣೆ ಮಾಡಿದರು, ಶಾಲಾ ಸ್ವಚ್ಛತೆ ಮತ್ತು ಸುವ್ಯವಸ್ಥೆಯ ಬಗ್ಗೆ ಪರಿಶೀಲನೆ ಮಾಡಿ ಮಾಹಿತಿ ಪಡೆಯಲಾಯಿತು.
- ಮಧ್ಯಾಹ್ನ 02.45 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಯಾದ ಇಂಟಿಗ್ರೇಟೆಡ್ ಕಮ್ಯಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICMCC) ಕಾಮಗಾರಿಯನ್ನು ತುಮಕೂರು ಮಹಾನಗರ ಪಾಲಿಕೆ ಕಛೇರಿಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಪಾಲಿಕೆ ಕಛೇರಿಗೆ ತೆರಳಿ ಆಯುಕ್ತರು, ಇತರೆ ಪಾಲಿಕೆ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದು ಚರ್ಚಿಸಲಾಯಿತು ಹಾಗೂ ಪಾಲಿಕೆಯ ತೆರಿಗೆ ವಿಷಯವಾಗಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ತುರ್ತುಗತಿಯಲ್ಲಿ ತೆರಿಗೆ ಹಣವನ್ನು ಪಾಲಿಕೆಗೆ ವಸುಲಾತಿ ಮಾಡಲು ಸೂಚಿಸಲಾಯಿತು.
- ಮಧ್ಯಾಹ್ನ 03.15 ಗಂಟೆಗೆ ಎಂಪ್ರೆಸ್ ಬಾಲಕಿಯರ ಶಾಲೆ, ಅಶೋಕ ರಸ್ತೆಗೆ ತೆರಳಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಅನುಷ್ಠಾನಗೊಳಿಸಿದ ಸ್ಮಾರ್ಟ್ ಕ್ಲಾಸ್ ರೂಂನ್ನು ಮಾನ್ಯ ಶಾಸಕರೊಂದಿಗೆ ಚಾಲನೆ ನೀಡಿ, ಅದರ ಉಪಯೋಗದ ಬಗ್ಗೆ ಮಕ್ಕಳು ಹಾಗೂ ಪ್ರಾಧ್ಯಾಪಕರೊಂದಿಗೆ ಚರ್ಚಿಸಲಾಯಿತು.

❖ ಮಧ್ಯಾಹ್ನ 04.00 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಜಂಟಿ ವ್ಯವಸ್ಥಾಪಕ ನಿರ್ದೇಶಕರು, ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಹಾಗೂ ಎಲ್ಲಾ ಅಧಿಕಾರಿಗಳೊಂದಿಗೆ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ಸಭೆಯನ್ನು ಕೈಗೊಂಡು ಚರ್ಚಿಸಿ ಹಾಗೂ ಪ್ರಗತಿಯಲ್ಲಿರುವ ಯೋಜನೆಗಳ ಬಗ್ಗೆ ಪೂರಕ ವಿವರಗಳನ್ನು ಪಡೆದು ತುರ್ತುಗತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

(ಡಾ:ಶಾಲಿನಿ ರಜನೀಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ, ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ.

**ದಿನಾಂಕ: 21.03.2019 ರಂದು ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂ.ಎಸ್.ಎಂ.ಇ & ಗಣಿ) ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಉಡುಪಿ ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನಾ ಸಭೆಯ ನಡವಳಿಗಳು:**

**ಸಭೆಯಲ್ಲಿ ಉಪಸ್ಥಿತರಿದ್ದವರು:**

1. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂ.ಎಸ್.ಎಂ.ಇ & ಗಣಿ) ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ
2. ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಡುಪಿ
4. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ

ಜಿಲ್ಲಾಧಿಕಾರಿಯವರು, ಸಭೆಯಲ್ಲಿ ಉಪಸ್ಥಿತರಿದ್ದ, ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಸಭೆಯ ಕಾರ್ಯ ಸೂಚಿಯಂತೆ ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

1. ಉಡುಪಿ ಜಿಲ್ಲೆಯ ಮರಳಿನ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಚರ್ಚಿಸಿದ್ದು, ಈ ಕುರಿತು ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡುತ್ತಾ, ಪ್ರಸ್ತುತ ಜಿಲ್ಲಾ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ 02 ಮರಳು ಬ್ಲಾಕ್‌ಗಳಿಂದ 10,715 ಮೆ.ಟನ್ ಹಾಗೂ ಕೆ.ಆರ್.ಐ.ಡಿ.ಎಲ್ ರವರಿಂದ 02 ಮರಳು ಬ್ಲಾಕ್‌ಗಳಿಂದ 33,837 ಮೆ.ಟನ್‌ನಷ್ಟು ಪ್ರಮಾಣದ ಮರಳು ಲಭ್ಯವಿದ್ದು ಮತ್ತು ನಿರ್ಮಿತಿ ಕೇಂದ್ರದವರಿಂದ ಸುಮಾರು 600 ಮೆ.ಟನ್‌ನಷ್ಟು ಮರಳು ಲಭ್ಯವಿದ್ದು ಒಟ್ಟು 45,152 ಮೆ.ಟನ್‌ನಷ್ಟು ಹಾಗೂ ಸಿಆರ್‌ಝಡ್ ವ್ಯಾಪ್ತಿಯಲ್ಲಿ ಇಬ್ಬರು ತಾತ್ಕಾಲಿಕ ಮರಳುಗಾರರಿಂದ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ಪೂರೈಸಲಾಗುತ್ತಿದ್ದು, ಉಳಿದ ಮರಳು ಬ್ಲಾಕ್‌ಗಳಲ್ಲಿಯೂ ಮರಳುಗಾರಿಕೆ ಪ್ರಾರಂಭಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಮರಳನ್ನು ಸುಲಭವಾಗಿ ದೊರಕಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆಂದು ಹಾಗೂ ಈ ಕುರಿತು ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಂದ ಪ್ರಕಟಣೆ ಮೂಲಕ

ಸಾರ್ವಜನಿಕರಿಗೆ ಅರಿವು ಮೂಡಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆಂದು ಮಾನ್ಯ ಸರ್ಕಾರದ ಕಾರ್ಯದರ್ಶಿಯವರ ಗಮನಕ್ಕೆ ತಂದರು.

2. Non CRZ ಪ್ರದೇಶದಲ್ಲಿ 30 ಮರಳು ಬ್ಲಾಕ್‌ಗಳನ್ನು ಗುರುತಿಸಿದ್ದು, ಅವುಗಳಲ್ಲಿ 7 ಮರಳು ಬ್ಲಾಕ್‌ಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ಹಾಗೂ ತಿದ್ದುಪಡಿ ನಿಯಮಗಳು 2016, 2017 ರ ನಿಯಮ 31–ಎಸ್(1) ರನ್ವಯ ಸರ್ಕಾರಿ ಕಾಮಗಾರಿಗಳಿಗೆ ಮತ್ತು ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಮೀಸಲಿರಿಸಿ, ಸರ್ಕಾರಿ ಇಲಾಖೆಗಳು/ನಿಗಮ/ಮಂಡಳಿ/ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದ್ದು, ಅವುಗಳ ಪೈಕಿ ಪ್ರಸ್ತುತ ಮರಳು ಬ್ಲಾಕ್ ಸಂಖ್ಯೆ 7, 14 & 23 ರಲ್ಲಿ ಮರಳುಗಾರಿಕೆಯನ್ನು ಪ್ರಾರಂಭಿಸಿ ಕೆ.ಆರ್.ಐ.ಡಿ.ಎಲ್ ಉಡುಪಿ ಮತ್ತು ಲೋಕೋಪಯೋಗಿ ಇಲಾಖೆಗಳ ಮೂಲಕ ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಮರಳನ್ನು ಪೂರೈಸುತ್ತಿದ್ದಾರೆ.

3. ಉಳಿದ 23 ಮರಳು ಬ್ಲಾಕ್‌ಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ಹಾಗೂ ತಿದ್ದುಪಡಿ ನಿಯಮಗಳು 2016, 2017 ರ ನಿಯಮ 31–ಎಸ್ (2) ರನ್ವಯ 03 ಹಂತದಲ್ಲಿ ಟೆಂಡರ್ ಕರೆಯಲಾಗಿದ್ದು, ಮೊದಲನೆ ಹಂತದಲ್ಲಿ 11 ಮರಳು ಬ್ಲಾಕ್‌ಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಡ್ಯಾಕ್ಯೂಮೆಂಟ್‌ನಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು ಪರಿಪೂರ್ಣವಾಗಿ ಯಾವುದೇ ಬಿಡ್‌ದಾರರು ಸಲ್ಲಿಸಿರುವುದಿಲ್ಲ. 2 ನೇ ಹಂತದಲ್ಲಿ 06 ಮರಳು ಬ್ಲಾಕ್‌ಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಡ್ಯಾಕ್ಯೂಮೆಂಟ್‌ನಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು ಪರಿಪೂರ್ಣವಾಗಿ ಯಾವುದೇ ಬಿಡ್‌ದಾರರು ಸಲ್ಲಿಸಿರುವುದಿಲ್ಲ.

4. ಮೂರನೇ ಹಂತದಲ್ಲಿ 06 ಮರಳು ಬ್ಲಾಕ್‌ಗಳಿಗೆ ಟೆಂಡರ್ ಕರೆಯಲಾಗಿದ್ದು, ಅವುಗಳಲ್ಲಿ 02 ಮರಳು ಬ್ಲಾಕ್‌ಗಳಿಗೆ ಟೆಂಡರ್ ಡ್ಯಾಕ್ಯೂಮೆಂಟ್‌ನಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು/ ಮಾನದಂಡಗಳನ್ನು ಬಿಡ್‌ದಾರರು ಪರಿಪೂರ್ಣವಾಗಿ ಸಲ್ಲಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಯನ್ನು ಹೊಂದಿದ್ದರಿಂದ ನಿಯಮಾನುಸಾರವಾಗಿ ಮುಂದಿನ ಟೆಂಡರ್ ಪ್ರಕ್ರಿಯೆ ಮುಂದುವರಿಸಿದ್ದು ಸದರಿ ಬಿಡ್‌ದಾರರು ಇ–ಆಕ್ಷನ್‌ನ ಲೈವ್ ಬಿಡ್ ಅನ್ನು ದಿನಾಂಕ: 08.03.2019 ರಂದು ನಡೆಸಲಾಗಿರುತ್ತದೆ. ಆದರೆ ದಿನಾಂಕ: 10.03.2019 ರಂದು ಸಾರ್ವತ್ರಿಕಾ ಲೋಕಾ ಸಭಾ ಚುನಾವಣೆ–2019 ರ ಸಂಬಂಧ ಅಧಿಸೂಚನೆ ಜಾರಿಯಾಗಿದ್ದು, ಪ್ರಸ್ತುತ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮುಂದಿನ ಹಂತದ

ಪ್ರಕ್ರಿಯೆಯನ್ನು ಮುಂದುವರೆಸಿರುವುದಿಲ್ಲ. ಸದರಿಯವರಿಗೆ ಮುಂದಿನ ಹಂತವಾದ Letter of Acceptance ಮತ್ತು Letter of Intent ನೀಡಬೇಕಾಗಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ಮತ್ತು ಮಾರ್ಗದರ್ಶನ ಬೇಕಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ಸರ್ಕಾರದ ಕಾರ್ಯದರ್ಶಿಯವರಿಗೆ ಕೋರಿದರು.

5. ಈ ಸಂದರ್ಭದಲ್ಲಿ ಕಾರ್ಯದರ್ಶಿಯವರು ಮಾತನಾಡುತ್ತಾ, ಜಿಲ್ಲಾಡಳಿತದಿಂದ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿರುವ Screening Committee ಯಲ್ಲಿ ಮಂಡಿಸಿ, ಮುಂದಿನ ಕ್ರಮವಹಿಸುವ ಬಗ್ಗೆ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನ ನೀಡಲಾಗುವುದು ಎಂದು ತಿಳಿಸಿದರು.

6. 2018-19 ನೇ ಸಾಲಿನಲ್ಲಿ CRZ ವ್ಯಾಪ್ತಿಯಲ್ಲಿನ ಮರಳು ದಿಬ್ಬಗಳನ್ನು ತೆರವುಗೊಳಿಸಲು KSCZMA ಬೆಂಗಳೂರು ರವರು 07 ಮರಳು ದಿಬ್ಬಗಳಲ್ಲಿ 17,526.061 ಮೆ.ಟನ್ ಮರಳು ತೆರವುಗೊಳಿಸಲು ಅನುಮೋದನೆ ನೀಡಿದ್ದು, ಅವುಗಳಲ್ಲಿ 02 ಮರಳು ದಿಬ್ಬಗಳಿಗೆ ಮೀನುಗಾರರಿಂದ ಆಕ್ಷೇಪಣೆ ಬಂದಿರುವುದರಿಂದ ಉಳಿದ 05 ಮರಳು ದಿಬ್ಬಗಳಲ್ಲಿ 16,910.524 ಮೆ.ಟನ್ ಮರಳನ್ನು ತೆರವುಗೊಳಿಸಲು 45 ಜನರಿಗೆ ಪರವಾನಿಗೆ ನೀಡಲಾಗಿದ್ದು, ಅದರಲ್ಲಿ 43 ಪರವಾನಿಗೆದಾರರಿಗೆ ನಿಗದಿಪಡಿಸಿರುವ ಮರಳಿನ ಪ್ರಮಾಣವು ಮುಗಿದಿದ್ದು, ಉಳಿದ ಇಬ್ಬರು ಪರವಾನಿಗೆದಾರರು ಜಿಲ್ಲೆಯಲ್ಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಮತ್ತು ಸಾರ್ವಜನಿಕರಿಗೆ ಮರಳನ್ನು ಪೂರೈಸುತ್ತಿದ್ದಾರೆಂದು ಮಾಹಿತಿ ನೀಡಿದರು.

7. ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯದ (OM) ಅಧಿಕೃತ ಜ್ಞಾಪನಗಳಂತೆ ಕರಾವಳಿ ನಿಯಂತ್ರಣ ವಲಯದಲ್ಲಿ (CRZ) ಮೇಲ್ಕಂಡಂತೆ ಈಗಾಗಲೇ ಗುರುತಿಸಿರುವ ಮರಳು ದಿಬ್ಬಗಳಲ್ಲದೆ ಸದರಿ ನದಿ ಪಾತ್ರಗಳಲ್ಲಿ 7 ಸದಸ್ಯರ ಜಿಲ್ಲಾ ಸಮಿತಿಯ ಮೂಲಕ ಮರಳು ದಿಬ್ಬಗಳನ್ನು ಗುರುತಿಸಿ, ಎನ್.ಐ.ಟಿ.ಕೆ ಸುರತ್ಕಲ್ ರವರಿಂದ ಬ್ಯಾಥಮೆಟ್ರಿಕ್ ತಂತ್ರಾಂಶಗಳ ಮೂಲಕ ತಾಂತ್ರಿಕ ವರದಿ ಪಡೆದು, 7 ಸದಸ್ಯರ ಜಿಲ್ಲಾ ಸಮಿತಿ ಸಭೆಯಲ್ಲಿ ಮಂಡಿಸಿ, ಸಮಿತಿಯ ತೀರ್ಮಾನದಂತೆ 08 ಮರಳು ದಿಬ್ಬಗಳಿಗೆ ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ (DCZMA) ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು KSCZMA ಬೆಂಗಳೂರುರವರಿಗೆ ಕಳುಹಿಸಲಾಗಿತ್ತು. ಅದರಂತೆ

KSCZMA ಬೆಂಗಳೂರು ರವರು ಸದರಿ 8 ಮರಳು ದಿಬ್ಬಗಳಲ್ಲಿ ಒಟ್ಟು 7,96,522.71 ಮೆ.ಟನ್ ಪ್ರಮಾಣವನ್ನು ತೆರವುಗೊಳಿಸಲು ಅನುಮೋದನೆ ನೀಡಿರುತ್ತದೆ.

8. ಈ ಕುರಿತು ಕರಾವಳಿ ನಿಯಂತ್ರಣ ವಲಯದಲ್ಲಿ (CRZ) ಅನುಮೋದನೆ ಪಡೆದಿರುವ ಮರಳು ದಿಬ್ಬಗಳನ್ನು ತೆರವುಗೊಳಿಸುವ ಕುರಿತು ಚರ್ಚಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 14.03.2019 ರ ಅಪರಾಹ್ನ 12.30 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ 7 ಸದಸ್ಯರ ಜಿಲ್ಲಾ ಸಮಿತಿ ಸಭೆಯನ್ನು ಕರೆಯಲಾಗಿತ್ತು. ದಿನಾಂಕ: 10.03.2019 ರಿಂದ ಸಾರ್ವತ್ರಿಕ ಲೋಕ ಸಭಾ ಚುನಾವಣಾ–2019ರ ಸಂಬಂಧ ಅಧಿಸೂಚನೆ ಹೊರಡಿಸಿದ್ದು, ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹಾಗೂ 7 ಸದಸ್ಯರ ಜಿಲ್ಲಾ ಸಮಿತಿಯಲ್ಲಿ ಒಬ್ಬರು ಮೀನುಗಾರಿಕಾ ಸಮುದಾಯ ಹಾಗೂ ಇನ್ನಿಬ್ಬರು ಸರ್ಕಾರಿ ಅಧಿಕಾರಿ ಹೊರತುಪಡಿಸಿದ ವ್ಯಕ್ತಿಗಳಿರುವುದರಿಂದ ಸದರಿ ಜಿಲ್ಲಾ ಸಮಿತಿ ಸಭೆಯನ್ನು ನಡೆಸಬಹುದೇ ಎಂಬುದರ ಬಗ್ಗೆ ಮಾರ್ಗದರ್ಶನ ಪಡೆದು, ಮುಂದಿನ ಕ್ರಮವಹಿಸುವ ಸಂಬಂಧ ಸಭೆಯನ್ನು ಮುಂದೂಡಲಾಗಿರುತ್ತದೆ. ಜಿಲ್ಲಾಧಿಕಾರಿಯವರು ಮಾತನಾಡುತ್ತಾ, ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನ ಬೇಕಾಗಿರುತ್ತದೆ ಎಂದು ಸರ್ಕಾರದ ಕಾರ್ಯದರ್ಶಿಯವರಿಗೆ ಕೋರಿದರು.

9. ಈ ಸಂದರ್ಭದಲ್ಲಿ ಸರ್ಕಾರದ ಕಾರ್ಯದರ್ಶಿಯವರು ಮಾತನಾಡುತ್ತಾ, ಜಿಲ್ಲಾಡಳಿತದಿಂದ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿರುವ Screening Committee ಯಲ್ಲಿ ಮಂಡಿಸಿ, ಮುಂದಿನ ಕ್ರಮವಹಿಸುವ ಬಗ್ಗೆ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನ ನೀಡಲಾಗುವುದು ಎಂದು ತಿಳಿಸಿದರು.

10. ಮುಂದುವರೆದು, ದಿನಾಂಕ: 29.01.2019 ರಂದು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಅಧ್ಯಕ್ಷತೆಯಲ್ಲಿ ಉಡುಪಿ ಜಿಲ್ಲೆಯ ಮರಳುಗಾರಿಕೆಗೆ ಸಂಬಂಧಿಸಿದ ವಿಷಯಗಳ ಕುರಿತು ನಡೆದ ಸಭೆಯ ತೀರ್ಮಾನದಂತೆ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ವಿಲೇವಾರಿಯಾಗದೇ ಉಳಿದ 21 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯತ್‌ಗಳ ಮೂಲಕ ಮರಳುಗಾರಿಕೆಗೆ ಅನುಮತಿ ನೀಡಲು ಒಪ್ಪಿಗೆ ಸೂಚಿಸಲಾಗಿರುತ್ತದೆ. ಅದರಂತೆ ಸದರಿ 21 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಸಂಸ್ಥೆಗಳಾದ ಲೋಕೋಪಯೋಗಿ ಇಲಾಖೆಗೆ ಮರಳು ಬ್ಲಾಕ್‌ಗಳ ಸಂಖ್ಯೆ 5, 9, 21 & 22 ಒಟ್ಟು 04 ಮರಳು ಬ್ಲಾಕ್‌ಗಳನ್ನು, ಕೆ.ಆರ್.ಐ.ಡಿ.ಎಲ್ ರವರಿಗೆ ಮರಳು ಬ್ಲಾಕ್ ಸಂಖ್ಯೆ 3, 14 & 15 ಒಟ್ಟು 03,

ನಿರ್ಮಿತಿ ಕೇಂದ್ರದವರಿಗೆ ಮರಳು ಬ್ಲಾಕ್ ಸಂಖ್ಯೆ 29, 30 & 31 ಒಟ್ಟು 03, ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಇವರಿಗೆ ಮರಳು ಬ್ಲಾಕ್ ಸಂಖ್ಯೆ 18, 19, 20 ಒಟ್ಟು 03, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ರವರಿಗೆ ಮರಳು ಬ್ಲಾಕ್ ಸಂಖ್ಯೆ 27 & 28 ಒಟ್ಟು 02, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ 01, ಮರಳು ಬ್ಲಾಕ್ ಸಂಖ್ಯೆ 16, ವರಾಹಿ ಯೋಜನೆಗೆ ಮರಳು ಬ್ಲಾಕ್ ಸಂಖ್ಯೆ 10, 11 & 12 ಒಟ್ಟು 03 ಹಾಗೂ ಗ್ರಾಮ ಪಂಚಾಯತ್‌ಗಳಿಗೆ ಮರಳು ಬ್ಲಾಕ್ ಸಂಖ್ಯೆ 24 & 32 ಒಟ್ಟು 02 ಮರಳು ಬ್ಲಾಕ್‌ಗಳನ್ನು ಮೇ ಅಂತ್ಯದವರೆಗೆ ಸರ್ಕಾರಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ಮರಳನ್ನು ವಿತರಿಸುವ ಸಂಬಂಧ ಮರಳು ಬ್ಲಾಕ್‌ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

11. ಅವುಗಳಲ್ಲಿ ಪ್ರಸ್ತುತ 02 ಮರಳು ಬ್ಲಾಕ್‌ನಲ್ಲಿ ಕೆ.ಆರ್.ಐ.ಡಿ.ಎಲ್ ಉಡುಪಿ ರವರು ಮರಳುಗಾರಿಕೆ ಪ್ರಾರಂಭಿಸಿ ಸರ್ಕಾರಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ಮರಳನ್ನು ಪೂರೈಸುತ್ತಿದ್ದಾರೆ. ಉಳಿದ ಮರಳು ಬ್ಲಾಕ್‌ಗಳಲ್ಲಿ ಕೂಡಲೇ ಮರಳುಗಾರಿಕೆ ಪ್ರಾರಂಭಿಸುವಂತೆ ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ಸರ್ಕಾರದ ಕಾರ್ಯದರ್ಶಿಯವರ ಗಮನಕ್ಕೆ ತಂದರು.

12. ಬ್ರಹ್ಮಾವರ ತಾಲ್ಲೂಕು ಶಿರೂರು ಗ್ರಾಮದ ಬ್ಲಾಕ್ ನಂ. 18, 19, 20 ರಲ್ಲಿ ಮರಳುಗಾರಿಕೆ ನಡೆಸಲು ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಉಡುಪಿ ರವರು ತಮ್ಮ ಕಛೇರಿಯ ಎಲ್ಲಾ ಹಂತಗಳಲ್ಲಿಯೂ ಸಿಬ್ಬಂದಿಗಳ ತೀವ್ರವಾದ ಕಾರ್ಯ ಒತ್ತಡ ಇರುವುದರಿಂದ ಮರಳುಗಾರಿಕೆ ಕಾರ್ಯಭಾರವನ್ನು ಸೂಕ್ತವಾಗಿ ನಿಭಾಯಿಸುವುದು ಕಷ್ಟ ಸಾಧ್ಯವಾಗಿರುವುದರಿಂದ ಮರಳುಗಾರಿಕೆ ಕಾರ್ಯಭಾರದಿಂದ ಹೊರತುಪಡಿಸಲು ವಿನಂತಿಸಿರುತ್ತಾರೆ.

13. ಅದೇ ರೀತಿಯಲ್ಲಿ ಕಾರ್ಕಳ ತಾಲ್ಲೂಕಿನ ಮರಳು ಬ್ಲಾಕ್ ಸಂಖ್ಯೆ: 27 & 28 ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್, ಯೋಜನಾ ವಿಭಾಗ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ರವರು ಒಂದು ಉಪವಿಭಾಗ ಇಡೀ ಜಿಲ್ಲೆಗೆ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಮಂಜೂರಾದ ಮೂರು ಸಹಾಯಕ ಅಭಿಯಂತರರ ಹುದ್ದೆಗೆ ಬದಲಾಗಿ ಕೇವಲ ಓರ್ವ ಸಹಾಯಕ ಅಭಿಯಂತರರು ಕಾರ್ಯನಿರ್ವಹಿಸುತ್ತಿರುವುದರಿಂದ ಮರಳು ವಿತರಣಾ ಜವಾಬ್ದಾರಿಯಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

14. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ವಿಭಾಗ ರವರು ಮಂಡಳಿಯ ವಿಭಾಗ ಹಾಗೂ ಉಪವಿಭಾಗದ ಕಛೇರಿಗಳು ಶಿವಮೊಗ್ಗದಲ್ಲಿರುವುದರಿಂದ ಹಾಗೂ ಕಛೇರಿ ಸಿಬ್ಬಂದಿಯ ಕೊರತೆಯು ತುಂಬಾ ಇರುವುದರಿಂದ ಸದರಿ ಮರಳಿನ ಬ್ಲಾಕ್ ಅನ್ನು ರದ್ದುಗೊಳಿಸಿ ಸಹಕರಿಸಲು ಕೋರಿರುತ್ತಾರೆ.

15. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ರವರು ಈಗಾಗಲೇ ಹಂಚಿಕೆ ಮಾಡಿರುವ ಮರಳು ಬ್ಲಾಕ್ ಸಂಖ್ಯೆ: 29, 30, 31 ಈ ಬ್ಲಾಕ್‌ಗಳಲ್ಲಿ ಸಣ್ಣ ಸಣ್ಣ ಕಲ್ಲಿನ ಪ್ರಮಾಣ ಹೆಚ್ಚಾಗಿದ್ದು, ಮರಳಿನ ಅಂಶವು ಕಡಿಮೆ ಇರುತ್ತದೆ. ಆದ್ದರಿಂದ ಬದಲಿ ಮರಳಿನ ಅಂಶವಿರುವ ಬ್ಲಾಕ್‌ಗಳನ್ನು ಹಂಚಿಕೆ ಮಾಡಲು ಕೋರಿರುತ್ತಾರೆ.

16. ಪ್ರಸ್ತುತ ಜಿಲ್ಲೆಯಲ್ಲಿ ಮರಳಿನ ಸಮಸ್ಯೆಯನ್ನು ಪರಿಹರಿಸಲು ಸಂಬಂಧಿಸಿದ ಎಲ್ಲಾ ಇಲಾಖೆಯವರಿಗೆ ಕೂಡಲೇ ಮರಳುಗಾರಿಕೆ ಪ್ರಾರಂಭಿಸಿ, ಅಭಿವೃದ್ಧಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ಮರಳು ಸಿಗುವಂತೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆಂದು ಸರ್ಕಾರದ ಕಾರ್ಯದರ್ಶಿಯವರಿಗೆ ಮಾಹಿತಿ ನೀಡಿದರು.

ಅಂತಿಮವಾಗಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾರ್ಯದರ್ಶಿಯವರ ಅಪ್ಪಣೆ ಮೇರೆಗೆ ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ. ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಎಂಎಸ್‌ಎಂಇ & ಗಣಿ) ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಶ್ರೀ ಎಂ. ಮಹೇಶ್ವರ್ ರಾವ್ ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂಎಸ್‌ಎಂಇ ಮತ್ತು ಗಣಿ) ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರು ದಿನಾಂಕ: 20.03.2019ರಂದು ಹಾಗೂ ದಿನಾಂಕ:21.03.2019ರಂದು ಉಡುಪಿ ಹಾಗೂ ಮಂಗಳೂರು ಭೇಟಿಯಲ್ಲಿ ನಡೆದ ಸಭಾ ನಡವಳಿಗಳು**

2019ರ ಲೋಕಸಭಾ ಚುನಾವಣೆಗೆ ಸಂಬಂಧಪಟ್ಟಂತೆ ಅಧಿಸೂಚನೆ ಹೊರಡಿಸಿದ್ದು, ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಯಿತು.

1) **ಇನ್‌ಪುಟ್ ಸಬ್ಸಿಡಿ:** ಕ್ರಮ ತೆಗೆದುಕೊಳ್ಳುವ ಅಗತ್ಯವಿಲ್ಲ. ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ.

2) **ಕುಡಿಯುವ ನೀರಿನ ಸಮಸ್ಯೆ:** ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದ್ದು ಸಂಬಂಧಪಟ್ಟ ಅಧಿಕಾರಿಗಳಿಗೆ ಟ್ಯಾಂಕರ್ ಮೂಲಕ ನೀರನ್ನು ಏಪ್ರಿಲ್ ತಿಂಗಳಿನಿಂದ ಒದಗಿಸಲು ನಿರ್ದೇಶನ ನೀಡಲಾಯಿತು. ಜಿಲ್ಲಾಧಿಕಾರಿಗಳ ಬಳಿ ಇರುವ ರೂ.3.00 ಕೋಟಿ ಸಿಆರ್‌ಎಫ್ ನಿಧಿಯನ್ನು ಉಪಯೋಗಿಸಿಕೊಂಡು ನೀರಿನ ಅವಶ್ಯಕತೆ ಇರುವ ಕಡೆ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳುವುದು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ನಿಭಾಯಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1) ಜಿಲ್ಲಾಧಿಕಾರಿಗಳು | – | ಅಧ್ಯಕ್ಷರು |
| 2) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ | – | ಸದಸ್ಯರು |
| 3) ಸಹಾಯಕ ಆಯುಕ್ತರು, ಕುಂದಾಪುರ | – | ಸದಸ್ಯರು |
| 4) ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ | – | ಸದಸ್ಯರು |
| 5) ತಹಶೀಲ್ದಾರ್ | – | ಸದಸ್ಯ ಕಾರ್ಯದರ್ಶಿ |

ಪ್ರತಿ ವಾರ ನೀರಿನ ಸಮಸ್ಯೆ ಬಗ್ಗೆ ಒಂದು ಸಭೆಯನ್ನು ಈ ಸಮಿತಿಯು ನಡೆಸತಕ್ಕದ್ದು.

**ಮೇವಿನ ಲಭ್ಯತೆ:** ಮುಂದಿನ 27 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇವಿನ ಸಮಸ್ಯೆ ಕಂಡುಬರುವುದಿಲ್ಲ.

(ಎಂ. ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಎಂಎಸ್‌ಎಂಇ & ಗಣಿ) ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಉಡುಪಿ

**ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಾಗಲಕೋಟೆ ಹಾಗೂ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 27-03-2019 ರಂದು ಬಾಗಲಕೋಟೆ ಜಿಲ್ಲೆಯ ಬರ ಪರಿಸ್ಥಿತಿ ನಿರ್ವಹಣೆ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

| ಕ್ರಸಂ | ಅಂಶಗಳು | ಮಾನ್ಯ ಪ್ರಾದೇಶಿಕ ಆಯುಕ್ತರ ಷರಾ |
|---|---|---|
| 01 | ಜಿಲ್ಲೆಯ ಹೆಸರು | ಬಾಗಲಕೋಟೆ |
| 02 | ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ | ತುಷಾರ್ ಗಿರಿನಾಥ್, ಭಾ.ಆ.ಸೇ. |
| 03 | ಭೇಟಿಯಾದ / ಪ್ರವಾಸದ ದಿನಾಂಕ | 27-03-2019 |
| 04 | ಮುಖ್ಯವಾಗಿ ಗಮನಿಸಿದ ಅಂಶಗಳು | <u>ಬರಪರಿಸ್ಥಿತಿ ನಿರ್ವಹಣೆ:</u><br>1. ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುತ್ತಿರುವ 4 ಗ್ರಾಮಗಳಲ್ಲಿ [ಬದಾಮಿ ತಾಲೂಕಿನಲ್ಲಿ 2 ಗ್ರಾಮಗಳಾದ ನಂದಿಕೇಶ್ವರ ಆಸರೆ ಕಾಲನಿ, ಲಿಂಗಾಪೂರ,] [ಹುನಗುಂದ ತಾಲೂಕಿನಲ್ಲಿ 2 ಗ್ರಾಮಗಳಾದ ಮುರಡಿ ಮಿಲ್ಕ ಸೆಂಟರ್, ಗುಡೂರ ಎಸ್ ಸಿ ] ಶಾಶ್ವತ ಕುಡಿಯುವ ನೀರು ಪೂರೈಕೆ ಮಾಡಲು ಕೈಕೊಂಡ ಕ್ರಮದ ಕುರಿತು ಮಾಹಿತಿ ನೀಡಲು EE.RWS & D Bagalkot ಇವರಿಗೆ ಕೇಳಿದರು.<br>EE.RWS & D Bagalkot ಇವರು 4 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸುವ ಬಗ್ಗೆ ವಿವರಿಸಿ, ಗುಡೂರ ಎಸ್.ಸಿ. ಗ್ರಾಮಕ್ಕೆ ಚಿಮ್ಮಲಗಿ ಬ್ಯಾರೇಜ್‌ನಿಂದ ರಂಗಸಮುದ್ರ ಕೆರೆಗೆ ನೀರನ್ನು ಎತ್ತಿ ಅಲ್ಲಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ ವಿದ್ಯುತ್ ಸೌಲಭ್ಯ 5-6 ಗಂಟೆ ಮಾತ್ರ ಲಭ್ಯವಿರುವುದರಿಂದ ನೀರು ಪೂರೈಕೆಯಲ್ಲಿ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.<br>2. ಗುಡೂರ ಎಸ್.ಸಿ. ಗ್ರಾಮಕ್ಕೆ ನಿರಂತರ ಜ್ಯೋತಿ ಯೋಜನೆಯಿಂದ 24ಘಿ7 ವಿದ್ಯುತ್ ಒದಗಿಸುವ ಬಗ್ಗೆ ಕೈಕೊಂಡ ಕ್ರಮದ ಬಗ್ಗೆ EE.RWS & D Bagalkot ಇವರಿಗೆ ಕೇಳಿದರು.<br>ಈಗಾಗಲೇ ಶಾಶ್ವತ ಕುಡಿಯುವ ನೀರು ಪೂರೈಕೆಗಾಗಿ NRDWP ಯೋಜನೆಯಡಿ ರೂ. 32.00 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗಿದೆ. ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಆಗಿದೆ. ಆದರೆ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ 24X7 ವಿದ್ಯುತ್ ಪೂರೈಕೆಯಾದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಬಹುದಾಗಿದೆ ಎಂದು EE.RWS & D Bagalkot ಇವರು ತಿಳಿಸಿದರು. |

3. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸಭೆಯಲ್ಲಿಯೇ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ ರವರಿಗೆ ಮಾತನಾಡಿ ನಿರಂತರ ಜ್ಯೋತಿ ಯೋಜನೆಯಡಿ ತಕ್ಷಣ ಕ್ರಮವಹಿಸಿ, 3 ದಿನಗಳಲ್ಲಿ ನೀರು ಪೂರೈಕೆ ಮಾಡಲು ತಿಳಿಸಿದರು. [ಕ್ರಮ: SE.Hescom BGK ]

4. TTF-1 & TTF-2 ಕ್ಕೆ ಸಂಬಂಧಿಸಿದಂತೆ ಕುಡಿಯುವ ನೀರಿನ ಅನುದಾನದಲ್ಲಿ ಒಟ್ಟು ತೆಗೆದುಕೊಂಡ ಕಾಮಗಾರಿಗಳು ಹಾಗೂ ಸದರಿ ಕಾಮಗಾರಿಗಳಿಗೆ ಬೇಕಾಗುವ ಒಟ್ಟು ಅನುದಾನದ ವಿವರ ನೀಡುವುದು. ಬೇಕಾಗುವ ಒಟ್ಟು ಅನುದಾನಕ್ಕೆ ವಿವಿಧ ಯೋಜನೆಯಲ್ಲಿ ನಿಗದಿಪಡಿಸಲಾದ ಹಣ ಮುಖ್ಯವಾಗಿ TTF-1 ರಡಿ, CRF ರಡಿ ಮತ್ತು 14th Finace, ರಡಿಯಲ್ಲಿ ಮೀಸಲಿಟ್ಟ ಹಣದ ವಿವರ ಹಾಗೂ ಕೊರತೆ ಬೀಳುವ ಅನುದಾನಕ್ಕೆ TTF-3 ರಡಿಯಲ್ಲಿ ಹೊಂದಾಣಿಕೆ ಮಾಡಿ ಮೀಸಲಿಟ್ಟ ಹಣದ ವಿವರ ನೀಡಲು EE.RWS & D Bagalkot ಇವರಿಗೆ ತಿಳಿಸಿದರು.

TTF-1 ರಲ್ಲಿ ಒಟ್ಟು 199 ಕೊಳವೆಬಾವಿ ಕೊರೆಯುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ 155 ಸಫಲ ಕೊಳವೆಬಾವಿ ಕಾಮಗಾರಿಗಳಿಗೆ CRಈ ಅನುದಾನದಲ್ಲಿ 243.25 ಲಕ್ಷ ಹಾಗೂ TTF-2 ರಲ್ಲಿ ಒಟ್ಟು65 ಕೊಳವೆ ಬಾವಿಗಳನ್ನು ತೆಗೆದು ಕೊಂಡಿದ್ದು ಇದರಲ್ಲಿ 52 ಕೊಳವೆಬಾವಿಗಳು ಸಫಲವಾಗಿದ್ದು, ಈ ಕಾಮಗಾರಿಗಳಿಗೆ ಹೊಂದಾಣಿಕೆ ಮೊತ್ತವಾಗಿ CRಈ ರಡಿಯಲ್ಲಿ ರೂ. 103.20 ಲಕ್ಷ ಕೋರಲಾಗಿದ್ದು, ಒಟ್ಟು ರೂ,346.45 ಲಕ್ಷ CRF ರಡಿ ಅನುದಾನ ಕೋರಲಾಗಿದೆ ಎಂದು ವಿವರಿಸಿದರು.

ಆದರೆ ಒಟ್ಟು ತಗೆದುಕೊಂಡ ಕಾಮಗಾರಿಗಳಿಗೆ ಬೇಕಾಗುವ ಅನುದಾನದ ವಿವರ ಹಾಗೂ ಇದಕ್ಕೆ ಹೊಂದಾಣಿಯಾಗಿ ತೆಗೆದುಕೊಂಡ ವಿವಿಧ' ಯೋಜನೆಯಲ್ಲಿ [CRF, 14th Finace, TTF-2] ಮಾಹಿತಿ ಸಧ್ಯ ಲಭ್ಯವಿರುವುದಿಲ್ಲವೆಂದು EE.RWS & D Bagalkot ಇವರು ತಿಳಿಸಿದರು. [ ಕ್ರಮ: EE.RWS & D Bagalkot ]

5. ಪ್ರಸ್ತುತ ಟಿಟಿಎಫ್-3 ಅನುದಾನ ಬಿಡುಗಡೆಯಾಗಿದ್ದು, TTF-1 & 2 ರಲ್ಲಿ ಬಿಡುಗಡೆಯಾದ ಅನುದಾನಕ್ಕೆ ಈಗಾಗಲೇ ಕ್ರಿಯಾ ಯೋಜನೆ ರೂಪಿಸಿದ್ದು, ಈ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳಿಗೆ ಅನುದಾನದ ಕೊರತೆ ಕಂಡು ಬಂದಲ್ಲಿ ಅದನ್ನು ಬಳಕೆಮಾಡಿಕೊಂಡು ಮುಕ್ತಾಯಗೊಳಿಸಲು ಸೂಚಿಸಿದರು. ಉಳಿಕೆ ಅನುದಾನಕ್ಕೆ ಮಾತ್ರ ಹೊಸದಾಗಿ ಕ್ರೀಯಾಯೋಜನೆ ಸಿದ್ದಪಡಿಸಲು ಸೂಚಿಸಿದರು.

6. ಟಿಟಿಎಫ್-1 & 2 ರ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸಿಆರ್‌ಎಫ್ ಅನುದಾನ ಬಳಕೆ ಮಾಡುವುದಕ್ಕಿಂತ ಮೊದಲು ಕಾರ್ಯನಿರ್ವಾಹಕ ಅಭಿಯಂತರರಿಂದ ಅಂದಾಜು ಪತ್ರಿಕೆಗಳನ್ನು ತರಿಸಿಕೊಂಡು, ಜಿಲ್ಲಾಧಿಕಾರಿಗಳ ಹಂತದಲ್ಲಿ 3 ದಿನಗಳಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಮಂಜೂರಾತಿ ನೀಡಿದ ಅಂದಾಜು ಪತ್ರಿಕೆಯ ಕಾಮಗಾರಿಗಳಿಗೆ ಮಾತ್ರ ಅನುದಾನ ಬಿಡುಗಡೆ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರು ಟಿಟಿಎಫ್-1 & 2 ರ ಕಾಮಗಾರಿಗಳ ಮುಕ್ತಾಯದ ಬಗ್ಗೆ ಖುದ್ದು ಆಸಕ್ತಿವಹಿಸಿ, ಆಧ್ಯತೆಯ ಮೇಲೆ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಸೂಚಿಸಲಾಯಿತು.

8. ಉಪವಿಭಾಗಾಧಿಕಾರಿಗಳು, ಜಮಖಂಡಿ ಇವರ ಕೋರಿಕೆಯ ಮೇರೆಗೆ ಹಿಪ್ಪರಗಿ ಜಲಾಶಯದ ಹಿನ್ನೀರನ್ನು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ಹಾಗೂ ರಾಯಬಾಗ ತಾಲ್ಲೂಕುಗಳಲ್ಲಿ ನಿರಂತರ ಕೃಷಿಗೆ ನೀರು ಪಡೆಯುತ್ತಿರುವುದರಿಂದ ಕೃಷ್ಣಾ ನದಿಯ ನೀರು ಕಡಿಮೆಯಾಗುತ್ತಿದ್ದು, ತುರ್ತಾಗಿ ವಿದ್ಯುತ್ ಪೂರೈಕೆ ನಿಯಮಿತವಾಗಿ 4-5 ಗಂಟೆ ಮಾತ್ರ ಪೂರೈಸಲು ಸಭೆಯಲ್ಲಿಯೇ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ ಹುಬ್ಬಳ್ಳಿ ಇವರಿಗೆ ದೂರವಾಣಿ ಮುಖೇನ ತಿಳಿಸಿದರು.

9. ಬರ ಪರಿಸ್ಥಿತಿ ನಿರ್ವಹಣೆಗೆ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಲಭ್ಯವಿರುವ ಅನುದಾನದ ಮಾಹಿತಿ ಒದಗಿಸಲು ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳು, ಸಧ್ಯ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ. 9.95 ಕೋಟಿಗಳ ಅನುದಾನ ಲಭ್ಯವಿರುತ್ತದೆ. ಇದರಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಿದ ಟ್ಯಾಂಕರ್ ಬಿಲ್ ಡಿಸೆಂಬರ್-2018 ರಿಂದ ಫೆಬ್ರವರಿ-2019 ವರೆಗೆ ರೂ. 12.51 ಲಕ್ಷಗಳನ್ನು ಪಾವತಿಸಲಾಗಿದೆ.

ಹುನಗುಂದ ತಾಲೂಕಿನಲ್ಲಿ ಮಾರ್ಚ 1 ರಿಂದ 15-03-2019ರವರೆಗೆ ಒಟ್ಟು ರೂ.2.20ಲಕ್ಷ ಅನುದಾನ ಪಾವತಿಸಲಾಗಿದೆ.

ಬದಾಮಿ ತಾಲೂಕಿನಲ್ಲಿ ಮಾರ್ಚ 1 ರಿಂದ ಇಲ್ಲಿಯವರೆಗೆ ಒಟ್ಟು ರೂ.1.62 ಲಕ್ಷ ಅನುದಾನ ಪಾವತಿಸಲು ಬಾಕಿ ಇದೆ. ಈ ಕುರಿತು ಬಾಕಿ ಮೊತ್ತವನ್ನು ಕೂಡಲೇ ಪಾವತಿಸಲು ಕ್ರಮ ವಹಿಸುವುದಾಗಿ ವಿವರಿಸಿದರು.

ಈಗಾಗಲೇ ದಿನಾಂಕ: 29-11-2018 ರಂದು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಿಂದ ಪ್ರತಿ ತಾಲ್ಲೂಕಿಗೆ ರೂ. 30.00 ಲಕ್ಷದಂತೆ ಒಟ್ಟು 6 ತಾಲ್ಲೂಕುಗಳಿಗೆ ರೂ. 180.00 ಲಕ್ಷ ಅನುದಾನ ಬರ ಪರಿಸ್ಥಿತಿ ನಿರ್ವಹಣೆಗೆ [ಟ್ಯಾಂಕರ್ ಮೂಲಕ ನೀರು ಪೂರೈಕೆ, ಗೋಶಾಲೆ, ಮೇವು ಬ್ಯಾಂಕ್ ಮುಂತಾದ ] ಬಿಡುಗಡೆ ಮಾಡಲಾಗಿದೆ ಎಂದು ವಿವರ ಒದಗಿಸಲಾಯಿತು.

ನಗರ ಪ್ರದೇಶ:

10. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ನಗರ ಪ್ರದೇಶಗಳಲ್ಲಿ ಮಂಜೂರಾತಿ ನೀಡಿದ ಒಟ್ಟು ಕಾಮಗಾರಿಗಳಲ್ಲಿ ಒಟ್ಟು ಈವರೆಗೆ ಮುಕ್ತಾಯವಾದ ಕಾಮಗಾರಿಗಳ ವಿವರ ಒದಗಿಸಲು ತಿಳಿಸಿದರು.

PD, DUDC BGK ರವರು ಒಟ್ಟು 15 ನಗರ ಸ್ಥಳೀಯ ಸಂಸ್ಥೆಗಳಿಗೆ ಸನ್ 2018-19ನೇಸಾಲಿನ ಎಸ್ ಎಫ್ ಸಿ ಯೋಜನೆಯಡಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ರೂ,513 ಲಕ್ಷಗಳು ಬಿಡುಗಡೆಯಾಗಿದ್ದು, ಈ ಅನುದಾನಕ್ಕೆ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಕ್ರೀಯಾಯೋಜನೆ ಮಂಜೂರಾತಿ ನೀಡಿದ್ದು. ಒಟ್ಟು 168 ಕಾಮಗಾರಿಗಳನ್ನು ತೆಗೆದು ಕೊಂಡಿದ್ದು ಇವುಗಳ ಪೈಕಿ 30 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. 52 ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತವೆ. ಇನ್ನೂ 86 ಕಾಮಗಾರಿಗಳು ಟೆಂಡರ್ ಪ್ರಕ್ರೀಯೇ ಹಂತದಲ್ಲಿರುತ್ತವೆ ಎಂದು PD, DUDC BGK ಇವರು ತಿಳಿಸಿದರು.

11. ಬಾಕಿ ಇರುವ ಎಲ್ಲ ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಂಡು ಬೇಸಿಗೆಯಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಎಪ್ರಿಲ್-2019 ರ ಅಂತ್ಯದೊಳಗಾಗಿ ಎಲ್ಲ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು. ಸದರಿ ಕಾಮಗಾರಿಗಳನ್ನು ಕಾಲ ಕಾಲಕ್ಕೆ ತಹಶೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು, ಸ್ಥಳ ತನಿಖೆಮಾಡಿ ಖಚಿತ ಪಡಿಸಿಕೊಳ್ಳಲು ನಿರ್ದೇಶಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

12. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾನವದಿನಗಳ ಸೃಜನೆ ಗುರಿಯನ್ನು 24.71 ಲಕ್ಷ ಪರಿಷ್ಕರಿಸಿ 31.50 ಲಕ್ಷ ಗುರಿ ನಿಗದಿಪಡಿಸಿದ್ದು, ಸದರಿ ಗುರಿಯನ್ನು ಮಾರ್ಚ್ 2019ರ ಅಂತ್ಯದೊಳಗೆ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.
13. ಅನುಷ್ಠಾನ ಇಲಾಖೆ ಅಧಿಕಾರಿಗಳಿಗೆ ತಮ್ಮ ಇಲಾಖೆಗೆ ನಿಗದಿಪಡಿಸಿದ ಮಾನವದಿನ ಸೃಜನೆ ಗುರಿಗೆ ಶೇ.100 ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.

14. 2019-20ನೇ ಸಾಲಿಗೆ ವರ್ಷದ ಪ್ರಾರಂಭದಿಂದಲೇ ಅಂದರೆ ಎಪ್ರಿಲ್, ಮೇ,

ಮತ್ತು ಜೂನ್ ತಿಂಗಳಲ್ಲಿ ಹೆಚ್ಚಿನ ಸಮುದಾಯ ಆಧಾರಿತ ಕಾಮಗಾರಿಗಳನ್ನು ತೆಗೆದುಕೊಂಡು ಪ್ರಗತಿ ಸಾಧಿಸಲಾಗುದು ಎಂದು CEO, ZP BGK ರವರು ವಿವರಣೆ ನೀಡಿದರು.

<u>ಜಾನುವಾರುಗಳಿಗೆ ಮೇವು ಪೂರೈಕೆ:</u>

15. ಜಿಲ್ಲೆಯಲ್ಲಿ ಮೇವಿನ ಲಭ್ಯತೆಯ ಕುರಿತು ವಿವರಣೆ ಒದಗಿಸಲು DD,AH & VS Bagalkot ಇವರಿಗೆ ಕೇಳಿದರು.

DD,AH & VS Bagalkot ಇವರು ಈಗಾಗಲೇದಿನಾಂಕ: 07-02-2019 ರ ಸಭೆಯಲ್ಲಿ ತಿಳಿಸಿದಂತೆ, ಸನ್ 2018-19ನೇ ಸಾಲಿನ ಜಾನುವಾರು ಹಾಗೂ ಮೇವಿನ ಸಮೀಕ್ಷೆ ಕೈಗೊಂಡಿದ್ದು, ಸಮೀಕ್ಷೆಯನ್ವಯ ಜಿಲ್ಲೆಯಲ್ಲಿ ಒಟ್ಟು 465563 ಜಾನುವಾರುಗಳು [ದನ ಮತ್ತು ಎಮ್ಮೆ ಸೇರಿ] ಇರುತ್ತವೆ.

ಪ್ರಸ್ತುತ 2.20 ಲಕ್ಷ ಮೇ.ಟನ್ ಮೇವು ಲಭ್ಯವಿದ್ದು ಇದರಲ್ಲಿ ಈಗಾಗಲೇ ರೈತರಿಗೆ ಪೂರೈಸಿದ ಮಿನಿಕಿಟ್‌ಗಳಿಂದ ಬಂದ ಹಸಿರು ಮೇವು ಸಹಿತ ಸೇರಿದ್ದು, ಇದು ಮುಂದಿನ 12 ವಾರಗಳಿಗೆ ಸಾಕಾಗುತ್ತದೆ ಎಂದು DD,AH & VS Bagalkot ತಿಳಿಸಿದರು.

16. ಕಾರ್ಯದರ್ಶಿಗಳು, 12 ವಾರಗಳಿಗೆ ಮೇವು ಇದ್ದರೂ ಸಹ ಮುಂಬರುವ ದಿನಗಳಲ್ಲಿ ಮೇವು ಕೊರತೆಯಾದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮೇವು ಬ್ಯಾಂಕ್ ಮತ್ತು ಗೋ ಶಾಲೆಗಳನ್ನು ಪ್ರಾರಂಭಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದರು.

DD,AH & VS Bagalkot ರವರು ಈ ಸಲುವಾಗಿ ಪ್ರಸಕ್ತ ಸಾಲಿಗೆ ಇ-ಟೆಂಡರ್ ಮೂಲಕ ಈಗಾಗಲೇ ಟೆಂಡರ್ ಅಂತಿಮಗೊಳಿಸಿದ್ದು, ದರ ನಿಗದಿಪಡಿಸಿ, Letter of Acceptance ನ್ನು ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡು ಅರ್ಹ ಬಿಡ್ ದಾರರಿಗೆ ನೀಡಲಾಗಿದೆ ಎಂದು ತಿಳಿಸಿದರು.

ಮೇಲಿನ ಎಲ್ಲ ನಿರ್ದೇಶನಗಳನ್ನು ನಿಗದಿತ ಕಾಲಮಿತಿಯಲ್ಲಿ ಕೈಗೊಂಡು ಸೂಚನೆಗಳಿಗೆ ಅಗತ್ಯ ಅನುಸರಣಾ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಜಿಲ್ಲಾಧಿಕಾರಿಗಳ ಮುಖಾಂತರ 1 ವಾರದಲ್ಲಿ ಸಲ್ಲಿಸಲು ಕಾರ್ಯದರ್ಶಿಗಳು ಸೂಚಿಸಿದರು. ಕೊನೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿ ನಾಥ್)

**ದಿನಾಂಕ:02.03.2019 ರಂದು ಬೆಳಿಗ್ಗೆ 11.00 ಗಂಟೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಆಡಳಿತ ಸುಧಾರಣೆ) ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೋಲಾರ ಜಿಲ್ಲಾ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ 2018-19ನೇ ಸಾಲಿನ ಫೆಬ್ರವರಿ ಮಾಹೆಯ ಅಂತ್ಯದವರೆಗಿನ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ರವರು ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮತ್ತು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಪತ್ರಕರ್ತರಿಗೆ ಸ್ವಾಗತ ಕೋರಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಇಲಾಖಾವಾರು ಪ್ರಗತಿ ಪರಿಶೀಲನೆಯನ್ನು ಪ್ರಾರಂಭಿಸಿದರು.

## ಜಿಲ್ಲೆಯ ಬರ ಪರಿಸ್ಥಿತಿಯ ಮಾಹಿತಿ

ಜಿಲ್ಲೆಯ ಬರ ಪರಿಸ್ಥಿತಿಯ ಬಗ್ಗೆ ಜಿಲ್ಲಾಧಿಕಾರಿಗಳು ಈ ಕೆಳಕಂಡ ಮಾಹಿತಿಗಳನ್ನು ನೀಡಿದರು.

1. ಜಿಲ್ಲೆಯ ಸರಾಸರಿ ವಾಡಿಕೆ ಮಳೆ 746.00ಎಂ.ಎಂ. ಆಗಿದ್ದು, 2018ನೇ ಸಾಲಿನಲ್ಲಿ 564.00ಎಂ.ಎಂ. ಮಳೆಯಾಗಿದ್ದು, ಶೇ.24ರಷ್ಟು ಮಳೆ ಕೊರತೆ ಉಂಟಾಗಿರುತ್ತದೆ.
2. 2018ರ ಮುಂಗಾರು ಹಂಗಾಮಿನಲ್ಲಿ, ಜೂನ್ ಮಾಹೆಯಿಂದ ಸೆಪ್ಟೆಂಬರ್ ಮಾಹೆಯವರೆಗೆ ವಾಡಿಕೆಯಂತೆ 387.00ಮಿ.ಮೀ. ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 274.00 ಎಂ.ಎಂ.ಮಳೆಯಾಗಿದ್ದು, ಶೇ.29ರಷ್ಟು ಮಳೆಯ ಕೊರತೆ ಉಂಟಾಗಿರುತ್ತದೆ.
3. 2018 ಹಿಂಗಾರು ಹಂಗಾಮಿನಲ್ಲಿ, ಅಕ್ಟೋಬರ್ ರಿಂದ ಡಿಸೆಂಬರ್ ರವರೆಗೆ ವಾಡಿಕೆಯಂತೆ 236.00ಎಂ.ಎಂ. ಮಳೆಯಾಗಬೇಕಾಗಿದ್ದು, ವಾಸ್ತವವಾಗಿ 88.00 ಎಂ.ಎಂ. ಮಳೆಯಾಗಿದ್ದು ಶೇ.63 ರಷ್ಟು ಮಳೆಯ ಕೊರತೆ ಉಂಟಾಗಿರುತ್ತದೆ
4. 2018ರ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ 71,063ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, 52,320ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು ಹಾನಿಗೊಳಗಾಗಿದ್ದು, ಒಟ್ಟು 68394 ರೈತರಿಗೆ ಇನ್‌ಪುಟ್ ಸಬ್ಸಿಡಿ ವಿತರಿಸಲು ಅವಶ್ಯಕವಿರುವ ಅನುದಾನ ರೂ.2675.87ಲಕ್ಷಗಳನ್ನು ಕೋರಿ ಪರಿಹಾರ ತಂತ್ರಾಂಶದಲ್ಲಿ ವಿವರ ನಮೂದಿಸಲಾಗಿದ್ದು, ಪರಿಹಾರ ಮೊತ್ತ ಸರ್ಕಾರದಿಂದ ಬರಬೇಕಾಗಿದೆ.
5. 2018ರ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ 9178ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು ಹಾನಿಗೊಳಗಾಗಿದ್ದು, ಇನ್‌ಪುಟ್ ಸಬ್ಸಿಡಿ ವಿತರಿಸಲು ಅವಶ್ಯಕವಿರುವ ಅನುದಾನ ರೂ.624.15ಲಕ್ಷಗಳನ್ನು ಕೋರಿ ಪರಿಹಾರ ತಂತ್ರಾಂಶದಲ್ಲಿ ವಿವರ ನಮೂದಿಸಲಾಗಿದ್ದು, ಪರಿಹಾರ ಮೊತ್ತ ಸರ್ಕಾರದಿಂದ ಬರಬೇಕಾಗಿದೆ.
6. ಜಿಲ್ಲೆಯಲ್ಲಿ ಯಾವುದೇ ರೈತರ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿರುವುದಿಲ್ಲ.
7. ಎರಡು ಹೆಕ್ಟೇರ್‌ಗಿಂತ ಕಡಿಮೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಯಡಿ ವಾರ್ಷಿಕ ರೂ.6000/-ಗಳ ಮೊತ್ತವನ್ನು ಮೂರು ಕಂತುಗಳಲ್ಲಿ ರೈತರ ಖಾತೆಗೆ ಜಮೆ ಮಾಡುವ ಯೋಜನೆಯಡಿ ಇದುವರೆವಿಗೂ ಒಟ್ಟು 17,000 ರೈತರ ಮಾಹಿತಿಯನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆ.
8. ಜಿಲ್ಲೆಯಲ್ಲಿ 10,553ಸಹಕಾರ ಬ್ಯಾಂಕುಗಳು ಹಾಗೂ 28,997ವಾಣಿಜ್ಯ ಬ್ಯಾಂಕುಗಳಲ್ಲಿ ರೂ.92.15ಕೋಟಿ ರೈತರ ಸಾಲ ಮನ್ನಾ ಮಾಡಲಾಗಿದೆ.

18/3/19

9. ರೈತರ ಸಾಲ ಮನ್ನಾ ಯೋಜನೆಯಿಂದ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಆಗಿರುವ ಪ್ರಯೋಜನದ ಬಗ್ಗೆ ಹಾಗೂ ಸಾಲ ಮನ್ನಾ ಮಾಡಿರುವ ಕಾರಣದಿಂದ ಮುಂದಿನ ಸಾಲಿನ ಕೃಷಿ ಚಟುವಟಿಕೆಗಳಿಗೆ ರೈತರಿಗೆ ಯಾವ ರೀತಿ ಸಹಾಯವಾಗಿದೆ ಎಂಬ ಬಗ್ಗೆ ಮಾಹಿತಿ ಪಡೆದು ಸಲ್ಲಿಸಲು ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರ)**

**<u>ಜಾನುವಾರುಗಳಿಗೆ ಪ್ರಸ್ತುತ ಲಭ್ಯವಿರುವ ಮೇವಿನ ಬಗ್ಗೆ</u>**

1. ಜಿಲ್ಲೆಯಲ್ಲಿ ಒಟ್ಟು 2,08,519 ಜಾನುವಾರುಗಳಿದ್ದು, ಜಿಲ್ಲೆಯ ರೈತರಲ್ಲಿ 92,939 ಮೆ.ಟನ್ ಮೇವು ದಾಸ್ತಾನಿದ್ದು, ಇದು 13ವಾರಗಳಿಗೆ ಸಾಕಾಗುತ್ತದೆ.
2. ಪಶುಪಾಲನಾ ಇಲಾಖೆಯಿಂದ 83,076 ಮಿನಿಕಿಟ್ ಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ಎಂಪಿಸಿಎಸ್ ಮೂಲಕ 29,440 ರೈತರಿಗೆ ವಿತರಿಸಲಾಗಿದ್ದು, 8,310ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ.
3. ಜಿಲ್ಲೆಯಲ್ಲಿನ ತೋಟಗಾರಿಕೆ ಇಲಾಖೆಯ ಸಸ್ಯ ಕ್ಷೇತ್ರಗಳ 20 ಎಕರೆ ಪ್ರದೇಶದಲ್ಲಿ ಮೇವು ಬೆಳೆಯನ್ನು ಬೆಳೆಯಲಾಗಿದ್ದು, ಇದರಿಂದ 300 ಟನ್‌ನಷ್ಟು ಮೇವು ಉತ್ಪಾದನೆಯಾಗಲಿರುತ್ತದೆ.
4. ಸಂದಿಗ್ಧ ಪರಿಸ್ಥಿತಿಯಲ್ಲಿ ಮೇವಿನ ಸಮಸ್ಯೆಯನ್ನು ನಿವಾರಿಸುವ ಸಂಬಂಧ, ಬಳ್ಳಾರಿ ಜಿಲ್ಲೆಯಿಂದ 49.14ಮೆ.ಟನ್ ಒಣ ಭತ್ತದ ಹುಲ್ಲನ್ನು ಖರೀದಿಸಿ, ಶ್ರೀನಿವಾಸಪುರ ತಾಲ್ಲೂಕು ಹೊಗಳಗೆರೆ ತೋಟಗಾರಿಕೆ ಕ್ಷೇತ್ರದಲ್ಲಿ ದಾಸ್ತಾನು ಇಡಲಾಗಿದೆ.
5. ಎಂಪಿಸಿಎಸ್ ಮುಖಾಂತರ ಹಸಿರು ಮೇವು ಬೆಳೆಯುವಂತಹ ರೈತರಿಗೆ ಪ್ರತಿ ಎಕರೆಗೆ ರೂ.2000/- ಪ್ರೋತ್ಸಾಹಧನವನ್ನು ಕೋಚಿಮುಲ್ ವತಿಯಿಂದ ನೀಡಲಾಗುವುದು.
6. ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ತಲಾ ಒಂದು ಮೇವು ನಿಧಿಯನ್ನು ಸ್ಥಾಪಿಸುವ ಸಂಬಂಧ ಹೊರ ಜಿಲ್ಲೆ/ರಾಜ್ಯದಿಂದ ಒಣ ಭತ್ತದ ಹುಲ್ಲನ್ನು ಖರೀಸುವ ನಿಟ್ಟಿನಲ್ಲಿ ತಾಲ್ಲೂಕುವಾರು ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.
7. ಇಲಾಖಾ ಸಸ್ಯಕ್ಷೇತ್ರಗಳಲ್ಲಿ ಮೇವು ಬೆಳೆದು ರೈತರಿಗೆ ವಿತರಿಸಲು ಸೂಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಕೋಲಾರ)**

**<u>ಗ್ರಾಮಾಂತರ ಕುಡಿಯುವ ನೀರಿನ ಸಮಸ್ಯೆ</u>**

1. ಕೋಲಾರ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮುಂಬರುವ ದಿನಗಳಲ್ಲಿ ಒಟ್ಟು 207 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದೆಂದು ಗುರುತಿಸಲಾಗಿದೆ.
2. ಗುರುತಿಸಲಾಗಿರುವ 207 ಸಮಸ್ಯಾತ್ಮಕ ಗ್ರಾಮಗಳಿಗೆ ನೀರು ಪೂರೈಸುವ ಸಲುವಾಗಿ ಖಾಸಗಿ ಕೊಳವೆಬಾವಿಗಳನ್ನು ಗುರುತಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.
3. ಒಟ್ಟು 207 ಸಮಸ್ಯಾತ್ಮಕ ಗ್ರಾಮಗಳ ಪೈಕಿ ಎಷ್ಟು ಗ್ರಾಮಗಳಿಗೆ ಖಾಸಗಿ ಕೊಳವೆಬಾವಿಗಳ ಮೂಲಕ ಹಾಗೂ ಎಷ್ಟು ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುವುದೆಂಬ ಬಗ್ಗೆ ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಯಿತು.

4. ಸಮಸ್ಯಾತ್ಮಕ ಗ್ರಾಮಗಳಿಗೆ ರೈತರ ಮನವೊಲಿಸಿ ಖಾಸಗಿ ಕೊಳವೆ ಬಾವಿಗಳ ಮೂಲಕ ಅಗತ್ಯವಿರುವ ಪೈಪ್‌ಲೈನ್ ಅಳವಡಿಸಿ, ನೀರು ಸರಬರಾಜು ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಯಿತು.
5. ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಸಕಾಲದಲ್ಲಿ ಒದಗಿಸಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸಹಾಯವಾಣಿ ಹಾಗೂ ಸಹಾಯ ಕೇಂದ್ರ ಸ್ಥಾಪಿಸಲಾಗಿದ್ದು, ತಾಲ್ಲೂಕು ಮಟ್ಟದಲ್ಲಿ 2018-19ನೇ ಸಾಲಿನಲ್ಲಿ ಒಟ್ಟು 166 ದೂರುಗಳು ದಾಖಲಾಗಿದ್ದು, 105 ದೂರುಗಳನ್ನು ನಿವಾರಿಸಲಾಗಿದ್ದು, ಇನ್ನೂ 61 ನಿವಾರಿಸಬೇಕಾದಂತ ದೂರುಗಳಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
6. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸ್ಥಾಪಿಸಲಾಗಿರುವ ಸಹಾಯವಾಣಿ ಹಾಗೂ ಸಹಾಯ ಕೇಂದ್ರಗಳಲ್ಲಿ ದಾಖಲಾಗಿರುವ ದೂರುಗಳನ್ನು 24ಗಂಟೆಯೊಳಗಾಗಿ ನಿವಾರಿಸಲು ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು.
7. ಮುಂಬರುವ ದಿನಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಭವಿಸಬಹುದಾದಂತಹ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ, ನೀರಿನ ಸಮಸ್ಯೆ ಬಗೆಹರಿಸಲು ಪರ್ಯಾಯ ಮಾರ್ಗಗಳನ್ನು ಕಂಡುಹಿಡಿದು, ಆಯಾ ಭಾಗಗಳಲ್ಲಿರುವ ಖಾಸಗಿ ರೈತರ ಕೊಳವೆಬಾವಿಗಳಿಂದ ನೀರು ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಈ ಬಗ್ಗೆ ವಾರಕ್ಕೊಮ್ಮೆ ಗ್ರಾಮ ಪಂಚಾಯಿತಿಗಳ ಪಿ.ಡಿ.ಓ.ಗಳ ಸಭೆ ನಡೆಸಿ, ಮಾಹಿತಿ ಪಡೆದು ಮುಂದೆ ಬರಬಹುದಾದಂತಹ ಸಮಸ್ಯೆ ನಿವಾರಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು/ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು.
8. ಮುಂದೆ ಉದ್ಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವ ಸಲುವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚುವರಿ ಪಂಪು ಮೋಟಾರ್ ದಾಸ್ತಾನಿಟ್ಟುಕೊಳ್ಳಲು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಯಿತು.
9. ಜಿಲ್ಲೆಯಲ್ಲಿ ಬರಪರಿಸ್ಥಿತಿ ಇರುವ ಕಾರಣ 14ನೇ ಹಣಕಾಸು ಆಯೋಗದ ಅನುದಾನವನ್ನು ಹೆಚ್ಚಾಗಿ ಕುಡಿಯುವ ನೀರಿನ ಕಾಮಗಾರಿಗಳಿಗೆ ಉಪಯೋಗಿಸಲು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ಸೂಚಿಸಲಾಯಿತು
10. ಈಗಾಗಲೇ 14ನೇ ಹಣಕಾಸು ಆಯೋಗದ ಅನುದಾನಕ್ಕೆ ಶೇ.20ರಷ್ಟು ಕುಡಿಯುವ ನೀರಿನ ಕಾಮಗಾರಿಗಳಿಗೆ ಹಂಚಿಕೆ ಮಾಡಿ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆದಿದ್ದರೂ ಸಹಾ ಸದರಿ ಕ್ರಿಯಾ ಯೋಜನೆಯ ಕಾಮಗಾರಿಗಳ ಅವಶ್ಯಕತೆ ಇದ್ದಲ್ಲಿ ಬದಲಾವಣೆ ಮಾಡಿಕೊಂಡು ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುದಾನ ಕಾಯ್ದಿರಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

11. ಟಾಸ್ಕ್‌ಫೋರ್ಸ್ ಅಡಿಯಲ್ಲಿ ಮೊದಲನೆ ಕಂತಿನಲ್ಲಿ ಹಂಚಿಕೆಯಾಗಿರುವ ಅನುದಾನ ರೂ.250.00ಲಕ್ಷಗಳಲ್ಲಿ 110 ಕಾಮಗಾರಿಗಳು ಅನುಮೋದನೆ ಯಾಗಿದ್ದು, 101 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಇನ್ನು 9 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು.
12. ಟಾಸ್ಕ್‌ಫೋರ್ಸ್ ಅಡಿಯಲ್ಲಿ ಎರಡನೆ ಕಂತಿನಲ್ಲಿ ಹಂಚಿಕೆಯಾಗಿರುವ ಅನುದಾನ ರೂ.250.00ಲಕ್ಷಗಳಲ್ಲಿ 107 ಕಾಮಗಾರಿಗಳು ಅನುಮೋದನೆ ಯಾಗಿದ್ದು, 90 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಇನ್ನು 17 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು.
13. **ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯಲ್ಲಿ ಕೊರೆಯಲಾಗುವ ಕೊಳವೆಬಾವಿಗಳು ಅತಿ ಕಡಿಮೆ ಅವಧಿಯಲ್ಲಿ ಸ್ಥಗಿತಗೊಳ್ಳುತ್ತಿದ್ದು, ಈ ಬಗ್ಗೆ ಅನುಷ್ಠಾನಾಧಿಕಾರಿಗಳು ಸರ್ಕಾರದ ಅನುದಾನ ಸದುಪಯೋಗವಾಗುವ ನಿಟ್ಟಿನಲ್ಲಿ ಮುಂದಾಲೋಚನೆಯಿಂದ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಸೂಚಿಸಲಾಯಿತು**
14. NRDWP ಯೋಜನೆಯಡಿ 948 ಮುಂದುವರೆದ ಕಾಮಗಾರಿಗಳ ಪೈಕಿ 908 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, 37 ಕಾಮಗಾರಿಗಳು ಪ್ರಗತಿಯಲ್ಲಿದ್ದು, 5 ಕಾಮಗಾರಿಗಳನ್ನು ಪ್ರಾರಂಭಿಸಿಲ್ಲವೆಂದು ಅಧಿಕಾರಿಗಳು ಮಾಹಿತಿ ನೀಡಿದರು. 2018–19ನೇ ಸಾಲಿನಲ್ಲಿ 1364 ಹೊಸ ಕಾಮಗಾರಿಗಳನ್ನು ಕೈಗೊಂಡಿದ್ದು, 1119 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, 192 ಕಾಮಗಾರಿಗಳು ಪ್ರಗತಿಯಲ್ಲಿದ್ದು, 53 ಕಾಮಗಾರಿಗಳನ್ನು ಪ್ರಾರಂಭಿಸಿಲ್ಲವೆಂದು ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು.
15. **NRDWP ಯೋಜನೆಯಡಿ ಹಾಗೂ ಟಾಸ್ಕ್‌ಫೋರ್ಸ್ ಅಡಿ ಕೈಗೊಂಡಿರುವ ಕಾಮಗಾರಿಗಳ ಮ್ಯಾಪಿಂಗ್ ಮಾಡಿಸಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಯಿತು.**
16. ಜನವಸತಿ, ಜನಸಂಖ್ಯೆ, ನೀರಿನ ಮೂಲ, NRDWP ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕೊಳವೆಬಾವಿಗಳ ಸಂಖ್ಯೆ, Task Force ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕೊಳವೆಬಾವಿಗಳ ಸಂಖ್ಯೆ, ಟ್ಯಾಂಕರ್ ಮೂಲಕ ನೀರು ಸರಬರಾಜು ಹಾಗೂ ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಮಾಡುತ್ತಿರುವ ಮಾಹಿತಿಯ ನಮೂನೆಯನ್ನು ತಯಾರಿಸಿ ಮಾಹಿತಿ ಸಿದ್ಧಪಡಿಸಿಟ್ಟುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.
17. ಜಿಲ್ಲೆಗೆ ಒಟ್ಟು 1110ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದು, 1075 ಘಟಕಗಳು ಪೂರ್ಣಗೊಂಡಿದ್ದು, 22 ಕಾಮಗಾರಿಗಳು ಪ್ರಗತಿಯಲ್ಲಿದ್ದು, 13 ಘಟಕಗಳನ್ನು ಪ್ರಾರಂಭಿಸಿಲ್ಲವೆಂದು ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು.
18. ಸಿ.ಎಸ್.ಆರ್.ವತಿಯಿಂದ ಸ್ಥಾಪಿತವಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಸಮಸ್ಯೆಯಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.
19. ಇನ್ನು ಮುಂದೆ ಸಿ.ಎಸ್.ಆರ್.ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವಾಗ ಕಡ್ಡಾಯವಾಗಿ 5ವರ್ಷಗಳವರೆಗೆ ನಿರ್ವಹಣೆ ಮಾಡಬೇಕೆಂಬ ಷರತ್ತು ವಿಧಿಸಲು ಸೂಚಿಸಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ/ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು/ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು)

**ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ**

1. ಜಿಲ್ಲೆಯಲ್ಲಿ ಒಟ್ಟು 166 ವಾರ್ಡುಗಳಿದ್ದು, 46 ವಾರ್ಡುಗಳಲ್ಲಿ ಟ್ಯಾಂಕರ್ ಮೂಲಕ ನೀರಿನ ಸರಬರಾಜು ಮಾಡುತ್ತಿದ್ದು, ಕೋಲಾರ ನಗರಸಭೆಯಲ್ಲಿ 9ಟ್ಯಾಂಕರ್ ಗಳಿದ್ದು, ಆ ಟ್ಯಾಂಕರ್ ಮೂಲಕ ಒಟ್ಟು 76 ಟ್ರಿಪ್ ನೀರು ಸರಬರಾಜು ಮಾಡಲಾಗುತ್ತಿದೆ.
2. ಮುಂದಿನ ದಿನಗಳಲ್ಲಿ ಹೆಚ್ಚಿನ ಸಮಸ್ಯೆ ಉದ್ಭವಿಸಿದಲ್ಲಿ ಹಣಕಾಸಿನ ಕೊರತೆಯಿರುವುದಿಲ್ಲ. ಎಸ್.ಎಫ್.ಸಿ., ಹಾಗೂ ಟಾಸ್ಕ್‌ಫೋರ್ಸ್ ಅನುದಾನ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುತ್ತದೆ. ಎಸ್.ಎಫ್.ಸಿ ಯೋಜನೆಯಡಿ ರೂ.392.90ಲಕ್ಷಗಳ ಅನುದಾನ ಹಂಚಿಕೆಯಾಗಿರುವುದಾಗಿ ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ. ರವರು ಮಾಹಿತಿ ನೀಡಿದರು.
3. ನಗರ ಪ್ರದೇಶದಲ್ಲಿ ಸಹಾ ಖಾಸಗಿ ಕೊಳವೆಬಾವಿಗಳಿಂದ ನೀರು ಪಡೆದು ಪೂರೈಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸೂಚನೆ. ಎಸ್.ಎಫ್.ಸಿ ಅನುದಾನಕ್ಕೆ ಮೂರು ದಿವಸಗಳೊಳಗಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಿ, ಶೀಘ್ರ ಟೆಂಡರ್ ಪ್ರಕ್ರಿಯೆ ಮುಗಿಸಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ/ ಆಯುಕ್ತರು, ನಗರಸಭೆ, ಕೋಲಾರ)**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:-**

1. ಉಪ ನಿರ್ದೇಶಕರು, ಪ್ರಗತಿ ವಿವರಣೆ ನೀಡಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಪೂರಕ ಪೌಷ್ಠಿಕ ಆಹಾರ ನೀಡಲಾಗುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 2061 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
2. ಜಿಲ್ಲೆಯಲ್ಲಿ 921 ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳಿದ್ದು, 321 ಶಾಲಾ ಕಟ್ಟಡಗಳಲ್ಲಿ ಹಾಗೂ 400 ಬಾಡಿಗೆ ಕಟ್ಟಡದಲ್ಲಿ, 740 ಇತರ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ.
3. ಜಿಲ್ಲೆಗೆ ಒಟ್ಟು 238 ಅಂಗನವಾಡಿ ಕಟ್ಟಡಗಳು ಮಂಜೂರಾಗಿದ್ದು, 158 ಕಟ್ಟಡಗಳು ಪೂರ್ಣಗೊಂಡಿದ್ದು, 78 ಕಟ್ಟಡಗಳು ಪ್ರಗತಿಯಲ್ಲಿದ್ದು, 2 ಕಟ್ಟಡಗಳನ್ನು ಪ್ರಾರಂಭಿಸಿಲ್ಲವೆಂದು ಅಧಿಕಾರಿಗಳು ಮಾಹಿತಿ ನೀಡಿದರು.
4. ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ 207 ನಿವೇಶನ ಲಭ್ಯವಿದ್ದು, ಪ್ರಸ್ತಾವನೆಗೆ ಮಂಜೂರಾತಿ ಆಗಬೇಕೆಂದು ಇನ್ನೂ 376 ನಿವೇಶನಗಳ ಅವಶ್ಯಕತೆಯಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
5. ಎಲ್ಲಾ ಗ್ರಾಮಗಳಲ್ಲಿಯೂ ಸಮುದಾಯ ಭವನಗಳಿದ್ದು, ಸಮುದಾಯ ಭವನಗಳನ್ನು ನಿಯಮಿತವಾಗಿ ಉಪಯೋಗಿಸುವುದಿಲ್ಲವಾದ ಕಾರಣ, ಅಂಗನವಾಡಿ ಕೇಂದ್ರಗಳನ್ನು ಸಮುದಾಯ ಭವನಗಳಿಗೆ ಸ್ಥಳಾಂತರಿಸಬೇಕೆಂದು ಸೂಚಿಸಲಾಯಿತು.
6. ಮಾತೃಪೂರ್ಣ ಯೋಜನೆಯಡಿ ಶೇ.78ರಷ್ಟು ಪ್ರಗತಿ ಸಾಧನೆಯಾಗಿರುವುದಾಗಿ ಅಧಿಕಾರಿಗಳು ತಿಳಿಸಿದರು.
7. ಮಾತೃಪೂರ್ಣ ಯೋಜನೆ ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಮಾತೃಪೂರ್ಣ ಯೋಜನೆಯ ಫಲಾನುಭವಿಗಳ ಆರೋಗ್ಯ ತಪಾಸಣೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕಾಲ ಕಾಲಕ್ಕೆ ನಿಯಮಿತವಾಗಿ ಮಾಡಿ, ಸದರಿ ಯೋಜನೆಯಿಂದ ಫಲಾನುಭವಿಗಳ ಆರೋಗ್ಯದಲ್ಲಿ ಸುಧಾರಣೆಯಾಗಿರುವ ಬಗ್ಗೆ ಹಾಗೂ ಗರ್ಭಿಣಿಯರ/ ಮಾತೆಯರ ಅಪೌಷ್ಠಿಕತೆ ನಿವಾರಣೆಯಾಗಿರುವ ಬಗ್ಗೆ ವರದಿ ಸಲ್ಲಿಸಬೇಕೆಂದು ಇದಕ್ಕಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಮಾತೃ ಪೂರ್ಣ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಒದಗಿಸಬೇಕೆಂದು ಸೂಚಿಸಲಾಯಿತು.

8. ತೀವ್ರ ಅಪೌಷ್ಠಿಕತೆಯಿಂದ 119 ಜನ ಬಳಲುತ್ತಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ಪರೀಕ್ಷಿಸಿ ಪ್ರೋಟೀನ್ ಪೌಡರ್ ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.
9. ತೀವ್ರ ಅಪೌಷ್ಠಿಕತೆಯಿಂದ 119 ಜನ ಬಳಲುತ್ತಿರುವವರ ಪೈಕಿ ಎಷ್ಟು ಜನರನ್ನು NRC (Nutrition Rehabilitation Centre) ಗೆ ರೆಫರ್ ಮಾಡಲಾಗಿದೆ ಎಂಬ ಬಗ್ಗೆ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ:- ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,ಕೋಲಾರ.)**

## ಆರೋಗ್ಯ ಇಲಾಖೆ:-

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಜಿಲ್ಲೆಯಲ್ಲಿ ತಾಯಿ ಮರಣ ಪ್ರಮಾಣದ ಬಗ್ಗೆ ಮಾಹಿತಿ ನೀಡಿ, 2018-19ನೇ ಸಾಲಿನಲ್ಲಿ ಒಂದು ಲಕ್ಷ ಶಿಶು ಜನನಕ್ಕೆ ಶೇ.51.18ರಷ್ಟು ತಾಯಿ ಮರಣ (MMR) ಪ್ರಮಾಣವಿರುವುದಾಗಿ ಮಾಹಿತಿ ನೀಡಿದರು.
2. ಪ್ರತಿ 1000 ಶಿಶು ಜನನದಲ್ಲಿ ಶೇ.9.16 ರಷ್ಟು ಶಿಶು ಮರಣ (IMR) ಪ್ರಮಾಣ ಇರುವುದಾಗಿ ತಿಳಿಸಿದರು.
3. ಯಾವ ಯಾವ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ತಾಯಿ ಮರಣ ಮತ್ತು ಶಿಶು ಮರಣ ದಾಖಲಾಗಿದೆ ಎಂಬ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಂಬಂಧಪಟ್ಟ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮಾಹಿತಿ ಸಂಗ್ರಹಿಸಬೇಕು ಹಾಗೂ ಮ್ಯಾಪಿಂಗ್ ಮಾಡಿಸಬೇಕೆಂದು ಸೂಚಿಸಲಾಯಿತು.
4. ಹೆಚ್ಚಿನ ಅಪಾಯದ ಗರ್ಭಧಾರಣೆಯ (high risk pregnancy) ಬಗ್ಗೆ ವಿಶ್ಲೇಷಣಾ ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಯಿತು.
5. ಆರೋಗ್ಯ ಕರ್ನಾಟಕ ಆಯುಷ್ಮಾನಭವ ಯೋಜನೆಯಡಿ 1,22,000 ಆರೋಗ್ಯ ಕಾರ್ಡುಗಳನ್ನು ವಿತರಿಸಲಾಗಿದೆ, ಆಧಾರ್ ಕಾರ್ಡು/ಪಡಿತರ ಚೀಟಿ ನೀಡಿದಲ್ಲಿ ಆರೋಗ್ಯ ಕಾರ್ಡು ವಿತರಿಸುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
6. ಜಾತ್ರೆಗಳಲ್ಲಿ/ ಹೆಚ್ಚಿನ ಜನ ಸೇರುವ ಜಾಗಗಳಲ್ಲಿ ಕಲುಷಿತ ನೀರಿನ ಸೇವನೆಯಿಂದ ಜನರು ಅಸ್ವಸ್ಥರಾಗಿ ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಬಂದಾಗ ಅವರ ಚಿಕಿತ್ಸೆಗಾಗಿ ಯೋಜಿತ ರೀತಿಯಲ್ಲಿ ಅನುದಾನ ಖರ್ಚು ಮಾಡಲು, ಇದಕ್ಕಾಗಿ ಸಿ.ಆರ್.ಎಫ್.ನಿಧಿಯಿಂದ ಅನುದಾನ ಉಪಯೋಗಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.
7. ಸಿ.ಎಸ್.ಆರ್.ನಿಂದ ಇಲಾಖೆಗೆ ಅಗತ್ಯವಿರುವ ಅಂಬುಲೆನ್ಸ್ ಪಡೆಯಲು ಇಲಾಖಾಧಿಕಾರಿಗಳು ಕೈಗಾರಿಕಾ ಇಲಾಖಾ ಅಧಿಕಾರಿಗಳ/ಬ್ಯಾಂಕ್ ಅಧಿಕಾರಿಗಳ ಸಹಯೋಗದೊಂದಿಗೆ ಅಗತ್ಯ ಕ್ರಮ ವಹಿಸಬೇಕೆಂದು ಸೂಚಿಸಲಾಯಿತು.

**(ಕ್ರಮ:- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೋಲಾರ.)**

## ಕೃಷಿ ಇಲಾಖೆ:-

1. ಹೋಬಳಿ ಮಟ್ಟದ ರೈತಸಂಪರ್ಕ ಕೇಂದ್ರಗಳ ನಿರ್ಮಾಣಕ್ಕೆ ಅವಶ್ಯವಿದ್ದ ನಿವೇಶನಗಳ ಪೈಕಿ ಕೋಲಾರ ತಾಲ್ಲೂಕಿನ ವಕ್ಕಲೇರಿ ಮತ್ತು ಬಂಗಾರಪೇಟೆ ತಾಲ್ಲೂಕಿನ ಕಸಬಾ ಹೋಬಳಿಗಳಲ್ಲಿ 2 ರೈತ ಸಂಪರ್ಕ ಕೇಂದ್ರಗಳಿಗೆ ನಿವೇಶನವನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡಿದ್ದು, ಉಳಿದಂತೆ ಕೋಲಾರ ತಾಲ್ಲೂಕಿನ ಹೋಳೂರು, ಕೆ.ಜಿ.ಎಫ್. ತಾಲ್ಲೂಕಿನ ರಾಬರ್ಟಸನ್ ಪೇಟೆ, ಕ್ಯಾಸಂಬಳ್ಳಿ, ಮುಳಬಾಗಲು ತಾಲ್ಲೂಕಿನ ತಾಯಲೂರು, ಶ್ರೀನಿವಾಸಪುರ ತಾಲ್ಲೂಕಿನ ರಾಯಲ್ಪಾಡು ಮತ್ತು ಮಾಲೂರು ತಾಲ್ಲೂಕಿನ ಮಾಸ್ತಿ ಹೋಬಳಿಗಳಲ್ಲಿ ನಿವೇಶನ ಮಂಜೂರಾಗಬೇಕೆಂದು ಅಧಿಕಾರಿಗಳು ಮಾಹಿತಿ ನೀಡಿದರು. ಬಾಕಿಯಿರುವ ನಿವೇಶನ ಮಂಜೂರಾತಿಯನ್ನು ಶೀಘ್ರವಾಗಿ ಪಡೆಯಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಯಿತು.
2. ಕೃಷಿಭಾಗ್ಯ ಯೋಜನೆಯಡಿ 2018-19ನೇ ಸಾಲಿನಲ್ಲಿ ಒಟ್ಟು 2534 ಕೃಷಿಹೊಂಡಗಳನ್ನು ನಿರ್ಮಿಸಲಾಗಿದ್ದು, ಯೋಜನೆಯಡಿ ರೂ.3.6ಕೋಟಿ ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.
3. ಜಿಲ್ಲೆಯ 27 ಹೋಬಳಿಯ ಪೈಕಿ 18 ಹೋಬಳಿಗಳಲ್ಲಿ ಕೃಷಿ ಯಂತ್ರೋಪಕರಣ ಬಳಕೆಯಾಗಿದ್ದು, ಯಂತ್ರಚಾಲಿತ ರಾಗಿ ಕಟಾವಿಗೆ ರೈತರು ಮುಂದೆ ಬರುತ್ತಿದ್ದಾರೆ.
4. ನರೇಗಾ ಯೋಜನೆಯಡಿ 724 ಕಾಮಗಾರಿಗಳನ್ನು ಕೈಗೊಂಡಿದ್ದು, 76 ಕಾಮಗಾರಿಗಳು ಪೂರ್ಣಗೊಂಡಿದ್ದು, 91134 ಮಾನವದಿನಗಳನ್ನು ಸೃಜನೆ ಮಾಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಮಾಹಿತಿ ನೀಡಿದರು.
5. ನರೇಗಾ ಯೋಜನೆಯಡಿ ಇನ್ನೂ ಹೆಚ್ಚಿನ ಪ್ರಗತಿ ಸಾಧನೆ ಮಾಡಲು ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಯೋಜನೆಯಡಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದೆಂಬ ಬಗ್ಗೆ ಯೋಜನೆ ತಯಾರಿಸಿ ನರೇಗಾ ಯೋಜನೆಯಡಿ ಪ್ರಗತಿಯನ್ನು ಉತ್ತಮಪಡಿಸಬೇಕೆಂದು ಸೂಚಿಸಲಾಯಿತು.

**(ಕ್ರಮ:- ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೋಲಾರ.)**

## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-

1. 2018-19ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ 40.00ಲಕ್ಷಗಳ ಮಾನವದಿನಗಳ ಸೃಜನೆ ಗುರಿಯಿದ್ದು, 35.54ಲಕ್ಷಗಳ ಮಾನವ ದಿನಗಳ ಸೃಜನೆ ಮಾಡಿ, ಶೇ.88.85ರಷ್ಟು ಪ್ರಗತಿ ಸಾಧನೆ ಮಾಡಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾಹಿತಿ ನೀಡಿದರು.
2. 2018-19ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳ ಪ್ರಗತಿ ಪರಿಶೀಲಿಸಲಾಗಿ, ಪಂಚಾಯತ್ ರಾಜ್ ಇಲಾಖೆ, 157301ಮಾನವದಿನಗಳು, ಸಾಮಾಜಿಕ ಅರಣ್ಯ 89945ಮಾನವ ದಿನಗಳು, ಕೃಷಿ ಇಲಾಖೆ 91134 ಮಾನವದಿನಗಳು, ತೋಟಗಾರಿಕೆ ಇಲಾಖೆ 159712 ಮಾನವದಿನಗಳು, ರೇಷ್ಮೆ ಇಲಾಖೆ 518238 ಮಾನವದಿನಗಳ ಸೃಜನೆ ಮಾಡಿದ್ದು, ರೇಷ್ಮೆ ಇಲಾಖೆ ಹೊರತುಪಡಿಸಿ ಉಳಿದ ಇಲಾಖೆಗಳ ಪ್ರಗತಿ ಸಮಾಧಾನಕರವಾಗಿಲ್ಲವೆಂದು ತಿಳಿಸಿ, ಇನ್ನೂ ಹೆಚ್ಚಿನ ಪ್ರಗತಿ ಸಾಧನೆ ಮಾಡಬೇಕೆಂದು ಸೂಚಿಸಲಾಯಿತು.
3. ಶಾಲಾ ಶೌಚಾಲಯಗಳ ಪ್ರಗತಿ ಪರಿಶೀಲಿಸಲಾಗಿ, 104 ಶಾಲಾ ಶೌಚಾಲಯಗಳ ನಿರ್ಮಾಣದ ಗುರಿಯಿದ್ದು, 43 ಕಾಮಗಾರಿಗಳು ಪೂರ್ಣಗೊಂಡಿದ್ದು, 55 ಕಾಮಗಾರಿಗಳು ಪ್ರಗತಿಯಲ್ಲಿದ್ದು, 6 ಕಾಮಗಾರಿಗಳನ್ನು ಪ್ರಾರಂಭಿಸಿಲ್ಲವೆಂದು ಅಧಿಕಾರಿಗಳು ಮಾಹಿತಿ ನೀಡಿದರು.

- - - 8

4. ಲೋಕಸಭಾ ಚುನಾವಣೆಯ ಮತಗಟ್ಟೆಗಳ ಸ್ಥಾಪನೆಗಾಗಿ 132 ಶಾಲಾ ಕಟ್ಟಡಗಳಿಗೆ ದುರಸ್ತಿ ಅವಶ್ಯಕತೆಯಿದ್ದು, 44 ಶಾಲಾ ಶೌಚಾಲಯಗಳ ಅಗತ್ಯವಿರುವುದಾಗಿ ವರದಿ ನೀಡಿದ್ದು, ಎಲ್ಲಾ ತಾಲ್ಲೂಕುಗಳ ತಹಸೀಲ್ದಾರರು ಸದರಿ ಶಾಲೆಗಳ ಪಟ್ಟಿ ಪಡೆದು ಅಗತ್ಯ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಶಾಲೆಗಳಿಗೆ ಫ್ಯಾನ್ ಸಹಾ ಹಾಕಿಸಬೇಕೆಂದು ಸದರಿ ವೆಚ್ಚವನ್ನು ಚುನಾವಣಾ ನಿಧಿಯಿಂದ ಭರಿಸುವುದಾಗಿ ತಿಳಿಸಿದರು.
5. 2017-18ನೇ ಸಾಲಿನ ನರೇಗಾ ಒಗ್ಗೂಡಿಸುವಿಕೆಯಡಿ 150 ಅಂಗನವಾಡಿ ಕಟ್ಟಡಗಳ ಗುರಿ ನೀಡಿದ್ದು, 92 ಕಟ್ಟಡಗಳು ಪೂರ್ಣಗೊಂಡಿದ್ದು, 54 ಕಟ್ಟಡಗಳು ಪ್ರಗತಿಯಲ್ಲಿರುವುದಾಗಿ, 4 ಕಟ್ಟಡಗಳನ್ನು ಪ್ರಾರಂಭಿಸಿಲ್ಲವೆಂದು ಅನುಷ್ಠಾನಾಧಿ ಕಾರಿಗಳು ಮಾಹಿತಿ ನೀಡಿದರು.
6. ಶಾಲಾ ಕಾಂಪೌಂಡ್ ನಿರ್ಮಾಣಕ್ಕಾಗಿ 225 ಗುರಿಯಿದ್ದು, 108 ಕಾಮಗಾರಿಗಳನ್ನು ಚಾಲನೆ ಮಾಡಿದ್ದು, 59 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
7. ವಸತಿ ಯೋಜನೆಯಡಿ 664370 ಮಾನವದಿನಗಳ ಸೃಜನೆ ಆಗಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
8. ಎಲ್ಲಾ ಶಾಲೆಗಳಿಗೆ ಶೌಚಾಲಯ ಮತ್ತು ಕಾಂಪೌಂಡ್ ನಿರ್ಮಿಸಲು ಗುರಿ ನೀಡಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.
9. ನರೇಗಾ ಯೋಜನೆಯಡಿ ವ್ಯಕ್ತಿಗತ ಕಾಮಗಾರಿಗಳ ಪ್ರಗತಿ ಪರಿಶೀಲಿಸಲಾಯಿತು. ಭೂ ಅಭಿವೃದ್ಧಿಯಡಿ 841 ಕಾಮಗಾರಿಗಳನ್ನು ಚಾಲನೆ ಮಾಡಿದ್ದು, 396 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ತೋಟಗಾರಿಕೆ ಅಭಿವೃದ್ಧಿಯಡಿ 1398 ಕಾಮಗಾರಿಗಳನ್ನು ಚಾಲನೆ ಮಾಡಿದ್ದು, 369 ಕಾಮಗಾರಿಗಳು ಪೂರ್ಣ ಗೊಂಡಿರುತ್ತವೆ. ರೇಷ್ಮೆ ಅಭಿವೃದ್ಧಿ ಅಡಿ 3408 ಕಾಮಗಾರಿಗಳನ್ನು ಚಾಲನೆ ಮಾಡಿದ್ದು, 914 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಅರಣ್ಯ ಗಿಡ ನೆಡುವಿಕೆ ಅಡಿ 1006 ಕಾಮಗಾರಿಗಳನ್ನು ಚಾಲನೆ ಮಾಡಿದ್ದು, 1880 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು.
10. ರಸ್ತೆ ಬದಿ ಗಿಡಗಳನ್ನು ನೆಡುವುದು, ಶಾಲೆಗಳಲ್ಲಿ, ಎಲ್ಲಾ ಸರ್ಕಾರಿ ಕಛೇರಿ ಆವರಣದಲ್ಲಿ, ಸಮಾಜ ಕಲ್ಯಾಣ ಇಲಾಖೆ, ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿದ್ಯಾರ್ಥಿನಿಲಯಗಳ ಆವರಣದಲ್ಲಿ ಅರಣ್ಯ ಇಲಾಖೆಯ ವತಿಯಿಂದ ನರೇಗಾ ಯೋಜನೆಯಡಿ ಗಿಡಗಳನ್ನು ಬೆಳೆಸಬೇಕೆಂದು ಸೂಚಿಸಲಾಯಿತು.
11. ಎಲ್ಲಾ ಸರ್ಕಾರಿ ಶಾಲೆಗಳಿಗೆ ಶಾಲಾ ಕಾಂಪೌಂಡ್ ಮತ್ತು ಶೌಚಾಲಯಗಳನ್ನು ನರೇಗಾ ಯೋಜನೆಯಡಿ ಕಡ್ಡಾಯವಾಗಿ ಮಾಡಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಯಿತು.
12. ಗ್ರಾಮೀಣ ಗೋದಾಮುಗಳನ್ನು ರೈತ ಸಂಪರ್ಕ ಕೇಂದ್ರಗಳ ಪಕ್ಕದಲ್ಲಿ ನಿರ್ಮಿಸಲು ಸೂಚಿಸಲಾಯಿತು.
13. ನರೇಗಾ ಯೋಜನೆಯಡಿ ಸಕಾಲಕ್ಕೆ ಕೂಲಿ ಪಾವತಿ ಅಡಿ ಶೇ.96ರಷ್ಟು ಪ್ರಗತಿಯಾಗಿದ್ದು, ಶೇ.100 ರಷ್ಟು ಸಕಾಲದಲ್ಲಿ ಕೂಲಿ ಪಾವತಿಸಲು ಕ್ರಮವಹಿಸಬೇಕೆಂದು ಅನುಷ್ಠಾನಾದಿ ಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು/ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ., ಕೋಲಾರ/ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಕೋಲಾರ/ಅನುಷ್ಠಾನ ಇಲಾಖಾಧಿಕಾರಿಗಳು)

ತೋಟಗಾರಿಕೆ ಇಲಾಖೆ:–

1. ಹನಿ ನೀರಾವರಿ ಯೋಜನೆಯಡಿ 2017–18ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ರೈತರಿಗೂ ಈ ಸಾಲಿನಲ್ಲಿ ಜೇಷ್ಠತೆ ಆಧಾರದ ಮೇಲೆ ಮಂಜೂರಾತಿ ನೀಡಲಾಗುತ್ತಿದ್ದು, ರೂ.15.891ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ರೂ.14.79ಕೋಟಿ ಅನುದಾನ ವೆಚ್ಚವಾಗಿದ್ದು, ಶೇ.93.07ರಷ್ಟು ಪ್ರಗತಿ ಸಾಧನೆಯಾಗಿರುವುದಾಗಿ ಉಪ ನಿರ್ದೇಶಕರು ಮಾಹಿತಿ ನೀಡಿದರು.
2. ಹಸಿರುಮನೆ ನಿರ್ಮಾಣಕ್ಕಾಗಿ ಸಾಮಾನ್ಯ ವರ್ಗಕ್ಕೆ ಶೇ.50ರಷ್ಟು ಮಾತ್ರ ಸಬ್ಸಿಡಿ ನೀಡುತ್ತಿದ್ದು, ಇದರಿಂದಾಗಿ ಸಾಮಾನ್ಯವರ್ಗದವರಿಗೆ ಹೆಚ್ಚಿನ ಆರ್ಥಿಕಹೊರೆಯಾಗುವ ಕಾರಣದಿಂದಾಗಿ ಪಾಲಿಹೌಸ್ ನಿರ್ಮಾಣಕ್ಕೆ ಜನ ಮುಂದೆ ಬರುತ್ತಿಲ್ಲವಾದ ಕಾರಣ ಸಬ್ಸಿಡಿ ದರವನ್ನು ಸರ್ಕಾರದ ವತಿಯಿಂದ ಹೆಚ್ಚಿಸಬೇಕಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.
3. ಕಮ್ಯುನಿಟಿ ಪಾಲಿಹೌಸ್ ನಿರ್ಮಾಣಕ್ಕೆ ಸರ್ಕಾರದ ವತಿಯಿಂದ ವಿಧಿಸಲಾಗಿರುವ ಷರತ್ತುಗಳಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಮುಂದೆ ಬರುತ್ತಿಲ್ಲವೆಂದು, ಒಟ್ಟಾರೆ ವಹಿವಾಟು ರೂ.1.00ಕೋಟಿ ಇರಬೇಕೆಂದು, ಸರ್ಕಾರದ ವಲಯದಲ್ಲಿ ಕಾರ್ಯನಿರ್ವಹಿಸಿರಬೇಕೆಂಬ ಷರತ್ತುಗಳನ್ನು ವಿಧಿಸಲಾಗಿದ್ದು, ಸರ್ಕಾರದ ವತಿಯಿಂದ ಷರತ್ತುಗಳನ್ನು ಸಡಿಲಗೊಳಿಸಬೇಕೆಂದು ಅಧಿಕಾರಿಗಳು ತಿಳಿಸಿದರು.
4. 2018–19ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೂ.5.535ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.4.784 ವೆಚ್ಚ ಮಾಡಿ ಶೇ.86.44ರಷ್ಟು ಪ್ರಗತಿ ಸಾಧನೆಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.
5. ಜಿಲ್ಲೆಯ ಮಾಲೂರು ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ತರಬೇತಿ ಹೊಂದಿದ ರೈತರು ಪುಷ್ಪೋದ್ಯಮ (Floriculture) ನಡೆಸುತ್ತಿದ್ದು, ಕೋಲಾರದಲ್ಲಿ ಬೆಳೆದ ಹೂಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುವುದೆಂದು ತಿಳಿಸಿದರು.
6. ಮಾಲೂರು ಮತ್ತು ಶ್ರೀನಿವಾಸಪುರದಲ್ಲಿ ಪುಷ್ಪೋದ್ಯಮ (Floriculture) ವಿಸ್ತರಣೆಗೆ Plan of Action ಆಗಬೇಕೆಂದು ಸೂಚಿಸಲಾಯಿತು.
7. ಕಳೆದ ಸಾಲಿನಲ್ಲಿ ಮಾವಿನ ಬೆಲೆ ಇಳಿಮುಖವಾಗಿದ್ದ ಕಾರಣ ಸರ್ಕಾರದಿಂದ ಬೆಂಬಲ ಬೆಲೆ ರೂ.2500/– ಪ್ರತಿ ಟನ್‌ಗೆ ನಿಗಧಿಪಡಿಸಿದ್ದು, 6500 ಅರ್ಜಿಗಳನ್ನು ಸ್ವೀಕೃತವಾಗಿದ್ದು, ಸರ್ಕಾರದಿಂದ ರೂ.27.00ಕೋಟಿ ಅನುದಾನ ಹಂಚಿಕೆಯಾಗಿರು ವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
8. ನರೇಗಾ ಯೋಜನೆಯಡಿ 2751 ಕಾಮಗಾರಿಗಳು ಚಾಲನೆಯಲ್ಲಿದ್ದು, 686 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 158348 ಮಾನವದಿನಗಳ ಸೃಜನೆ ಮಾಡಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

**(ಕ್ರಮ:– ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೋಲಾರ.)**

ಪದವಿ ಪೂರ್ವ ಶಿಕ್ಷಣ ಇಲಾಖೆ:–

1. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಪ್ರಗತಿ ವಿವರಣೆ ನೀಡಿ, ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗಳು ಒಟ್ಟು 31 ಅನುಮೋದಿತವಾಗಿದ್ದು, ಅನುಷ್ಠಾನ ಏಜೆನ್ಸಿ ಪಿ.ಆರ್.ಇ.ಡಿ. ಆಗಿದ್ದು, 14 ಕಾಮಗಾರಿಗಳು ಪೂರ್ಣಗೊಂಡಿದ್ದು, 14 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ 2 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, 1 ಕಾಮಗಾರಿಗೆ ನಿವೇಶನ ಲಭ್ಯವಿರುವುದಿಲ್ಲವೆಂದು ಮಾಹಿತಿ ನೀಡಿದರು.

– – – 10

2. ಆರ್.ಐ.ಡಿ.ಎಫ್–19ರಡಿ 20 ಕೊಠಡಿಗಳು, 38 ಶೌಚಾಲಯಗಳ ನಿರ್ಮಾಣ ಕಾರ್ಯವನ್ನು ಕೆ.ಆರ್.ಐ.ಡಿ.ಎಲ್.ವತಿಯಿಂದ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

**ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :–**

1. ಜಿಲ್ಲಾ ವ್ಯವಸ್ಥಾಪಕರು ಪ್ರಗತಿ ವಿವರಣೆ ನೀಡಿ, ಗಂಗಾ ಕಲ್ಯಾಣ ಯೋಜನೆಯಡಿ 2017–18ನೇ ಸಾಲಿನಲ್ಲಿ 95 ಕೊಳವೆಬಾವಿ ಕೊರೆಯುವ ಗುರಿಯಿದ್ದು, 21 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಸದರಿ 21 ಕೊಳವೆ ಬಾವಿಗಳ ವಿದ್ಯುದೀಕರಣ ಬಾಕಿಯಿರುವುದಾಗಿ ಸಭೆಗೆ ಮಾಹಿತಿ ನೀಡಿದರು.
2. ಬಾಕಿಯಿರುವ ವಿದ್ಯುದೀಕರಣ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ:– ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ, ಕೋಲಾರ)**

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ :–**

1. ಜಿಲ್ಲಾ ವ್ಯವಸ್ಥಾಪಕರು ಪ್ರಗತಿ ವಿವರಣೆ ನೀಡಿ, ಕಳೆದ ಆರು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಡಿ 159 ಕೊಳವೆಬಾವಿ ಕೊರೆಯುವ ಗುರಿಯಿದ್ದು, 7 ಕೊಳವೆಬಾವಿಗಳನ್ನು ಕೊರೆಯಿಸಲಾಗಿದ್ದು, ಸದರಿ 7 ಕೊಳವೆ ಬಾವಿಗಳ ವಿದ್ಯುದೀಕರಣ ಬಾಕಿಯಿರುವುದಾಗಿ ಸಭೆಗೆ ಮಾಹಿತಿ ನೀಡಿದರು.
2. ಬಾಕಿಯಿರುವ ವಿದ್ಯುದೀಕರಣ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ:– ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕೋಲಾರ)**

**ವಸತಿ:–**

1. 2018–19ರ ಎಂಪಿಕ್ ವಾರ್ಷಿಕ ಗುರಿ 7660 ಮನೆಗಳಾಗಿದ್ದು, 5879 ಮನೆಗಳು ಪೂರ್ಣಗೊಂಡಿದ್ದು, ಶೇ.76.75ರಷ್ಟು ಸಾಧನೆಯಾಗಿದ್ದು, 1781 ಮನೆಗಳು ಬಾಕಿಯಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು
2. 2013–14 ರಿಂದ 2017–18ರವರೆಗೆ 56,683 ಕಾಮಗಾರಿ ಆದೇಶ ನೀಡಲಾಗಿದ್ದು, 30171 ಮನೆಗಳು ಪೂರ್ಣಗೊಂಡಿದ್ದು, 1905 ಮನೆಗಳು ಬಾಕಿಯಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
3. ಹಳೆಯ ಘಟಕವೆಚ್ಚದಲ್ಲಿ ಮನೆ ನಿರ್ಮಿಸಲು ಸಾಧ್ಯವಾಗದೆ ಮನೆಯನ್ನು ಪ್ರಾರಂಭಿಸದೆ ಇರುವ ಫಲಾನುಭವಿಗಳ ಮನೆಗಳನ್ನು ರದ್ದುಪಡಿಸಿ, ಹೊಸ ಘಟಕ ವೆಚ್ಚದಲ್ಲಿ ಮನೆ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ಸೂಚಿಸಲಾಯಿತು.
4. ಜಿಲ್ಲೆಯಲ್ಲಿ 38098 ವಸತಿರಹಿತ ಕುಟುಂಬಗಳಿದ್ದು, 9057 ನಿವೇಶನ ರಹಿತ ಕುಟುಂಬಗಳಿದ್ದು, ಒಟ್ಟಾರೆ 47,155 ವಸತಿ ರಹಿತ/ನಿವೇಶನ ರಹಿತ ಕುಟುಂಬಗಳಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
5. ನಿವೇಶನ ರಹಿತರಿಗೆ ನಿವೇಶನ ನೀಡುವ ಸಲುವಾಗಿ ಸಂಬಂಧಪಟ್ಟ ತಹಸೀಲ್ದಾರ್ ಸರ್ಕಾರಿ ಜಮೀನು ಗುರುತಿಸಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಹೆಸರಿಗೆ ಖಾತೆ ಬದಲಾವಣೆ ಮಾಡಿಸಲು ಸರ್ವೆ ಸ್ಕೆಚ್ ಮಾಡಿ ಬೌಂಡರಿ ಫಿಕ್ಸ್ ಮಾಡಲು ಉಪ ನಿರ್ದೇಶಕರು, ಭೂದಾಖಲೆಗಳು ರವರಿಗೆ ಸೂಚಿಸಲಾಯಿತು.

(ಕ್ರಮ:– ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು/ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಸೀಲ್ದಾರ್ ಹಾಗೂ ಉಪ ನಿರ್ದೇಶಕರು, ಭೂದಾಖಲೆಗಳು, ಕೋಲಾರ)

ಮಧ್ಯಾಹ್ನ ಉಪಹಾರ ಯೋಜನೆ

1. ಅಕ್ಷರ ದಾಸೋಹ ಯೋಜನೆಯಡಿ ವಾರ್ಷಿಕ ಆರ್ಥಿಕ ಗುರಿ 4473.31ಲಕ್ಷಗಳಿದ್ದು, ಫೆಬ್ರವರಿ 2019ರ ಅಂತ್ಯಕ್ಕೆ ರೂ.3354.98ಲಕ್ಷಗಳು ಬಿಡುಗಡೆಯಾಗಿದ್ದು, ರೂ.2778.30ಲಕ್ಷಗಳನ್ನು ಖರ್ಚು ಮಾಡಿ ಶೇ.82.81ರಷ್ಟು ಪ್ರಗತಿ ಸಾಧನೆ ಮಾಡಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.
2. ಮಕ್ಕಳಿಗೆ ನೀಡುವ ಮಧ್ಯಾಹ್ನ ಉಪಹಾರ ಯೋಜನೆಯಡಿ ಸ್ವಚ್ಛತೆ/ನೈರ್ಮಲ್ಯ ಕಾಪಾಡಬೇಕೆಂದು ಸೂಚಿಸಲಾಯಿತು.

(ಕ್ರಮ:– ಶಿಕ್ಷಣಾಧಿಕಾರಿ, ಮಧ್ಯಾಹ್ನದ ಉಪಹಾರ ಯೋಜನೆ)

ಶಿಕ್ಷಣ ಇಲಾಖೆ:–

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಪ್ರಗತಿ ವಿವರಣೆ ನೀಡಿ, ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಉತ್ತಮಪಡಿಸಲು ಅಧ್ಯಾಯವಾರು ಅಭ್ಯಾಸ ಹಾಳೆಗಳನ್ನು ನುರಿತ ಶಿಕ್ಷಕರುಗಳಿಂದ ಸಿದ್ಧಪಡಿಸಿ ಶಾಲೆಗಳಿಗೆ ವಿತರಿಸಲಾಗಿದೆ. 6ಸೆಟ್ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ ಎಲ್ಲಾ ಶಾಲೆಗಳಿಗೆ ವಿತರಣೆ ಮಾಡಲಾಗಿದೆ, ಚಿತ್ರಬಿಡಿಸು ಅಂಕಗಳಿಸು ಎಂಬ ಪುಸ್ತಕವನ್ನು ಶಾಲೆಗಳಿಗೆ ನೀಡಲಾಗಿದೆ. ಪ್ರತಿ ಪ್ರೌಢ ಶಾಲೆಗೆ ಜಿಲ್ಲಾ ಮಟ್ಟದಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಿ ಮೇಲ್ವಿಚಾರಣೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.
2. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಯು ರಾಜ್ಯದಲ್ಲಿ ಮೊದಲ ಐದು ರ್‍ಯಾಂಕ್ ಪಡೆಯಲು ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.
3. ಪ್ರತಿದಿನ ಶಾಲಾ ಸಮಯದ ನಂತರ ಹಾಗೂ ರಜಾ ದಿವಸಗಳಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ:– ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ)

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ:–

1. ಕಾರ್ಯಪಾಲಕ ಅಭಿಯಂತರರು ವಿವರಣೆ ನೀಡಿ, 2018–19ನೇ ಸಾಲಿಗೆ ಸನ್ಮಾನ್ಯ ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ರೂ.370.00ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಒಟ್ಟು 204 ಕಾಮಗಾರಿಗಳು ಮಂಜೂರಾಗಿದ್ದು, 78 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿಕೆ 126 ಕಾಮಗಾರಿಗಳಿದ್ದು, ರೂ.119.09ಲಕ್ಷ ಅನುದಾನ ಖರ್ಚು ಮಾಡಲಾಗಿದೆ ಎಂದು ತಿಳಿಸಿದರು.
2. 3054 ಟಾಸ್ಕ್‌ಫೋರ್ಸ್ ಯೋಜನೆಯಡಿ 2018–19ನೇ ಸಾಲಿಗೆ ರೂ.305.31ಲಕ್ಷ ಅನುದಾನ ಒದಗಿಸಿದ್ದು, 66 ಕಾಮಗಾರಿಗಳನ್ನು ಕೈಗೊಂಡು 18 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ, 48 ಕಾಮಗಾರಿಗಳು ಉಳಿಕೆಯಿದ್ದು, ರೂ.100.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.52.04ಲಕ್ಷ ಅನುದಾನ ಖರ್ಚು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

– – – 12

3. ಶಾಸನಬದ್ಧ ಅನುದಾನ ರೂ.400.00ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು 232 ಕಾಮಗಾರಿಗಳನ್ನು ಕೈಗೊಂಡು, 23 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿಕೆ 209 ಕಾಮಗಾರಿಗಳಿದ್ದು, ರೂ.23.29ಲಕ್ಷ ಅನುದಾನ ಖರ್ಚು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.
4. ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ ಅಡಿಯಲ್ಲಿ 2018–19ನೇ ಸಾಲಿಗೆ ರೂ.121.36ಲಕ್ಷ ಅನುದಾನ ನಿಗಧಿಪಡಿಸಿದ್ದು, 65 ಕಾಮಗಾರಿಗಳು ಅನುಮೋದಿತವಾಗಿದ್ದು, 25 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿಕೆ 40 ಕಾಮಗಾರಿಗಳಿದ್ದು, ರೂ.45.33ಲಕ್ಷ ಅನುದಾನ ಖರ್ಚು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.
5. ಸಣ್ಣ ನೀರಾವರಿ ಕೆರೆಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಗಳ ಅಡಿಯಲ್ಲಿ 2018–19ನೇ ಸಾಲಿಗೆ ರೂ.137.39ಲಕ್ಷ ಅನುದಾನ ನಿಗಧಿಯಾಗಿದ್ದು, 63 ಕಾಮಗಾರಿಗಳು ಅನುಮೋದಿತವಾಗಿದ್ದು, 30 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ 33 ಕಾಮಗಾರಿಗಳಿದ್ದು, ರೂ.45.40ಲಕ್ಷ ಅನುದಾನ ಖರ್ಚು ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.
6. ಉಳಿಕೆ ಇರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಹಾಗೂ ನಿಗಧಿತ ಅನುದಾನವನ್ನು ಪೂರ್ಣವಾಗಿ ವೆಚ್ಚ ಭರಿಸಲು ಅನುಷ್ಠಾನಾಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸೂಚಿಸಲಾಯಿತು.

**(ಕ್ರಮ:– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿ., ಕೋಲಾರ.)**

<u>ಲೋಕೋಪಯೋಗಿ ಇಲಾಖೆ, ಕೋಲಾರ:–</u>

1. ಕಾರ್ಯಪಾಲಕ ಅಭಿಯಂತರರು ಇಲಾಖಾ ಕಾರ್ಯಕ್ರಮಗಳ ಪ್ರಗತಿ ವಿವರಣೆ ನೀಡಿದರು. ಸಿಎಂಜಿಎಸ್‌ವೈ ಅಡಿ 17 ಕಾಮಗಾರಿಗಳ ಪೈಕಿ 15 ಕಾಮಗಾರಿಗಳು ಪೂರ್ಣಗೊಂಡಿದ್ದು, 2 ಬಾಕಿಯಿರುವುದಾಗಿ ತಿಳಿಸಿದರು.
2. ಎಸ್.ಡಿ.ಪಿ.ಯೋಜನೆಯಡಿ 20 ಕಾಮಗಾರಿಗಳ ಪೈಕಿ 14 ಪೂರ್ಣಗೊಂಡಿದ್ದು, 6 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಮಾಹಿತಿ ನೀಡಿದರು.
3. ಕಳೆದ ಸಾಲಿನ ರೂ.32.00ಕೋಟಿ ಅನುದಾನ ಸರ್ಕಾರದಿಂದ ಬರಬೇಕಾಗಿದೆ ಎಂದು ತಿಳಿಸಿದರು.
4. ಇಲಾಖೆಗೆ ನಿಗಧಿಪಡಿಸಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ, ಶೇ.100ರಷ್ಟು ಪ್ರಗತಿ ಸಾಧನೆ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ:– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ)**

<u>ಸಾಮಾಜಿಕ ಅರಣ್ಯ ಇಲಾಖೆ:–</u>

1. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ರವರು ಪ್ರಗತಿ ವಿವರಣೆ ನೀಡಿದರು. 2017–18ನೇ ಸಾಲಿನಲ್ಲಿ ಆರ್.ಎಸ್.ಪಿ.ಡಿ. ಕಾರ್ಯಕ್ರಮದಡಿ 3.00ಲಕ್ಷ ಗಿಡಗಳನ್ನು ಬೆಳೆಸಲಾಗಿದ್ದು, 2018ರ ಮಳೆಗಾಲದಲ್ಲಿ 455 ಫಲಾನುಭವಿಗಳಿಗೆ ರಿಯಾಯಿತಿ ದರದಲ್ಲಿ ನೀಡಲಾಗಿರುತ್ತದೆ.
2. ನರೇಗಾ ಯೋಜನೆಯಡಿ 8.25ಲಕ್ಷ ಗಿಡಗಳನ್ನು ಬೆಳೆಸಲಾಗಿದ್ದು, 512 ಫಲಾನುಭವಿಗಳಿಗೆ 2.75ಲಕ್ಷ ಸಸಿಗಳನ್ನು ವಿತರಿಸಲಾಗಿದೆ ಹಾಗೂ 3.70ಲಕ್ಷ ಸಸಿಗಳನ್ನು ಇಲಾಖಾ/ ರಸ್ತೆಬದಿ/ಸಾರ್ವಜನಿಕ ಸ್ಥಳ ನೆಡುತೋಪು ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ ಹಾಗೂ ಉಳಿದ 1.8ಲಕ್ಷ ಸಸಿಗಳು ನರ್ಸರಿಯಲ್ಲಿದ್ದು, 2019ರ ಮಳೆಗಾಲಕ್ಕೆ ಉಪಯೋಗಿಸಿ ಕೊಳ್ಳಲಾಗುವುದೆಂದು ತಿಳಿಸಿದರು.

3. ಇಲಾಖಾ ವತಿಯಿಂದ ಎಲ್ಲಾ ಸರ್ಕಾರಿ ಶಾಲಾ ಆವರಣಗಳಲ್ಲಿ, ಸರ್ಕಾರಿ ಕಛೇರಿ ಆವರಣಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ಗಿಡಗಳನ್ನು ನೆಡಲು ಸೂಚಿಸಲಾಯಿತು.

**(ಕ್ರಮ:- ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿ ಅರಣ್ಯ ವಿಭಾಗ, ಕೋಲಾರ)**

**ಕಂದಾಯ ಇಲಾಖೆ**

1. ಸಕಾಲ ಕಾರ್ಯಕ್ರಮದಲ್ಲಿ 247 ಅರ್ಜಿಗಳು ಬಾಕಿ
2. ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 94ಎ ಅಡಿ ನಮೂನೆ 50ರಲ್ಲಿ 37053 ಅರ್ಜಿಗಳು ಸ್ವೀಕೃತಗೊಂಡಿದ್ದು, 18101 ಅರ್ಜಿಗಳು ತಿರಸ್ಕೃತಗೊಂಡಿದ್ದು, 18952ಅರ್ಜಿಗಳು ಸಕ್ರಮವಾಗಿರುತ್ತವೆ.
3. ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 94ಬಿ ಅಡಿ ನಮೂನೆ 53ರಲ್ಲಿ 31341 ಅರ್ಜಿಗಳು ಸ್ವೀಕೃತಗೊಂಡಿದ್ದು, 12287 ಅರ್ಜಿಗಳು ತಿರಸ್ಕೃತಗೊಂಡಿದ್ದು, 7740ಅರ್ಜಿಗಳು ಸಕ್ರಮವಾಗಿರುತ್ತವೆ 11314 ಅರ್ಜಿಗಳು ಬಾಕಿಯಿರುತ್ತವೆ.
4. 94ಸಿ ಅಡಿ 5637 ಅರ್ಜಿ ಸ್ವೀಕೃತಗೊಂಡಿದ್ದು, 3622ಅರ್ಜಿಗಳು ತಿರಸ್ಕೃತಗೊಂಡಿದ್ದು, 1203 ಅರ್ಜಿಗಳು ಮಂಜೂರಾಗಿದ್ದು, 194 ಹಕ್ಕುಪತ್ರ ನೀಡಲಾಗಿದೆ. ಒಟ್ಟು ವಿಲೇವಾರಿ 4825 ಅರ್ಜಿಗಳು ಬಾಕಿ 812 ಅರ್ಜಿಗಳು.
5. 94ಸಿಸಿ ಅಡಿ 2437 ಅರ್ಜಿ ಸ್ವೀಕೃತಗೊಂಡಿದ್ದು, 1463ಅರ್ಜಿಗಳು ತಿರಸ್ಕೃತಗೊಂಡಿದ್ದು, 749 ಅರ್ಜಿಗಳು ಮಂಜೂರಾಗಿದ್ದು, 261 ಹಕ್ಕುಪತ್ರ ನೀಡಲಾಗಿದೆ. ಒಟ್ಟು ವಿಲೇವಾರಿ 2212 ಅರ್ಜಿಗಳು ಬಾಕಿ 225 ಅರ್ಜಿಗಳು.
6. ಮಂಜೂರಾತಿ ನೀಡಿರುವ ಅರ್ಜಿಗಳಿಗೆ ಹಕ್ಕುಪತ್ರಗಳನ್ನು ಶೀಘ್ರವಾಗಿ ವಿತರಿಸಲು ಸೂಚಿಸಲಾಯಿತು.
7. ಸಾಲ ಮನ್ನಾಗೆ ಗುರ್ತಿಸಿದ ಅರ್ಹ ಫಲಾನುಭವಿಗಳು 39350 ಆಗಿದ್ದು, 35578 ರೈತರ ದಾಖಲಾತಿಗಳನ್ನು ಪರಿಶೀಲಿಸಿ 18225 ರೈತರ ಸಾಲ ಮನ್ನಾ ಮಾಡಲಾಗಿದ್ದು, ರೂ.92.15ಕೋಟಿ ಸಾಲ ಮನ್ನಾ ಮಾಡಲಾಗಿದೆ.
8. ತಹಸೀಲ್ದಾರ್ ಕಛೇರಿಯ ನ್ಯಾಯಾಲಯ ಪ್ರಕರಣಗಳ ಇತ್ಯರ್ಥಪಡಿಸುವಿಕೆ ಶೀಘ್ರವಾಗಿ ಮಾಡಬೇಕೆಂದು ಸೂಚಿಸಲಾಯಿತು.
9. ಸಾಮಾಜಿಕ ಭದ್ರತೆ ಯೋಜನೆಯಡಿ ವಿವಿಧ ಪಿಂಚಣಿಗಳನ್ನು ಪಡೆಯುವ ಫಲಾನುಭವಿಗಳ ಆಧಾರ ಸೀಡಿಂಗ್ ಕಾರ್ಯವನ್ನು ಶೇ.100ರಷ್ಟು ಮಾಡಬೇಕೆಂದು ಸೂಚಿಸಲಾಯಿತು.

**(ಕ್ರಮ: ಜಿಲ್ಲೆಯ ಎಲ್ಲಾ ತಹಸೀಲ್ದಾರರು)**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ವಿ. ಮಂಜುಳ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ) ಕರ್ನಾಟಕ ಸರ್ಕಾರ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

**ಚಿಕ್ಕಬಳ್ಳಾಪುರ ಜಿಲ್ಲೆಯ ಬರಪರಿಸ್ಥಿಯ ನಿರ್ವಹಣೆ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 29/03/2019 ರಂದು ಬೆಳಿಗ್ಗೆ 11:30 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಭೆಯ ನಡವಳಿ.**

ಅಧ್ಯಕ್ಷತೆ: ಡಾ॥ ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಹಾಗೂ
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು.

******

ಸಭೆಯ ಹಾಜರಾತಿ:

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
2. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ.
3. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ
4. ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ.
5. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ.
6. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.
7. ತಹಶೀಲ್ದಾರ್, ಗೌರಿಬಿದನೂರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಗುಡಿಬಂಡೆ ತಾಲ್ಲೂಕು.
8. ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ, ಗೌರಿಬಿದನೂರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಗುಡಿಬಂಡೆ ತಾಲ್ಲೂಕು.
9. ಪೌರಾಯುಕ್ತರು/ ಮುಖ್ಯಾಧಿಕಾರಿಗಳು, ನಗರಸಭೆ/ಪುರಸಭೆ/ಪಟ್ಟಣಪಂಚಾಯತಿ, ಗೌರಿಬಿದನೂರು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಗುಡಿಬಂಡೆ ತಾಲ್ಲೂಕು.

*****

2018-19 ನೇ ಸಾಲಿನ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಸರ್ಕಾರವು ಘೋಷಿಸಿರುವುದರಿಂದ ಜಿಲ್ಲೆಯಲ್ಲಿ ಜನ ಜಾನುವಾರುಗಳಿಗೆ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬರ ನಿರ್ವಹಣೆಯ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಲು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**1) ಮಳೆ ವಿವರ:-**

ಜಿಲ್ಲಾಧಿಕಾರಿಗಳು ಮಾತನಾಡಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಶೇ. 25 ರಷ್ಟು ಮಳೆ ಕೊರತೆಯಾಗಿದ್ದು, ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಶೇ 70 ರಷ್ಟು ಮಳೆ ಕೊರತೆಯಾಗಿರುತ್ತದೆ. ಮಾರ್ಚ್ ಮಾಹೆಯಲ್ಲಿ ಶೇ. 99 ರಷ್ಟು ಮಳೆಕೊರತೆಯಾಗಿರುವುದಾಗಿ ವಿವರಿಸಿದರು.

Scanned by CamScanner

2) ಬೆಳೆನಷ್ಟ ಪರಿಹಾರ (ಇನ್‌ಪುಟ್ ಸಬ್ಸಿಡಿ):-

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 80851 ಹೆಕ್ಟರ್ ಪ್ರದೇಶದಲ್ಲಿ ಮಳೆ ಕೊರತೆಯಿಂದ ಕೃಷಿ ಬೆಳೆ ನಷ್ಟ ಸಂಭವಿಸಿದ್ದು, ಒಟ್ಟು 52.92 ಕೋಟಿ ಸರ್ಕಾರಕ್ಕೆ ಮೆಮೊರಾಂಡಮ್‌ನ್ನು ಸಲ್ಲಿಸಲಾಗಿರುತ್ತದೆ. ಇ-ಆಡಳಿತ ವತಿಯಿಂದ ಈ ಬಗ್ಗೆ ತಂತ್ರಾಂಶವನ್ನು ರೂಪಿಸಲಾಗಿದ್ದು ಈ ಹಿಂದೆ ಬೆಳೆಸರ್ವೆ ಮಾಡಿರುವ ಮಾಹಿತಿಯೊಂದಿಗೆ Crop Loss Module ತಂತ್ರಾಂಶದಲ್ಲಿ ಪೇಸ್-1 ಮತ್ತು ಪೇಸ್-2 ರಂತೆ ಪರಿಶೀಲಿಸಬೇಕಾಗಿದ್ದು, ಸದರಿ ತಂತ್ರಾಂಶದಲ್ಲಿ ಮೆಮೊರಾಂಡಮ್‌ನಂತೆ ಒಟ್ಟು 1520 ಗ್ರಾಮಗಳ ಪೈಕಿ 1494 ಗ್ರಾಮಗಳಲ್ಲಿ ಬೆಳೆನಷ್ಟ ಹೊಂದಿದ್ದು ಸದರಿ ಎಲ್ಲಾ ಗ್ರಾಮಗಳನ್ನು ಹಾಗೂ ಹಾನಿಯಾದ ಬೆಳೆಗಳನ್ನು ತಂತ್ರಾಂಶದಲ್ಲಿ ದಾಖಲಿಸಲಾಗಿರುತ್ತದೆ. ಪೇಸ್-1 ರಲ್ಲಿ ಈ ಜಿಲ್ಲೆಗೆ ಸಂಬಂಧಿಸಿದಂತೆ ರೈತರ ಪಟ್ಟಿಯು ಸರ್ಕಾರ ಈ ಕೆಳಕಂಡಂತೆ ತಂತ್ರಾಂಶದಲ್ಲಿ Generate ಮಾಡಲಾಗಿರುತ್ತದೆ.


| ಕ್ರ.ಸಂ | ತಾಲ್ಲೂಕು | ಪೇಸ್-1 ರೈತರ ಸಂಖ್ಯೆ |
|---|---|---|
| 1. | ಗೌರಿಬಿದನೂರು | 12190 |
| 2. | ಚಿಂತಾಮಣಿ | 25313 |
| 3. | ಶಿಡ್ಲಘಟ್ಟ | 33522 |
| 4. | ಚಿಕ್ಕಬಳ್ಳಾಪುರ | 30433 |
| 5. | ಗುಡಿಬಂಡೆ | 7202 |
| 6. | ಬಾಗೇಪಲ್ಲಿ | ಬಾಗೇಪಲ್ಲಿ ತಾಲ್ಲೂಕಿನ ಪ್ರಮುಖ ಬೆಳೆಯಾದ ಮೆಕ್ಕೆಜೋಳ ಮತ್ತು ಶೇಂಗಾ ಕಟಾವು ಬೆಳೆ ಎಂದು ಗುರುತಿಸಿದ್ದು, ಸದರಿ ಬೆಳೆಗಳನ್ನು ಪೇಸ್-2 ರಲ್ಲಿ ಪರಿಶೀಲಿಸಬೇಕಾಗಿರುತ್ತದೆ. |
| ಒಟ್ಟು | | **108660** |

ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ, 227 ಹೆಕ್ಟರ್ ಪ್ರದೇಶದಲ್ಲಿ ಬೆಳೆನಷ್ಟ ಹೊಂದಿದ್ದು, ಈ ಬಗ್ಗೆ ಸರ್ಕಾರಕ್ಕೆ ಮೆಮೊರಾಂಡಮ್‌ನ್ನು ಸಲ್ಲಿಸಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

3. ಕುಡಿಯುವ ನೀರು ಸರಬರಾಜು:-

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 218 ಗ್ರಾಮಗಳಲ್ಲಿ ನೀರನ್ನು ಟ್ಯಾಂಕರ್/ಖಾಸಗಿ ಕೊಳವೆಬಾವಿಗಳ ಮೂಲಕ ಸರಬರಾಜು ಮಾಡಲಾಗುತ್ತಿದ್ದು, ಈ ಪೈಕಿ 106 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ದಿನಕ್ಕೆ 254 ಟ್ರಿಪ್ಸ್‌ನಂತೆ ಹಾಗೂ 112 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಮಾಡುತ್ತಿದೆ. ಹಾಗೂ ನಗರ ಪ್ರದೇಶಗಳಲ್ಲಿ ಜಿಲ್ಲೆಯಲ್ಲಿ 46 ವಾರ್ಡುಗಳಲ್ಲಿ 4 ಸ್ಥಳೀಯ ಸಂಸ್ಥೆಯ ಟ್ಯಾಂಕರ್ ಮೂಲಕ ಪ್ರತಿ ದಿನ 20 ಟ್ರಿಪ್ಸ್ ಹಾಗೂ 15 ಬಾಡಿಗೆ ಟ್ಯಾಂಕರ್‌ಗಳಿಂದ ಒಟ್ಟು ಪ್ರತಿ ದಿನ 65 ಟ್ರಿಪ್ಸ್ ನೀರು ಸರಬರಾಜು ಮಾಡುತ್ತಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಹಾಗೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ಎಲ್ಲಾ ವಾಹನಗಳಿಗೂ ಜಿ.ಪಿ.ಎಸ್‌ನ್ನು ಅಳವಡಿಸಲಾಗಿದ್ದು, ಜಿ.ಪಿ.ಎಸ್ ಅಳವಡಿಸಿರುವ ಬಗ್ಗೆ Live ವಿವರಣೆಯನ್ನು ಈ ಕೆಳಕಂಡ ಛಾಯಾಚಿತ್ರಗಳ ಮೂಲಕ ವಿವರಿಸಿದರು.

Scanned by CamScanner




- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಜಿಲ್ಲೆಯಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ವಾಹನಗಳಿಗೆ ಜಿ.ಪಿ.ಎಸ್ ಯಂತ್ರವನ್ನು ಅಳವಡಿಸಿರುವುದು ಉತ್ತಮ ಕಾರ್ಯವಾಗಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಎಲ್ಲಾ ಜಿಲ್ಲೆಗಳಿಗೂ ಜಿ.ಪಿ.ಎಸ್ ಅಳವಡಿಸುವ ಬಗ್ಗೆ ಪತ್ರ ಬರೆಯುವುದಾಗಿ ತಿಳಿಸಿ, ನೀರು ಸರಬರಾಜು ಮಾಡುವ ಮಾಲಿಕರಿಗೆ ಪ್ರತಿ 15 ದಿನಗಳಿಗೆ ಹಣವನ್ನು ಪಾವತಿಸಲು ಜಿ.ಪಿಎಸ್ ನಲ್ಲಿ ಲಿಂಕ್ ಮಾಡಲು ಸೂಚಿಸಿದರು.

- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ಮಾಲಿಕರು ಬಾಡಿಗೆ ಮೊತ್ತವನ್ನು ರೂ 500 ರಿಂದ ಇನ್ನು ಹೆಚ್ಚು ಮಾಡಲು ಬೇಡಿಕೆ ಇಟ್ಟಿರುವುದಾಗಿ ತಿಳಿಸಿದರು. ಜಿಲ್ಲಾ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಈ ಬಗ್ಗೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಜಿಲ್ಲಾಮಟ್ಟದ ಬರ ನಿರ್ವಹಣೆ ಕಮೀಟಿಯಲ್ಲಿ ಮಂಡಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

- ಜಿಲ್ಲೆಯಲ್ಲಿ ನೀರು ಸರಬರಾಜು ಮಾಡುತ್ತಿರುವ ಎಲ್ಲಾ ಬೋರ್‌ವೆಲ್‌ಗಳ ನೀರಿನ ಗುಣಮಟ್ಟದ ಬಗ್ಗೆ ಮಾಹಿತಿಯನ್ನು ಪಡೆಯಲು ಹಾಗೂ ನರೇಗಾದಡಿ water recharge structures ರಚಿಸಲು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ)**

- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಸಮಸ್ಯಾತ್ಮಕ ಗ್ರಾಮಗಳಲ್ಲಿ NRDWP, SDP, Taskforce, ಹಾಗೂ CRF ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಯಾವುದೇ ಕ್ರಿಯಾಯೋಜನೆಯಡಿ ಇಲ್ಲದಿರುವ 174 ಸಮಸ್ಯಾತ್ಮಕ ಗ್ರಾಮಗಳಿರುವುದಾಗಿ ತಿಳಿಸಿದರು. ಸದರಿ 174 ಗ್ರಾಮಗಳಿಗೆ ಪ್ರತ್ಯೇಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಕ್ರಮವಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ)**

- ಜಿಲ್ಲೆಯಲ್ಲಿ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ನೀರನ್ನು ವ್ಯರ್ಥವಾಗದ ರೀತಿ ಸಂಗ್ರಹಿಸುವ ಕುರಿತು Rain Water Harvesting ಮತ್ತು Roof Water Harvesting ನ್ನು Innovation ಅನುದಾನದಲ್ಲಿ ಕೈಗೊಳ್ಳಲು ಹಾಗೂ ಸದರಿ ವಿಷಯಗಳಲ್ಲಿ ಪರಿಣಿತಿಯನ್ನು

Scanned by CamScanner

ಹೊಂದಿದ ಶ್ರೀ ವಿಶ್ವನಾಥ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮಳೆ ನೀರನ್ನು ವ್ಯರ್ಥವಾಗದ ರೀತಿಯಲ್ಲಿ ಸಂಗ್ರಹಿಸಿ ನಂತರ ಉಪಯೋಗ ಮಾಡುವ ಬಗ್ಗೆ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ)**

- ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ದೂರುಗಳನ್ನು ಸ್ವೀಕರಿಸಿ ಜರೂರಾಗಿ ವಿಲೇವಾರಿ ಮಾಡಲು ಪ್ರತಿ ತಾಲ್ಲೂಕುಮಟ್ಟದಲ್ಲಿ 1 ಕಂಟ್ರೋಲ್ ರೂಂ ನ್ನು ತರೆದು 24X7 ರಂತೆ ಕರ್ತವ್ಯ ನಿರ್ವಹಿಸುವಂತೆ ಹಾಗೂ ಕುಡಿಯುವ ನೀರಿನ ಸಮಸ್ಯೆಯ ಕುರಿತು ದೂರುಗಳು ಸ್ವೀಕೃತವಾದಲ್ಲಿ 24 ಗಂಟೆಯೊಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಿ ಪ್ರತಿವಾರ ಗ್ರಾಮಗಳಲ್ಲಿ ಬರ ಪರಿಸ್ಥಿತಿಯ ಬಗ್ಗೆ ವೀಕ್ಷಣೆಯನ್ನು ಮಾಡಿ ನಂತರ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸುವಂತೆ ಅಧಿಕಾರಿಗಳನ್ನು ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ತಹಶೀಲ್ದಾರರು ಹಾಗೂ ಕಾರ್ಯನಿರ್ವಹಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ)**

4. <u>ಜಾನುವರುಗಳ ಮೇವಿನ ಲಭ್ಯತೆ:-</u>

- ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರು ವರದಿ ಸಲ್ಲಿಸಿರುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸದ್ಯಕ್ಕೆ ಇನ್ನೂ 10 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿರುತ್ತದೆ. ಜಿಲ್ಲೆಗೆ ಒಟ್ಟು 77,826 ಮೇವಿನ ಮಿನಿಕಿಟ್‌ಗಳು ಸರಬರಾಜಾಗಿರುತ್ತದೆ. ಇದರಲ್ಲಿ 72,168 ಮೇವಿನ ಕಿರುಪೊಟ್ಟಣಗಳು ಅರ್ಹ ರೈತರಿಗೆ ಉಚಿತವಾಗಿ ವಿತರಿಸಿದೆ. 5,658 ಮಿನಿಕಿಟ್‌ಗಳು ವಿವಿಧ ಪಶು ಸಂಸ್ಥೆಗಳಲ್ಲಿ ರೈತರಿಗೆ ವಿತರಿಸಲು ಲಭ್ಯವಿರುತ್ತದೆ. ಹಾಗೂ ಮಾನ್ಯ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ ಬೆಂಗಳೂರು ರವರು 13,191 ಮಿನಿಕಿಟ್ಟುಗಳ ಖರೀದಿ ಆದೇಶ ನೀಡಿದ್ದು, ಸದರಿ ಮೇವಿನ ಕಿಟ್ಟುಗಳು ಸದ್ಯದಲ್ಲಿ ಲಭ್ಯವಾಗುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.
- ಪ್ರಸ್ತುತ ಯಾವುದೇ ಗೋಶಾಲೆ ಮತ್ತು ಮೇವು ಬ್ಯಾಂಕುಗಳ ಅವಶ್ಯಕತೆ ಇರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಮುಂದುವರೆದು ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಮೇವಿನ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ಜನವರಿ-2019 ರ ಮಾಹೆಯಿಂದ ನೂತನ ಯೋಜನೆಯನ್ನು ರೂಪಿಸಿರುವುದಾಗಿ ತಿಳಿಸಿ, ಸದರಿ ಯೋಜನೆಯ ಕುರಿತು ಈ ಕೆಳಕಂಡಂತೆ ವಿವರಿಸಿದರು.

➢ <u>"ಸಮೃದ್ಧ ಮೇವು ಗೋವುಗಳ ನಲಿವು ಯೋಜನೆ":-</u>

ಬೇರೆ ಜಿಲ್ಲೆಗಳಿಂದ ಖರೀದಿಸಲಾಗುವ ಒಣಹುಲ್ಲು ಸ್ಥಳೀಯ ರಾಸುಗಳಿಗೆ ಸರಿಹೊಂದುವುದಿಲ್ಲವಾದುದರಿಂದ ಸ್ಥಳಿಯವಾಗಿ ಸಾಗಾಣಿಕೆ ವೆಚ್ಚವಿಲ್ಲದೆ ಕಡಿಮೆ ಖರ್ಚಿನಲ್ಲಿ ಒಣಹುಲ್ಲಿನ ಬದಲಿಗೆ ನೀರಾವರಿ ಸೌಲಭ್ಯವುಳ್ಳ ರೈತರಿಂದ ಹಸಿ ಮೇವು ಬೆಳೆಯುವುದರ ಮೂಲಕ ಪಶುಗಳ ಆರೋಗ್ಯವನ್ನು ಹಾಗೂ ಮೇವಿನ ಕೊರತೆಯನ್ನು ನೀಗಿಸುವ ಯೋಜನೆಯನ್ನು ರೂಪಿಸಲಾಗಿದ್ದು, ಮಿನಿಕಿಟ್‌ಗಳನ್ನು ಜಿಲ್ಲಾಡಳಿತ ವತಿಯಿಂದ ರೈತರಿಗೆ ಉಚಿತವಾಗಿ ನೀಡಿ ಪ್ರತಿ 1 ಎಕರೆ ಪ್ರದೇಶದಲ್ಲಿ ಹಸಿ ಮೇವು ಬೆಳೆದ ರೈತರಿಗೆ ಜಿಲ್ಲಾಢಳಿತ ವತಿಯಿಂದ ಹಾಗೂ ಕೊಚಿಮೂಲ್ ವತಿಯಿಂದ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, ಸದರಿ ರೈತರು ಬೆಳೆದ ಮೇವನ್ನು ಬೇರೆಜಿಲ್ಲೆಗೆ

Scanned by CamScanner

ಮಾರಾಟ ಮಾಡದೇ ಸ್ಥಳೀಯವಾಗಿ ಮಾರಾಟ ಮಾಡಲು ಕೋಚಿಮುಲ್ ಅಧಿಕಾರಿಗಳು, ಪಶುಪಾಲನಾ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯಿಂದ ಒಬ್ಬ ಅಧಿಕಾರಿಗಳು ರೈತನೊಂದಿಗೆ ಚತುಷ್ಪದ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತಿದೆ. ಆಫ್ರೀಕನ್ ಟಾಲ್ (ಎ.ಟಿ.ಎಂ) ಬೆಳೆದಲ್ಲಿ ಜಿಲ್ಲಾಢಳಿತ ವತಿಯಿಂದ ರೂ 2500/- ಹಾಗೂ ಸುಡಾನ್ ಸೋರ್ಗಮ್ (ಎಸ್.ಎಸ್.ಜಿ) ಮೇವು ಬೆಳೆದಲ್ಲಿ ರೂ. 3000/- ಗಳಂತೆ ಎಂ.ಪಿ.ಸಿ.ಎಸ್ ಸದಸ್ಯರಾದ ರೈತರಿಗೆ ಕೊಚಿಮೂಲ್ ವತಿಯಿಂದ ಪ್ರತಿ 1 ಎಕರೆಗೆ ರೂ 2000/- ಗಳಂತೆ ಪ್ರೋತ್ಸಾಹಧನವನ್ನಾಗಿ ವಿತರಿಸಲಾಗುತ್ತಿದ್ದು, ಈಗಾಗಲೇ ರೈತರ ನೋಂದಣಿ, ಗ್ರಾಮಲೆಕ್ಕಿಗರ ಜಮೀನು ತಪಾಸಣೆ ಹಾಗೂ ಮಿನಿಕಿಟ್‌ಗಳನ್ನು ವಿತರಿಸಲಾಗಿದ್ದು, ಶೇ. 60 ರಷ್ಟು ರೈತರು ಈಗಾಗಲೇ ಬಿತ್ತನೆ ಮಾಡಿರುವುದಾಗಿ ತಿಳಿಸಿದರು. ಸದರಿ ಎಲ್ಲಾ ಕಾರ್ಯಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ಎನ್.ಐ.ಸಿ ವತಿಯಿಂದ ತಂತ್ರಾಂಶವನ್ನು ರೂಪಿಸಲಾಗಿದ್ದು, ಸದರಿ ತಂತ್ರಾಂಶದಲ್ಲೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿರುವುದಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

| ಕ್ರ ಸಂ | ತಾಲ್ಲೂಕು | ಸ್ವೀಕೃತ ಅರ್ಜಿಗಳು | ಅನುಮೋದನೆ ಗೊಂಡ ಅರ್ಜಿಗಳು | ಅನುಮೋದ ನೆಗೊಂಡ ವಿಸ್ತೀರ್ಣ | ಒಟ್ಟು ವಿತರಿಸಿದ ಮಿನಿಕಿಟ್ | ಮಿನಿಕಿಟ್ ವಿತರಣೆ ವಿಸ್ತೀರ್ಣದಲ್ಲಿ | |
|---|---|---|---|---|---|---|---|
| | | | | | | ಎ.ಟಿ.ಎಂ | ಎಸ್.ಎಸ್.ಜಿ |
| 1 | ಗುಡಿಬಂಡೆ | 53 | 16 | 22-9 | 16 | 19-24 | 3-25 |
| 2 | ಗೌರಿಬಿದನೂರು | 656 | 345 | 371-3 | 100 | 143-1 | 228-2 |
| 3 | ಚಿಂತಾಮಣಿ | 122 | 67 | 67-22 | 47 | 27-9 | 40-13 |
| 4 | ಚಿಕ್ಕಬಳ್ಳಾಪುರ | 183 | 122 | 72-18 | 81 | 56-30 | 16-28 |
| 5 | ಬಾಗೇಪಲ್ಲಿ | 124 | 81 | 108-8 | 1 | 107-7 | 1-1 |
| 6 | ಶಿಡ್ಲಘಟ್ಟ | 222 | 99 | 102-6 | 28 | 41-1 | 61-5 |
| | ಒಟ್ಟು | 1360 | 730 | 743-26 | 273 | 394-32 | 350-34 |

- ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಈ ಹಿಂದೆ ಅತೀ ಹೆಚ್ಚು ಹುಣಸೇ ಮರಗಳನ್ನು ಬೆಳೆಸುತ್ತಿದ್ದು, ಅವುಗಳನ್ನು ಸ್ಥಳಿಯ ಮಾರುಕಟ್ಟೆಯಲ್ಲಿ ಹರಾಜು ಹಾಕುವುದರ ಮೂಲಕ ಆಧಾಯವನ್ನು ಗಳಿಸುತ್ತಿದ್ದು, ಇನ್ನು ಹೆಚ್ಚು ಹುಣಸೇ ಮರಗಳನ್ನು ಬೆಳೆಸಲು ಸೂಕ್ತ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 874 ಸ.ನಂ ಗಳಲ್ಲಿ ಒಟ್ಟು 2216-01 ಎಕರೆ ಗುಂಡುತೋಪುಗಳಲ್ಲಿ **"ಮನೆಗೊಂದು ಮರ, ಊರಿಗೊಂದು ತೋಪು, ತಾಲ್ಲೂಕಿಗೊಂದು ಕಿರು ಅರಣ್ಯ, ಜಿಲ್ಲೆಗೊಂಡು ಕಾಡು ಎಂಬಂತೆ"** ಎಲ್ಲಾ ತಾಲ್ಲೂಕುಗಳಲ್ಲಿ ಮರಗಳನ್ನು ಬೆಳೆಯುವ ಉದ್ದೇಶದಿಂದ ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದಾಗಿ ತಿಳಿಸಿದರು.
- ಸಾರ್ವಜನಿಕರು ಆಕರ್ಷಿತವಾಗುವಂತೆ ಜಿಲ್ಲೆಯಲ್ಲಿ ಅತೀ ಹೆಚ್ಚು ಜನ ಸೇರುವ ಪ್ರದೇಶದಲ್ಲಿ ಸುಂದರವಾದ ಪಾರ್ಕನ್ನು ನಿರ್ಮಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

2/1/16

**ಡಾ॥ ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ**
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಹಾಗೂ**
**ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು.**

ಪ್ರತಿಯನ್ನು:

ಸಂಬಂಧಪಟ್ಟ ಅಧಿಕಾರಿಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

Scanned by CamScanner

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರತಿ ತಿಂಗಳು ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಸಲ್ಲಿಸಬೇಕಾದ ವರದಿಯ ನಮೂನೆ

| ಕ್ರ ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಬಳ್ಳಾರಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | ಗೌರವ್ ಗುಪ್ತ, ಭಾ.ಆ.ಸೇ |
| 3 | ಭೇಟಿಯಾದ / ಪ್ರವಾಸದ ದಿನಾಂಕ | 28.03.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಇದರೊಂದಿಗೆ ಲಗತ್ತಿಸಿದೆ. |

ಅ.ಮು.ಕಾ. ಸಚಿವಾಲಯ (ಆಸು)
ಸಂಖ್ಯೆ: 763
ದಿನಾಂಕ: 27/4/19

(ಗೌರವ್ ಗುಪ್ತ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಹಾಗೂ
ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಆಸು ಇಲಾಖೆ – (ಆಸು),
ಬಹುಮಹಡಿ ಕಟ್ಟಡ,

27/4/19

29/4/19

29/4/19

**ದಿನಾಂಕ:-28-03-2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯ ಬರ ಪರಿಸ್ಥಿತಿ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:**

ಹಾಜರಿದ್ದ ಅಧಿಕಾರಿಗಳು:

1) ಜಿಲ್ಲಾಧಿಕಾರಿಗಳು, ಬಳ್ಳಾರಿ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ.
3) ಸಹಾಯಕ ಆಯುಕ್ತರು, ಬಳ್ಳಾರಿ ಮತ್ತು ಹೊಸಪೇಟೆ.
4) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ.
5) ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಳ್ಳಾರಿ.
6) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ.
7) ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.ಸ.ಇಲಾಖೆ, ಬಳ್ಳಾರಿ.
8) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.
9) ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.
10) ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬಳ್ಳಾರಿ.
11) ಕಾರ್ಯನಿರ್ವಾಹಕ ಅಭಿಯಂತರರು, ನಂ.06 ಕಾಲುವೆ ವಿಭಾಗ, ಬಳ್ಳಾರಿ.
12) ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲ್ಯು.ಎಸ್.ಡಿ., ಬಳ್ಳಾರಿ.
13) ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ (ಓ & ಎಮ್) ಗ್ರಾಮೀಣ ವಿಭಾಗ, ಬಳ್ಳಾರಿ ಮತ್ತು ಹೊಸಪೇಟೆ.
14) ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ (ಓ & ಎಮ್) ನಗರ ವಿಭಾಗ, ಬಳ್ಳಾರಿ ಮತ್ತು ಹೊಸಪೇಟೆ.
15) ತಹಶೀಲ್ದಾರರು, ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಹ.ಬೊ.ಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ.
16) ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಹ.ಬೊ.ಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ.
17) ಎಲ್ಲಾ ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಗಳು.

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸಭೆ ನಡೆಸಿ ಕೊಡಲು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಪ್ರಸ್ತುತ ಸ್ಥಿತಿ ಮತ್ತು ಈವರೆಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರಿಸಲು ತಿಳಿಸಿದರು.

**ಋತುಮಾನ ಪರಿಸ್ಥಿತಿ:-**

- ಬಳ್ಳಾರಿ ಜಿಲ್ಲೆಯಲ್ಲಿ ಜನವರಿ 2019 ರಿಂದ 25-03-2019 ರವರೆಗೆ ಸರಾಸರಿ 4 ಮಿ.ಮಿ. ಎದುರು 3 ಮಿ.ಮಿ. ಮಳೆ ಬಂದಿದ್ದು ಶೇ.-27% ಕೊರತೆ ಆಗಿರುತ್ತದೆ.
- ಜಿಲ್ಲಾಧಿಕಾರಿಗಳು ಮಾತನಾಡುತ್ತಾ 2018ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ 5 ತಾಲ್ಲೂಕುಗಳನ್ನು (ಬಳ್ಳಾರಿ, ಸಿರುಗುಪ್ಪ, ಸಂಡೂರು, ಕೂಡ್ಲಿಗಿ ಮತ್ತು ಹಡಗಲಿ) ತೀವ್ರ ಬರ ಪೀಡಿತ ತಾಲ್ಲೂಕುಗಳೆಂದು ಘೋಷಣೆಯಾದ ತಾಲ್ಲೂಕುಗಳಲ್ಲಿ

ಮುಂಗಾರು ಹಂಗಾಮಿನಲ್ಲಿ ಸಂಭವಿಸಿದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ನಷ್ಟದ ಗ್ರಾಮವಾರು (307 ಗ್ರಾಮಗಳು) ಬೆಳೆವಾರು Crop Loss Module ನಲ್ಲಿ ಡೇಟಾ ಎಂಟ್ರಿ ಮಾಡಲಾಗಿದೆ.

**ಕುಡಿಯುವ ನೀರಿನ ಪರಿಸ್ಥಿತಿ:–**

- ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 27 ಗ್ರಾಮಗಳಲ್ಲಿ (ಬಳ್ಳಾರಿ ತಾಲ್ಲೂಕು–03 ಗ್ರಾಮ, ಕೂಡ್ಲಿಗಿ–14 ಮತ್ತು ಹರಪನಹಳ್ಳಿ ತಾಲ್ಲೂಕು–10 ಗ್ರಾಮಗಳಲ್ಲಿ) 50 ಖಾಸಗಿ ಟ್ಯಾಂಕರ್ ಮುಖಾಂತರ ಹಾಗೂ 176 ಖಾಸಗಿ ಬೋರ್‌ವೆಲ್‌ಗಳನ್ನು (130 ಗ್ರಾಮಗಳು) ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ವಿವರಿಸಿದರು.
- ನಗರ ಪ್ರದೇಶದಲ್ಲಿ ಯಾವುದೇ ವಾರ್ಡುಗಳಲ್ಲಿ ಖಾಸಗಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿಲ್ಲ ಎಂದು ತಿಳಿಸಿದರು. ಕೇವಲ ಬಳ್ಳಾರಿ ಮಹಾನಗರ ಪಾಲಿಕೆ ಮತ್ತು ಸಿರುಗುಪ್ಪ ನಗರಸಭೆಯಲ್ಲಿ ಸ್ಥಳೀಯ ಸಂಸ್ಥೆ ಟ್ಯಾಂಕರ್‌ಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬಳಸಿ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ತದನಂತರ ಜಿಲ್ಲಾಧಿಕಾರಿಗಳು ಬರಗಾಲದ ಹಿನ್ನಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯವರು ಪ್ರತಿ ತಾಲ್ಲೂಕಗೆ ತಲಾ ರೂ.50.00 ಲಕ್ಷಗಳಂತೆ ಎರಡು ಬಾರಿ ಬಳ್ಳಾರಿ ಜಿಲ್ಲೆಗೆ ಒಟ್ಟು ರೂ.800.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಮೊತ್ತಕ್ಕೆ ಒಟ್ಟು 509 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು. ಈವರೆಗೆ 444 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ ಎಂದು ತಿಳಿಸಿದರು.
- ಪ್ರತಿ ತಾಲ್ಲೂಕಿಗೆ ಜಿಲ್ಲಾಧಿಕಾರಿಗಳ ಎಸ್.ಡಿ.ಆರ್.ಎಫ್. ನಿಧಿಯಿಂದ ಟ್ಯಾಂಕರ್ ಮತ್ತು ಖಾಸಗಿ ಬೋರ್‌ವೆಲ್‌ಗಳ ಬಾಡಿಗೆಗಳನ್ನು ತುರ್ತಾಗಿ ಪಾವತಿಸಲು ಪ್ರತಿ ತಾಲ್ಲೂಕಿಗೆ ಈ ಹಿಂದೆ ಬಿಡುಗಡೆ ಮಾಡಿದ್ದ ರೂ.25.00 ಲಕ್ಷಗಳನ್ನು ಹೊರೆತುಪಡಿಸಿ ಬಳ್ಳಾರಿ, ಸಂಡೂರು, ಹ.ಬೊ.ಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ ಇವರಿಗೆ ತಲಾ ರೂ.30.00 ಲಕ್ಷದಂತೆ ಒಟ್ಟು ರೂ.150.00 ಲಕ್ಷಗಳನ್ನು ತಹಶೀಲ್ದಾರರುಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು. ಈವರೆಗೆ ತಹಶೀಲ್ದಾರರು ರೂ.72.36 ಲಕ್ಷಗಳ ಬಾಡಿಗೆ ಮೊತ್ತವನ್ನು ಪಾವತಿಸಿರುತ್ತಾರೆ.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಕುಡಿಯುವ ನೀರು ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

- ಟಾಸ್ಕ್ ಪೋರ್ಸ್ (ಆರ್.ಡಿ.ಪಿ.ಆರ್ ಇಲಾಖೆ ಅನುದಾನ) ಅಡಿ ಕೈಗೊಂಡಿರುವ 509 ಕಾಮಗಾರಿಗಳಲ್ಲಿ ಬಾಕಿ ಉಳಿದಿರುವ 65 ಕಾಮಗಾರಿಗಳನ್ನು 15 ದಿನಗಳೊಳಗೆ ಪೂರ್ಣಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.ಸ. & ನೈ.ಇಲಾಖೆ, ಬಳ್ಳಾರಿ ಇವರಿಗೆ ಸೂಚಿಸಿದರು.

- 2019 ರ ಮಾರ್ಚ್ ತಿಂಗಳಿನ ಖಾಸಗಿ ಟ್ಯಾಂಕರ್ ಮತ್ತು ಖಾಸಗಿ ಬೋರ್‌ವೆಲ್‌ಗಳ ಬಿಲ್ಲುಗಳನ್ನು ಕೂಡಲೇ ಪಾವತಿಸಲು ತಹಶೀಲ್ದಾರರುಗಳಿಗೆ ಸೂಚಿಸಿದರು. ಖಾಸಗಿ ಟ್ಯಾಂಕರ್ ಬಿಲ್ಲುಗಳನ್ನು ಪ್ರತಿ ವಾರಕ್ಕೊಮ್ಮೆ ಪಾವತಿಸಲು ಸೂಚಿಸಿದರು.
- ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳೂ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

**ಮೇವಿನ ಪರಿಸ್ಥಿತಿ:-**

ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಈ ಕೆಳಕಂಡಂತೆ ಜಿಲ್ಲೆಯಲ್ಲಿ ಮೇವಿನ ಪರಿತಿಸ್ಥಿತಿ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು.

- ದಿ:25-02-2019 ರಂದು ಕೂಡ್ಲಿಗಿ ತಾಲ್ಲೂಕು ಗಂಡುಬೊಮ್ಮನಹಳ್ಳಿ ಗೋಶಾಲೆಯನ್ನು ತೆರೆಯಲಾಗಿದ್ದು, ಸಧ್ಯಕ್ಕೆ 3098 ಜಾನುವಾರುಗಳು ಗೋಶಾಲೆಯಲ್ಲಿ ಇವೆ ಎಂದು ತಿಳಿಸಿದರು.
- ಸಂಡೂರು ತಾಲ್ಲೂಕಿನ ವಿಠಲಾಪುರ ಮತ್ತು ಮೆಟ್ರಿಕಿ ಗ್ರಾಮದಲ್ಲಿ ಮೇವು ಬ್ಯಾಂಕ್ ಅನ್ನು ದಿ:25-03-2019 ರಿಂದ ಪ್ರಾರಂಭಿಸಿದ್ದು, ಈವರೆಗೆ 117 ರೈತರುಗಳಿಗೆ 8.7 ಮೆ.ಟನ್ ಮೇವು ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು. ಪ್ರತಿ ಕೆ.ಜಿ. ಮೇವಿಗೆ ಸರ್ಕಾರದ ನಿಗಧಿಪಡಿಸಿದಂತೆ ರೂ.2.00/- ರೈತರಿಂದ ಸಂಗ್ರಹಿಸಲಗುತ್ತಿದೆ ಎಂದುಂ ತಿಳಿಸಿದರು.
- ಹ.ಬೊ.ಹಳ್ಳಿ ತಾಲ್ಲೂಕಿನ ಹ.ಬೊ.ಹಳ್ಳಿ ಗ್ರಾಮದಲ್ಲಿ ದಿ:28-03-2019 ರಂದು ಮೇವು ಬ್ಯಾಂಕ್ ತೆರೆಯಲಾಗಿದ್ದು, ಪ್ರಸ್ತುತ 65.75 ಮೆ.ಟನ್ ಮೇವು ಲಭ್ಯವಿದೆ ಎಂದು ತಿಳಿಸಿದರು.
- ಕಾಲ ಕಾಲಕ್ಕೆ ಸದರಿ ಗೋಶಾಲೆ ಮತ್ತು ಮೇವು ಬ್ಯಾಂಕ್‌ಗಳಿಗೆ ಬೇಕಾಗುವ ಮೇವನ್ನು ನೇರವಾಗಿ ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ ಇವರಿಗೆ ಪ್ರಸ್ತಾವನೆ ಸಲ್ಲಿಸಲು ತಹಶೀಲ್ದಾರರುಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿದರು.
- ಪಶುಪಾಲನ ಇಲಾಖೆಯವರು 32586 ಮೇವಿನ ಕಿರುಪೊಟ್ಟಣಗಳನ್ನು 8683 ರೈತರಿಗೆ ಹಂಚಿಕೆ ಮಾಡಲಾಗಿದ್ದು, ಇದರಿಂದ 9776 ಮೆ.ಟನ್ ಹಸಿರು ಮೇವು ಉತ್ಪಾಧನೆಯಾಗುತ್ತದೆ.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಮೇವು ನಿರ್ವಹಣೆ ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

1) ಬರ ಪರಿಸ್ಥಿತಿ ತೀವ್ರಗೊಳ್ಳುವುದರಿಂದ ಪರಿಸ್ಥಿತಿ ಅನುಗುಣವಾಗಿ ಗೋಶಾಲೆ ಮತ್ತು ಮೇವಿನ ಬ್ಯಾಂಕ್‌ಗಳನ್ನು ಸ್ಥಾಪಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ತಹಶೀಲ್ದಾರರು ಮತ್ತು ಸಹಾಯಕ ನಿರ್ದೇಶಕರು ಪಶುಸಂಗೋಪನಾ ಇಲಾಖೆ ಇವರಿಗೆ ಸೂಚಿಸಿದರು.
2) ರೈತರಿಂದ ಖರೀದಿಸಿದ ಕೂಡ್ಲಿಗಿ, ಬಳ್ಳಾರಿ ಮತ್ತು ಸಂಡೂರು ತಾಲ್ಲೂಕಿನ ಮೇವಿನ ಬಿಲ್ಲುಗಳನ್ನು ಈವರೆಗೆ ಪಾವತಿಸದೇ ಇರುವುದರಿಂದ ಕೂಡಲೇ ರೈತರಿಗೆ ಪಾವತಿಸಲು ತಹಶೀಲ್ದಾರರು ಕೂಡ್ಲಿಗಿ, ಬಳ್ಳಾರಿ ಮತ್ತು ಸಂಡೂರು ಇವರಿಗೆ ಸೂಚಿಸಿದರು.

3) ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳೂ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

**ಮಹಾತ್ಮಗಾಂಧಿ ನರೇಗಾ ಯೋಜನೆ:-**

- ಆಗಸ್ಟ್ 2019ರವರೆಗೆ ರೂ.128.35 ಕೋಟಿ ವೆಚ್ಚ ಮಾಡಿ 35.23 ಲಕ್ಷ ಮಾನವ ದಿನ ಸೃಜನೆ ಮಾಡಲು ಗುರಿ ಇಟ್ಟುಕೊಂಡಿದೆ.
- 2018-19ನೇ ಸಾಲಿನಲ್ಲಿ 65.63 ಲಕ್ಷ ಮಾನವ ದಿನ ಸೃಜನೆ ಗುರಿ ಇದ್ದು, ಈಗಾಗಲೇ 69.11 ಲಕ್ಷ ಮಾನವ ದಿನ ಸೃಜನೆ ಮಾಡಿ ಶೇ.105% ರಷ್ಟು ಸಾಧನೆ ಮಾಡಲಾಗಿದೆ.
- ನರೇಗಾ ಯೋಜನೆಯಡಿ 12008 ಹೆಕ್ಟರ್ ಭೂಮಿಯನ್ನು ಕಿರು ಜಲಾನಯನ ಪ್ರದೇಶದಿಂದ ಗುರುತಿಸಿ ಈಗಾಗಲೇ ಕ್ರಿಯಾ ಯೋಜನೆ ಅನುಮೋದನೆ ನೀಡಿದೆ. 2356 ಹೆಕ್ಟರ್ ನಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. 3.96 ಲಕ್ಷ ಮಾನವ ದಿನ ಸೃಜನೆ ಮಾಡಲಾಗಿದೆ.
- ಬೆಳೆ ನಷ್ಟ ಹೊಂದಿದ ರೈತರ ಭೂಮಿಯಲ್ಲಿ 497 ಕೃಷಿ ಹೊಂಡ ನಿರ್ಮಾಣ ಪೂರ್ಣಗೊಳಿಸಲಾಗಿದೆ. 1.80 ಲಕ್ಷ ಮಾನವ ದಿನ ಸೃಜನೆ ಮಾಡಲಾಗಿದೆ.
- 853 ಚೆಕ್ ಡ್ಯಾಂ ಗುರಿ ಹೊಂದಿದ್ದು, ಅದರಲ್ಲಿ 148 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ ಹಾಗೂ 2900 ಕೆರೆಗಳಲ್ಲಿ ಕೆರೆ ಗೋಕಟ್ಟೆ, ಕಲ್ಯಾಣಿ, ಚೆಕ್‌ಡ್ಯಾಂ ಇತರೆ ಜಲಮೂಲ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಲು ಕ್ರಮಕೈಗೊಂಡಿದ್ದು, ಇದರಲ್ಲಿ 1971 ಕಾಮಗಾರಿ ಪೂರ್ಣಗೊಳಿಸಿ ಒಟ್ಟು 33.15 ಲಕ್ಷ ಮಾನವ ದಿನ ಸೃಜನೆ ಮಾಡಲಾಗಿದೆ.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಮಹಾತ್ಮ ಗಾಂಧಿ ನರೇಗಾ ಯೋಜನೆ ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

- ಈಗ ಕೈಗೊಂಡಿರುವ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಿ, ಇನ್ನು ಜನರಿಗೆ ವಲಸೆ ಹೋಗದಂತೆ ಹೆಚ್ಚಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಿದರು.
- ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳೂ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಹಿಂವಕ 203 ಸಕಾ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ, ಬೆಂಗಳೂರು
ದಿನಾಂಕ: 08.03.2019

## ಟಿಪ್ಪಣಿ

ವಿಷಯ: ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಸಂಕ್ಷಿಪ್ತ ಪ್ರವಾಸ ವರದಿ
ಉಲ್ಲೇಖ: ಸುತ್ತೋಲೆ ಸಂಖ್ಯೆ: ಸಿಆಸುಇ.19.ಇಸಪ.2018, ದಿನಾಂಕ: 11.07.2018

***

| ಕ್ರ.ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಮೊಹಮ್ಮದ್ ಮೊಹಸಿನ್, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 3 | ಬೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ:05.03.2019 ಮತ್ತು 06.03.2019 |

4. ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು:

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತೃಶ್ರೀ ಯೋಜನೆಯಡಿ ಗರ್ಭಿಣಿ ಮಹಿಳೆಯರಿಗೆ ಮೂರು ಹಂತದಲ್ಲಿ ತಲಾ 2 ಸಾವಿರ ರೂ.ಗಳಂತೆ ಒಟ್ಟು 6 ಸಾವಿರ ರೂ. ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಯಲ್ಲಿದ್ದು. ಈ ಯೋಜನೆಯ ಲಾಭ ಅರ್ಹ ಮಹಿಳೆಯರಿಗೆ ದೊರೆಯಲು ಅನುಕೂಲವಾಗುವಂತೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಪಡೆದು ಸಕಾಲಕ್ಕೆ ಈ ಸೌಲಭ್ಯ ಅವರಿಗೆ ದೊರೆಯುವಂತೆ ನೋಡಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಲಾಯಿತು.

ಈ ಯೋಜನೆಯಡಿ ಮುಂಬರುವ ಒಂದು ತಿಂಗಳ ಅವಧಿಯಲ್ಲಿ ಹತ್ತು ಸಾವಿರ ಅರ್ಹ ಫಲಾನುಭವಿಗಳ ಅರ್ಜಿ ಪಡೆಯುವ ಜೊತೆಗೆ ಅಂಗನವಾಡಿ ಕೇಂದ್ರಗಳಲ್ಲಿ ಈಗಾಗಲೇ ಮಾತೃಪೂರ್ಣ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಜಿಲ್ಲೆಯ ಅರ್ಹ ಗರ್ಭಿಣಿ ಮಹಿಳೆಯರನ್ನು ಈ ಯೋಜನೆಯಡಿ ಸೌಲಭ್ಯ ಕಲ್ಪಿಸಲು ಪ್ರಯತ್ನಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಈ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಗಂಭೀರವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಾಗೂ ಪಿಆರ್‌ಇಡಿ ಇಲಾಖೆ ಅಧಿಕಾರಿಗಳ ಮಧ್ಯೆ ಸಮನ್ವಯ ಕೊರತೆ ಕಾಣುತ್ತಿದ್ದು, ಈ ಹಿನ್ನಲೆಯಲ್ಲಿ ಇಬ್ಬರೂ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಬೇಕು. ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು ಈ ಕುರಿತು ಪರಿಶೀಲನೆ ನಡೆಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ನಿಗಮಗಳ ವ್ಯಾಪ್ತಿಯಲ್ಲಿ ಬರುವ ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆ ಮಾಡಲಾಗಿರುವ ಫಲಾನುಭವಿಗಳ ಮಾಹಿತಿ, ಈವರೆಗೆ ಕೊರೆಯಿಸಲಾದ ಕೊಳವೆಬಾವಿಗಳ ಮಾಹಿತಿ, ವಿವಿಧ ಸಲಕರಣೆ, ಸಾಮಗ್ರಿಗಳ ವಿತರಣೆ ಮತ್ತು ಯಂತ್ರಗಳಿಗೆ ವಿದ್ಯುತ್ ಸಂಪರ್ಕದ ಮಾಹಿತಿ ಸೇರಿದಂತೆ ಸದ್ಬಳಕೆಯಾಗಿರುವ ಅನುದಾನದ ವರದಿಯನ್ನು ಸಹ ಸಂಬಂಧಪಟ್ಟ ಅಧಿಕಾರಿಗಳು ಸಲ್ಲಿಸುವಂತೆ ಸೂಚನೆ ನೀಡಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗೆ ಸಂಬಂಧಪಟ್ಟಂತೆ ಸೂಕ್ತ ಪರಿಶೀಲನೆ ನಡೆಸಬೇಕು. ಈವರೆಗೆ ನೀಡಲಾದ ಅನುದಾನ, ಖರ್ಚಾಗದೇ ಉಳಿದಿರುವ ಬಗ್ಗೆ ಪರಿಶೀಲಿಸಬೇಕು. ಆಯುಷ್ ಇಲಾಖೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸಬೇಕು. ಪರಿಶಿಷ್ಟ ಜಾತಿ ಕಾಲೋನಿಗಳಿಗೆ ಮೂಲಸೌಕರ್ಯ ಕಲ್ಪಿಸಿರುವ ಬಗ್ಗೆ ಗಮನಿಸಬೇಕು. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾನೂನು ಪದವೀಧರರಿಗೆ ಪ್ರತಿ ಮಾಹೆ ನೀಡಲಾಗುವ 4 ಸಾವಿರ ರೂ. ಶಿಷ್ಯವೇತನ ಕುರಿತು ಸೂಕ್ತ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕಲ್ಪಿಸುವ ಕುರಿತು ಆಧಾರ್‌ಸೀಡಿಂಗ್ ಕಾರ್ಯ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಇತ್ತೀಚೆಗೆ ವಿಜಯಪುರದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಹಾಗೂ ಉದ್ಯೋಗಾವಕಾಶ ಲಭ್ಯವಾಗಿರುವ ಬಗ್ಗೆ ಸಮಗ್ರ ಅಂಕಿ-ಅಂಶಗಳನ್ನು ಸಂಗ್ರಹ ಮಾಡಬೇಕು. ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಉದ್ಯೋಗ ಲಭಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ತಿಳಿಸಲಾಯಿತು, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸುವಂತೆ ಸೂಚನೆ ನೀಡಲಾಯಿತು.

ಜಿಲ್ಲೆಯಲ್ಲಿ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಸೇರಿದಂತೆ ವಿವಿಧ ಸಮುದಾಯ ಭವನಗಳಿಗೆ ಜಮೀನು ಇದ್ದಲ್ಲಿ ತಕ್ಷಣ ಒದಗಿಸಬೇಕು. ಮಂಜೂರಾತಿಗಾಗಿ ಜಮೀನು ಇಲ್ಲದಿದ್ದಲ್ಲಿ ಹಾಗೂ ದಾಖಲಾತಿಗಳು ನೀಡದಿದ್ದಲ್ಲಿ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಅವಶ್ಯಕ ನೀರು ಪೂರೈಕೆ ಮಾಡಬೇಕು. ಮೇವಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಬಾಕಿ ಇರುವ ಪೋಡಿ ಪ್ರಕರಣಗಳನ್ನು ಶೀಘ್ರ ವಿಲೇವಾರಿಗೊಳಿಸುವಂತೆ ಸೂಚಿಸಲಾಯಿತು, ಸಾರಿಗೆ ಇಲಾಖೆಯಿಂದ ತಾಳಿಕೋಟೆ ಹಾಗೂ ಇಂಡಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಪಟ್ಟ ಸೂಕ್ತ ವರದಿಯನ್ನು ಸಲ್ಲಿಸುವಂತೆ ಸೂಚನೆ ನೀಡಲಾಯಿತು.

ಜಿಲ್ಲೆಯ ಎಲ್ಲ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಆಯಾ ತಾಲೂಕಾ ಮಟ್ಟದ ಅಧಿಕಾರಿಗಳೊಂದಿಗೆ ಸೂಕ್ತ ಸಮನ್ವಯತೆ ಸಾಧಿಸಬೇಕು. ಯಾವುದೇ ಪರಿಸ್ಥಿತಿಯಲ್ಲಿ ಅನುದಾನ ಲ್ಯಾಪ್ಸ್ ಆಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ತಿಳಿಸಲಾಯಿತು, ಅನುದಾನ ಲ್ಯಾಪ್ಸ್ ಮಾಡುವಂತಹ ಅಧಿಕಾರಿಗಳ ಬಗ್ಗೆ ಸರ್ಕಾರಕ್ಕೆ ಸೂಕ್ತ ವರದಿ ಸಲ್ಲಿಸಲಾಗುವುದು. ಇಂದಿನ ಸಭೆಗೆ ಗೈರು ಹಾಜರಾಗಿರುವ ಕೆಬಿಜೆಎನ್‌ಎಲ್ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ, ಶಂಕುಸ್ಥಾಪನೆ ಹಂತದಲ್ಲಿರುವ ಕಾಮಗಾರಿಗಳು, ಉದ್ಘಾಟನೆ ಹಂತದಲ್ಲಿರುವ ಕಾಮಗಾರಿಗಳು, ಆರಂಭವಾಗಿರುವ ಹಾಗೂ ಆರಂಭಿಸದೇ ಇರುವ ಕಾಮಗಾರಿಗಳ ಬಗ್ಗೆ ಎಲ್ಲ ಇಲಾಖಾಧಿಕಾರಿಗಳು ಎರಡು ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಯಿತು. ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು, ಗುರಿಗೆ ತಕ್ಕಂತೆ ಪ್ರಗತಿ ಸಾಧಿಸಬೇಕು. ಅನುದಾನ ಸಮರ್ಪಕವಾಗಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದು. ಅದರಂತೆ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಜವಾಬ್ದಾರಿ ಹೊಂದಿರುವ ಪಿಆರ್‌ಇಡಿ, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹಾಗೂ ನಿರ್ಮಿತಿ ಕೇಂದ್ರದೊಂದಿಗೆ

ಆಯಾ ಇಲಾಖೆ ಅಧಿಕಾರಿಗಳು ಸಮನ್ವಯತೆ ಸಾಧಿಸಿ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ಕೊನೆಯಲ್ಲಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಮೊಹಮ್ಮದ್ ಮೊಹಸಿನ್)
ಸರ್ಕಾರದ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ
ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ(ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ

## ಕಲಬುರಗಿ ಜಿಲ್ಲೆ

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆಯ ಹೆಸರು | ಕಲಬುರಗಿ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜೆ. ರವಿಶಂಕರ್, ಭಾ.ಆ.ಸೇ. |
| 3. | ಭೇಟಿಯಾದ / ಪ್ರವಾಸದ ದಿನಾಂಕ: | 22-03-2019 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | **ಮಳೆಯ ವಿವರ:**<br>ಜಿಲ್ಲೆಯಲ್ಲಿ ಆದ ಮಳೆಯ ವಿವರ ಮಾಹಿತಿಯನ್ನು ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ ಇವರು ಮಾತನಾಡುತ್ತ, ಜಿಲ್ಲೆಯಲ್ಲಿ, ಮುಂಗಾರು ಹಂಗಾಮಿನಲ್ಲಿ ಸರಾಸರಿ 614 ಎಂ.ಎಂ ವಾಡಿಕೆಯಂತೆ ಮಳೆ ಆಗಬೇಕಾಗಿದ್ದು, ಆದರೆ 361 ಎಂ.ಎಂ ಮಳೆ ಆಗಿರುತ್ತದೆ. ಇದರಿಂದ ಪ್ರತಿಷತ್ -41% ಕಡಿಮೆ ಮಳೆ ಆಗಿರುತ್ತದೆ. ಇದರಿಂದ ಜಿಲ್ಲೆಯಲ್ಲಿನ 07 ತಾಲೂಕುಗಳ ಪೈಕಿ 06 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಣೆಯಾಗಿರುತ್ತದೆ. (ಅಫಜಲಪೂರ, ಚಿತ್ತಾಪೂರ, ಚಿಂಚೋಳಿ, ಜೇವರ್ಗಿ, ಸೇಡಂ, ಕಲಬುರಗಿ) ಮುಂಗಾರು ಹಂಗಾಮಿನ ತೇವಾಂಶ ಕೊರತೆಯಿಂದಾಗಿ ವಿವಿಧ ಬೆಳೆಗಳು ಹಾನಿಯಾಗಿ 3,92,125 ಹೆಕ್ಟರ್ ಪ್ರದೇಶದಷ್ಟು ಬೆಳೆ ಹಾನಿಯಾಗಿರುತ್ತದೆ. ಇದರಿಂದಾಗಿ ರೂ.290.8943 ಕೋಟಿಗಳನ್ನು ಸಹಾಯ ಕೋರಿ ಸರಕಾರಕ್ಕೆ ವರದಿ ಸಲ್ಲಿಸಲಾಗಿದೆ.<br>ಅದೇ ರೀತಿಯಲ್ಲಿ ಹಿಂಗಾರು ಹಂಗಾಮಿನಲ್ಲಿ ಮಳೆ ಪ್ರಮಾಣದಿಂದಾಗಿ (1 ನೇ ಅಕ್ಟೋಬರ್ ನಿಂದ 31 ನೇ ಡಿಸೆಂಬರ್) ರವರೆಗೆ 127 ಎಂ.ಎಂ ಮಳೆ ಆಗಬೇಕಾಗಿದ್ದು, ಆದರೆ 52 ಎಂ.ಎಂ ಮಳೆ ಆಗಿರುತ್ತದೆ. ಇದರಿಂದಾಗಿ -59 ರಷ್ಟು ಮಳೆ ಕಡಿಮೆ ಮಳೆ ಆಗಿರುತ್ತದೆ. ಆದ್ದರಿಂದ ತೇವಾಂಶದ ಕೊರತೆಯಿಂದಾಗಿ ಜಿಲ್ಲೆಯ, (07) ತಾಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆಯಾಗಿರುತ್ತದೆ. (ಅಫಜಲಪೂರ, ಆಳಂದ, ಚಿತ್ತಾಪೂರ, ಚಿಂಚೋಳಿ, ಜೇವರ್ಗಿ, ಸೇಡಂ, ಕಲಬುರಗಿ) ಹಿಂಗಾರು ಹಂಗಾಮಿನ ತೇವಾಂಶ ಕೊರತೆಯಿಂದಾಗಿ ವಿವಿಧ ಬೆಳೆಗಳು 2,47,182 ಹೆಕ್ಟರ್ ಪ್ರದೇಶದಷ್ಟು ಬೆಳೆ ಹಾನಿಯಾಗಿರುತ್ತದೆ. ಇದರಿಂದಾಗಿ ರೂ.175.5342 ಕೋಟಿಗಳನ್ನು ಸಹಾಯ ಕೋರಿ ಸರಕಾರಕ್ಕೆ ವರದಿ ಸಲ್ಲಿಸಲಾಗಿದೆಯೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.<br>**ಮೇವಿನ ಲಭ್ಯತೆಯ ವಿವರ**<br>ಉಪ-ನಿರ್ದೇಶಕರು, ಪಶು ಪಾಲನೆ ಮತ್ತು ಪಶು |

| | | |
|---|---|---|
| | | ವೈದ್ಯಕೀಯ ಇಲಾಖೆ ಕಲಬುರಗಿ ಇವರು, ಮಾತನಾಡುತ್ತ, ಜಿಲ್ಲೆಯಲ್ಲಿ ಪ್ರಸ್ತುತ 583949 ಜಾನುಗಳಿದ್ದು, ಪ್ರತಿ ಜಾನುವಾರಿಗೆ ಪ್ರತಿ ದಿನ 5 ಕೆ.ಜಿಯಂತೆ ಒಂದು ವಾರದ ವರೆಗೆ 20438 ಮೆ.ಟನ್ ಮೇವು ಬೇಕಾಗಿರುತ್ತದೆ. ಸದ್ಯ ಪರಿಸ್ಥಿತಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಮೇವಿನ ಲಭ್ಯತೆ 81752 ಮೆ.ಟನ್ ಲಭ್ಯವಿರುತ್ತದೆ. ಇದನ್ನು 4 ವಾರದವರೆಗೆ ನಿಭಾಯಿಸಬಹುದು. ಇಲ್ಲಿಯವರೆಗೆ ಇಲಾಖೆಯಿಂದ ಒಟ್ಟು ಸರಬರಾಜಾದ ಮೇವಿನ ಬೀಜದ ಕಿರುಪೊಟ್ಟಣಗಳು (ಮಿನಿಕಿಟಗಳು) 37031 ಮಿನಿಕಿಟ್ ಇರುತ್ತದೆ. ಅದರಿಂದ ಒಟ್ಟು ಮೇವು ಉತ್ಪಾದನೆಯಾಗಿದ್ದು, ಸರಬರಾಜಾದ ಮೇವಿನ ಬೀಜದ ಕಿರುಪೊಟ್ಟಣಗಳು 5131 ಮಿನಿಕಿಟ್ ಇರುತ್ತದೆ. ಇದರಿಂದ ಸಹ ಹಸಿಮೇವು ಉತ್ಪಾದನೆಯಾಗಿರುತ್ತದೆ. 2018-19ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯ ಹಿಂಗಾರು ಹಂಗಾಮಿ ಬಿತ್ತನೆ ಕ್ಷೇತ್ರ ಹಿಂಗಾರು ಜೋಳ ಒಟ್ಟು 124611 ಹೆಕ್ಟೇರ್ ಬಿತ್ತನೆಯಾಗಿದ್ದು, ಶೇ.70% ಮೇವು ಉತ್ಪಾದನೆ ಆಗುವ ಸಾಧ್ಯತೆ ಇರುತ್ತದೆ. ಇದರಿಂದ ಜಿಲ್ಲೆಯಲ್ಲಿ 10,01,462 ಮೆ.ಟನ್ ಉತ್ಪಾದನೆಯಾಗಬಹುದೆಂದು ಅಂದಾಜಿಸಲಾಗಿದೆ. ಇನ್ನಿತರ ದ್ವಿದಳ ಕಡ್ಡಿ ಪ್ರದೇಶ 124627 ಹೆಕ್ಟೇರ ಬಿತ್ತನೆಯಾಗಿದ್ದು ಇದರಿಂದ ಸಹ ಸುಮಾರು 89206 ಮೆ.ಟನ್ನಷ್ಟು ಮೇವು ಉತ್ಪಾದನೆ ಆಗುವ ಸಂಭವವಿದೆ ಹಾಗೂ ಈ ಮೇವು ಮುಂದಿನ ದಿನಗಳಲ್ಲಿ ಜಿಲ್ಲೆಯ, ಜಾನುವಾರುಗಳಿಗೆ 49 ವಾರದವರೆಗೆ ಮೇವು ಪೂರೈಸಬಹುದಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ ಲಭ್ಯವಿರುವ 81752 ಮೆಟ್ರಿಕ್ ಟನ್ ಮೇವು ಮಾರ್ಚ-2019 ರ ವರೆಗೆ ನಿಭಾಯಿಸಬಹುದು. ಮುಂಜಾಗ್ರತ ಕ್ರಮವಾಗಿ ಜಿಲ್ಲೆಯಲ್ಲಿ ಪ್ರತಿ ತಾಲೂಕಿಗೆ ಎರಡರಂತೆ ಒಟ್ಟು 14 ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ. ಏಪ್ರಿಲ್ ಮತ್ತು ಮೇ-2019 ರ ಮಾಹೆಗಳಲ್ಲಿ ಮೇವಿನ ಸಮಸ್ಯೆ ಉದ್ಭವಿಸಬಹುದಾದ ದೃಷ್ಟಿಯಿಂದ ಈಗಾಗಲೇ ಟೆಂಡರ್ ಕರೆದು, ಸರಬರಾಜುದಾರರಿಗೆ ಕಾರ್ಯದೇಶ ನೀಡಲಾಗಿರುತ್ತದೆ ಹಾಗೂ ಜಿಲ್ಲೆಯ, ರೈತರಿಂದ ಮೇವು ಬೇಡಿಕೆ ಪ್ರಮಾಣ ಬಂದಲ್ಲಿ ತುರ್ತಾಗಿ ಸರಬರಾಜುದಾರರಿಂದ ಮೇವು ಪೂರೈಸಲಾಗುವುದು ಎಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಿದ್ದರು.<br>**ಜಲಾಶಯಗಳ ನೀರಿನ ಮಟ್ಟದ ವಿವರ**<br>ಮಾನ್ಯ ಅಧ್ಯಕ್ಷರು, ಮಾತನಾಡುತ್ತ, ಜಲಾಶಯಗಳ ನೀರಿನ ಮಟ್ಟದ ಬಗ್ಗೆ ವಿವರಿಸಿ ಎಂದಾಗ ಸದರಿ ಸಭೆಯಲ್ಲಿ ಅಧೀಕ್ಷಕ ಅಭಿಯಂತರರು, ಕೆ.ಎನ್.ಎನ್.ಎಲ್ ಕಲಬುರಗಿ ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಕೆ.ಎನ್.ಎನ್.ಎಲ್ ವಿಭಾಗ ಕಲಬುರಗಿ ವಿಭಾಗ-01 ಇವರು, ಸದರಿ ಸಭೆಗೆ ಹಾಜರಾಗದೇ ಇರುವುದರಿಂದ ಸದರಿ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿಯೆಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ನಂತರ ದೂರವಾಣಿ ಮೂಲಕ ಮಾತನಾಡಲಾಗಿ, ಜಲಾಶಯಗಳ ವಿವರದ ಬಗ್ಗೆ ಮಾಹಿತಿಯನ್ನು ನೀಡಲು ಶಾಖಾಧಿಕಾರಿಗಳು, ಮಾನ್ಯ ಅಧ್ಯಕ್ಷರಿಗೆ ಜಲಾಶಯಗಳ ನೀರಿನ ಮಟ್ಟದ ಬಗ್ಗೆ ವಿವರಿಸಿದರು.<br>**ಗ್ರಾಮೀಣ ಕುಡಿಯುವ ನೀರು ಸರಬರಾಜು:-**<br>ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ ಇವರು, ಮಾತನಾಡುತ್ತ, ಕಲಬುರಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿನ |

(20) ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದರಿಂದ ಟ್ಯಾಂಕರ್ ಮೂಲಕ ಮತ್ತು (10) ಗ್ರಾಮಗಳಲ್ಲಿ ಖಾಸಗಿ ಜಲ ಮೂಲಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಗ್ರಾಮೀಣ ಕುಡಿಯುವ ನೀರಿನ ಸಂಬಂಧವಾಗಿ ತಾಲೂಕಾ ಟಾಸ್ಕ್ ಫೋರ್ಸ್ ಅಡಿ ರೂ.6.50 ಕೋಟಿಗಳ ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ ಮೊದಲನೇ ಕಂತಾಗಿ ರೂ.3.50 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ಇದರಲ್ಲಿ 473 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇದರ ಪೈಕಿ 345 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನೂ 128 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಒಟ್ಟು ರೂ. 296.63473 ಲಕ್ಷಗಳ ಅನುದಾನ ಖರ್ಚು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ 761 ಗ್ರಾಮಗಳನ್ನು ಗುರುತಿಸಲಾಗಿದೆ. ಅದಕ್ಕಾಗಿ ರೂ.1983.78 ಲಕ್ಷಗಳ ಅನುದಾನ ಅವಶ್ಯಕತೆ ಇರುತ್ತದೆಯೆಂದು ಅಂದಾಜಿಸಲಾಗಿದೆ.

**ನಗರ ಮತ್ತು ಸ್ಥಳೀಯ ಸಂಸ್ಥೆಗಳ ಕುಡಿಯುವ ನೀರಿನ ವಿವರ.**

ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಕಲಬುರಗಿ ಇವರು, 2018-19 ನೇ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ನೀರಿನ ಸಂಬಂಧವಾಗಿ ರೂ.346.01 ಲಕ್ಷಗಳನ್ನು ಬಿಡುಗಡೆಯಾಗಿದ್ದು, ಟಾಸ್ಕ್ ಫೋರ್ಸ್ ಸಮಿತಿ ಸಭೆಯ ನಡವಳಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ತುರ್ತಾಗಿ ಕುಡಿಯುವ ನೀರಿನ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಸಂಪೂರ್ಣ ಅನುದಾನವನ್ನು ಸಂಬಂಧಪಟ್ಟ ಇಲಾಖೆಗೆ ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಕುಡಿಯುವ ನೀರಿನ ಸಂಬಂಧವಾಗಿ ಇನ್ನೂ ರೂ.1.10ಕೋಟಿಗಳ ಅನುದಾನ ಅವಶ್ಯಕತೆ ಇರುತ್ತದೆಯೆಂದು ಅಂದಾಜಿಸಲಾಗಿದೆಯೆಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಿದರು.

ಕಲಬುರಗಿ ನಗರದ 21 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದರಿಂದ ರೂ.114.00 ಲಕ್ಷಗಳ ಮೊತ್ತದ ಹೊಸ ಕೊಳವೆ ಬಾವಿಗಳನ್ನು ಕೊರೆದು ಪೈಪ್‌ಲೈನ್ ಮೂಲಕ 80 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ವಿವರ.**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಲಬುರಗಿ ಇವರು, ಮಾತನಾಡುತ್ತ, ಬರಪೀಡಿತ ತಾಲೂಕುಗಳ ಗ್ರಾಮೀಣ ಪ್ರದೇಶಗಳ ಜನರಿಗೆ 150 ಉದ್ಯೋಗ ದಿನಗಳಿಗೆ ಉದ್ಯೋಗ ದಿನಗಳನ್ನು ಯೋಜನೆಯಡಿ ತೆಗೆದುಕೊಳ್ಳಲು ಈಗಾಗಲೇ ಅವಕಾಶ ಕಲ್ಪಿಸಲಾಗಿರುತ್ತದೆ. ಎಂ.ಜಿ.ಎನ್.ಆರ್.ಇ. ಜಿ.ಎಸ್. ಯೋಜನೆಯಡಿ ಜಿಲ್ಲೆಗೆ 30 ಲಕ್ಷಗಳ ಮಾನವ ದಿನಗಳ ಗುರಿ ನೀಡಲಾಗಿದ್ದು, 31.32 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ಇದರಲ್ಲಿ ಒಟ್ಟು 97,669 ಕುಟುಂಬಗಳು ಒಳಗೊಂಡಿರುತ್ತವೆ ಹಾಗೂ 3778 ಕುಟುಂಬಗಳಿಗೆ 100 ದಿನಗಳ ಕೆಲಸ ನೀಡಲಾಗಿರುತ್ತದೆ. ಪ್ರಸ್ತುತ 1,578 ಕಾಮಗಾರಿಗಳನ್ನು ನಡೆದಿದ್ದು, ಇದರಲ್ಲಿ 27,138 ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ. ಕಲಬುರಗಿ ಜಿಲ್ಲೆಯ, 2018-19 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬರ

| | | |
|---|---|---|
| | | ಘೋಷಣೆ ಆಗುವುದಕ್ಕಿಂತ ಮುಂಚೆ 7,27,994 ಮಾನವ ದಿನಗಳು ಸೃಜಿಸಲಾಗಿರುತ್ತದೆ. ಕಲಬುರಗಿ ಜಿಲ್ಲೆಯ, 2018-19 ನೇ ಸಾಲಿನಲ್ಲಿ ಮಾಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬರ ಘೋಷಣೆಯಾದ ನಂತರ ಒಟ್ಟು 24,04,484 ಮಾನವ ದಿನಗಳು ಸೃಜಿಸಲಾಗಿರುತ್ತದೆ. ಉದ್ಯೋಗ ಖಾತ್ರಿ ಯೋಜನೆಯಡಿ ಕುಂದು ಕೊರತೆಗಳನ್ನು ಆಯುಕ್ತಾಲಯದಿಂದ ಸ್ಥಾಪಿಸಿರುವ ಸಹಾಯವಾಣಿ 18004256666 ದೊಂದಿಗೆ ಜಿಲ್ಲಾ ಪಂಚಾಯತ ಕಲಬುರಗಿಯಲ್ಲಿ (ದೂರವಾಣಿ ಸಂಖ್ಯೆ.9480866010) ಸಹಾಯವಾಣಿ ಕೋಶ ಸ್ಥಾಪಿಸಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಲಾಗುತ್ತಿದೆ. 2019-20 ನೇ ಸಾಲಿಗೆ ಎಂ.ಜಿ.ಎನ್.ಆರ್.ಇ. ಜಿ.ಎಸ್. ಯೋಜನೆಯಡಿ ಜಿಲ್ಲೆಗೆ 50 ಲಕ್ಷಗಳ ಮಾನವ ದಿನಗಳ ಗುರಿ ನೀಡಲಾಗಿದ್ದು, ಮುಂಜಾಗೃತಾ ಕ್ರಮಕ್ಕಾಗಿ 2018-19ನೇ ಸಾಲಿನ ಗುರಿಯನ್ನು ಮೂರು ಪಟ್ಟಿ ನಷ್ಟರ ಅನುಗುಣವಾಗಿ ಕಾಮಗಾರಿಗಳ ಗುಚ್ಛ ತಯ್ಯಾರಿಸಿ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಕ್ರಮ ಕೈಗೊಳ್ಳಲಾಗಿದೆಯೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.<br>ನಂತರ ಮಾನ್ಯ ಅಧ್ಯಕ್ಷರು, ಮಾತನಾಡುತ್ತ, ಜಿಲ್ಲೆಯಲ್ಲಿ ಬರ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಸಿದಂತೆ, ತಾಲೂಕು ಮಟ್ಟದ ಅಧಿಕಾರಿಗಳು ವಾರಕ್ಕೊಮ್ಮೆ ಕುಡಿಯುವ ನೀರಿನ ಸಮಸ್ಯೆ ಕುರಿತು ಸಭೆಯನ್ನು ಜರುಗಿಸಿ ಕುಡಿಯುವ ನೀರಿನ ಸಮಸ್ಯೆ ಇರುವಂತಹ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಗಳಲ್ಲಿರುವ ಮೊದಲು ಖಾಸಗಿ ಕೊಳವೆ ಅಥವಾ ತೆರೆದ ಬಾವಿಗಳನ್ನು ಗುರುತಿಸಿ ಅಲ್ಲಿಂದ ಪೈಪ್ ಲೈನ್ ಮೂಲಕ ಅಥವಾ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವಂತೆ ಆಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

(ಡಾ: ಜೆ. ರವಿಶಂಕರ್)
ಸರ್ಕಾರದ ಕಾರ್ಯದರ್ಶಿ,
ವಸತಿ ಇಲಾಖೆ
ಹಾಗೂ ಕಲಬುರಗಿ ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ: 30.03.2019 ರಂದು ಬೆಳಿಗ್ಗೆ 11.00 ಗಂಟೆಗೆ, ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಜರುಗಿದ ಸಭೆಯ ನಡುವಳಿಗಳು:-**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ಪಟ್ಟಿ ಲಗತ್ತಿಸಿದೆ:**

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೀದರ ರವರು ಮಾತನಾಡಿ, ಸಭೆಗೆ ಆಗಮಿಸಿದ ಬೀದರ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸ್ವಾಗತಿಸಿ, ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಲು ಕೋರಿದರು.

ಅದರಂತೆ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಈ ಕೆಳಗಿನಂತೆ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಟ್ಟರು.

**ವಿಷಯ:-1 ಕೃಷಿ ಇಲಾಖೆ:-**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮುಂಗಾರು ಮಳೆ ಪ್ರಮಾಣ, ಬೆಳೆ ಬಿತ್ತನೆ ಹಾಗೂ ಹಿಂಗಾರು ಮಳೆ ಪ್ರಮಾಣ, ಬೆಳೆ ಬಿತ್ತನೆ ಕುರಿತು ಹಿಂದಿನ ಸಭೆಯಲ್ಲಿ ವಿಮರ್ಶೆ ಮಾಡಲಾಗಿದೆ. ಈ ಸಭೆಯಲ್ಲಿ ಬೆಳೆ ವಿಮೆಯ ಕುರಿತು ಪ್ರಸ್ತುತ 2018-19ನೇ ಸಾಲಿನಲ್ಲಿ ಎಷ್ಟು ಜನ ರೈತರು ಬೆಳೆ ವಿಮೆಗಾಗಿ ನೊಂದಾಯಿಸಿರುತ್ತಾರೆ. ಎಷ್ಟು ಬೆಳೆ ವಿಮೆ ಮೊತ್ತ ಕ್ಲೆಮ್ ಇತ್ಯರ್ಥವಾಗಿದೆ, ಎಷ್ಟು ಹಣ ರೈತರಿಗೆ ಪಾವತಿಯಾಗಿದೆ ಈ ಮಾಹಿತಿಗಳನ್ನು ನೀಡಲು ಕೃಷಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು. ಇಲಾಖಾಧಿಕಾರಿಗಳು ಮಾತನಾಡಿ, 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 184144 ರೈತರು ಬೆಳೆ ವಿಮೆ ನೊಂದಣಿ ಮಾಡಿಸಿದ್ದು, ಇದಕ್ಕೆ ಸಂಬಂಧಪಟ್ಟ ಮುಂಗಾರು ಹಂಗಾಮಿನ ಬೆಳೆ ಕಟಾವು, ಪ್ರಯೋಗಗಳ ಇಳುವರಿ ಮಾಹಿತಿಯ ವಿವರಗಳನ್ನು ವಿಮೆ ಕಂಪನಿಗೂ ಸಲ್ಲಿಸಲಾಗಿದ್ದು, ಇನ್ನು ವಿಮೆ ಕಂಪನಿಯವರು ಪರಿಹಾರ ಮೊತ್ತವನ್ನು ಇತ್ಯರ್ಥಗೊಳಿಸುವ ಹಂತದಲ್ಲಿರುತ್ತದೆ ಎಂದು ತಿಳಿಸಿದರು. ಅದರಂತೆ 2018-19ನೇ ಸಾಲಿನ ಹಿಂಗಾರು ಹಂಗಾಮಿನ ಜಿಲ್ಲೆಯಲ್ಲಿ ಒಟ್ಟು 34409 ರೈತರು ವಿಮೆ ನೊಂದಣಿ ಮಾಡಿಸಿದ್ದು, ಇದಕ್ಕೆ ಸಂಬಂಧಿಸಿದ, ಬೆಳೆ ಕಟಾವು ಪ್ರಯೋಗಗಳ ಇಳುವರಿ ಮಾಹಿತಿಯನ್ನು ಶೇ.98ರಷ್ಟು ವರದಿಯನ್ನು ಈಗಾಗಲೇ ವಿಮೆ ಕಂಪನಿಗೆ ನೀಡಲಾಗಿದ್ದು, ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು ಕಳೆದ 2017-18ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 180211 ರೈತರು ವಿಮೆ ಮಾಡಿಸಿದ್ದು, ಒಟ್ಟು ರೂ. 84.45 ಲಕ್ಷ ಪರಿಹಾರ ಮೊತ್ತ ಬಿಡುಗಡೆ ಮಾಡಲಾಗಿ, ಒಟ್ಟು 2087 ರೈತರು ಪರಿಹಾರ ಪಡೆದಿರುತ್ತಾರೆ. ಹಾಗೂ ಕಳೆದ 2017-18ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಒಟ್ಟು 77 ರೈತರು ವಿಮೆ ನೊಂದಣಿ ಮಾಡಿಸಿದ್ದು, ಅದರಲ್ಲಿ ರೂ.0.5 ಲಕ್ಷ ಪರಿಹಾರ ಮೊತ್ತ ಬಿಡುಗಡೆಯಾಗಿದ್ದು, 10 ಜನ ರೈತರು ವಿಮೆಯ ಪರಿಹಾರ ಧನವನ್ನು ಪಡೆದಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

**(ಕ್ರಮ: ಕೃಷಿ ಇಲಾಖೆ ಬೀದರ)**

<u>ವಿಷಯ:2:- ರೈತರ ಆತ್ಮಹತ್ಯೆ:-</u>

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯಲ್ಲಿ ಆದ ರೈತರ ಆತ್ಮಹತ್ಯೆ ಪ್ರಕರಣಗಳ ಕುರಿತು ಮಾಹಿತಿ ಕೇಳಿದರು. ಇಲಾಖಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 43 ರೈತರ ಆತ್ಮಹತ್ಯ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ 40 ಪುರುಷರು ಹಾಗೂ 3 ಮಹಿಳೆಯರು ಇರುತ್ತಾರೆ. ಎಫ್.ಎಸ್.ಎಲ್ ಹಾಗೂ ಇತರೆ ವರದಿಗಾಗಿ 7 ಪ್ರಕರಣಗಳು ಬಾಕಿ ಇರುತ್ತವೆ. ಅವುಗಳೆಂದರೆ ಬೀದರ ತಾಲ್ಲೂಕಿನಲ್ಲಿ ಮೂರು ಪ್ರಕರಣಗಳು, ಹುಮನಾಬಾದ ತಾಲ್ಲೂಕಿನಲ್ಲಿ ಒಂದು ಪ್ರಕರಣ ಹಾಗೂ ಔರಾದ ತಾಲ್ಲೂಕಿನಲ್ಲಿ ಮೂರು ಪ್ರಕರಣಗಳು ಹೀಗೆ ಒಟ್ಟು 7 ಪ್ರಕರಣಗಳು ಜೂನ್ 2018 ರಿಂದ ಬಾಕಿ ಇರುತ್ತವೆಂದು ಸಭೆಯಲ್ಲಿ ತಿಳಿಸಿದರು. ಬಾಕಿ ಉಳಿದ ಪ್ರಕಣಗಳಿಗೆ ಬೇಗನೆ ಪರಿಹಾರ ವಿತರಿಸುವ ಕೆಲಸ ಮುಗಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು ಹಾಗೂ ಸಹಾಯಕ ಆಯುಕ್ತರು ಬಸವಕಲ್ಯಾಣ ಮತ್ತು ಬೀದರ)**

<u>**ವಿಷಯ ಸಂಖ್ಯೆ: 3: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:**</u>

ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿ, ಜಿಲ್ಲೆಯಲ್ಲಿ ಮೇವಿನ ಪ್ರಮಾಣದ ಬಗ್ಗೆ ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ಉಪನಿರ್ದೇಶಕರು ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯ ಅಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ 3,645,949 ಜಾನುವಾರುಗಳಿದ್ದು, ಪ್ರಸ್ತುತ 93,153 ಮೇಟ್ರಿಕ್ ಟನ್ ಮೇವಿನ ಲಭ್ಯತೆ ಇದ್ದು, ಇನ್ನು 7 ವಾರಗಳ ಕಾಲ ಸಾಕಾಗುವಷ್ಟು ಮೇವು ಇದೆ. ಪ್ರಸ್ತುತ ಬರ ಸ್ಥಿತಿಯಲ್ಲಿ ಮೇವಿನ ಕೊರತೆ ನಿಭಾಯಿಸಲು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಪ್ರತಿ ತಾಲೂಕಿಗೆ ಒಂದು ಹೀಗೆ ಒಟ್ಟು 5 ಮೇವು ಬ್ಯಾಂಕ್‌ಗಳ ಅವಶ್ಯಕತೆ ಇದ್ದು, 5 ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಿ ಬೇಡಿಕೆ ಅನುಸಾರ ಮೇವನ್ನು ಒದಗಿಸಲಾಗುವುದು. ಚಿಟಗುಪ್ಪಾ ಮತ್ತು ಬಸವಕಲ್ಯಾಣನಲ್ಲಿ ಮೇವು ಬ್ಯಾಂಕ ಸ್ಥಾಪನೆಯಾಗಿದ್ದು, ಪ್ರತಿ ಕೆ.ಜಿ.ಗೆ ರೂ. 2ರಂತೆ ಮೇವು ಮಾರಾಟ ಮಾಡಲಾಗುವುದು ಹಾಗೂ ಸದ್ಯ ಯಾವುದೇ ಗೋ-ಶಾಲೆಗಳನ್ನು ತೆರೆದಿಲ್ಲ, ಮುಂಬರುವ ದಿನಗಳಲ್ಲಿ ಬರ ಪರಿಸ್ಥಿತಿ ತೀವ್ರ ಹೆಚ್ಚಾದರೆ ತಾಲೂಕಿಗೆ ತಲಾ ಒಂದರಂತೆ ಗೋಶಾಲೆ ತೆರೆಯಲು ಕ್ರಮ ಕೈಗೊಂಡು ಲಾರಿ (ವ್ಯಾನ್) ಮುಖಾಂತರ ಮೇವನ್ನು ಕಳುಹಿಸಲಾಗುವುದು ಎಂದು ತಿಳಿಸಿದರು. ಅದಲ್ಲದೇ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಬೀದರ ಜಿಲ್ಲೆಯಲ್ಲಿ ಲಭ್ಯವಿದ್ದ ಮೇವನ್ನು ಹೊರ ರಾಜ್ಯಗಳಿಗೆ ಹೋಗದಂತೆ ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ)**

<u>**ವಿಷಯ: 4: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:-**</u>

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳ ಕುರಿತು ತಾಲ್ಲೂಕುವಾರು ಮಾಹಿತಿ ಕೇಳಿದರು. ಇಲಾಖಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 166 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಒಟ್ಟು 35 ಖಾಸಗಿ ಬೋರವೆಲ್‌ಗಳಿಂದ ನೀರು ಪಡೆಯಲಾಗುತ್ತಿದ್ದು, ಪ್ರಸ್ತುತ ಐದು ಗ್ರಾಮಗಳಿಗೆ ಟ್ಯಾಂಕರ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಇನ್ನು ಟಾಸ್ಕಫೋರ್ಸ ಯೋಜನೆಯಡಿ ರೂ. 450.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಯೋಜನೆಯಡಿ ಒಟ್ಟು 249 ಕಾಮಗಾರಿಗಳು ತೆಗೆದುಕೊಳ್ಳಲಾಗಿದ್ದು, ಅದರಲ್ಲಿ 231 ಕಾಮಗಾರಿಗಳ ಕೆಲಸ ಪೂರ್ಣಗೊಂಡಿದ್ದು, ಇದಕ್ಕಾಗಿ ರೂ. 219.60 ಲಕ್ಷ ಅನುದಾನ ಖರ್ಚಾಗಿರುತ್ತದೆ ಹಾಗೂ ಉಳಿದ ಬಿಲ್ಲುಗಳು ಉಪ-ವಿಭಾಗಗಳಿಂದ ಬರಬೇಕಾಗಿರುತ್ತವೆ ಎಂದು ಹೇಳಿದರು, ಹೊಸದಾಗಿ 241 ಬೋರವೆಲ್ ಕೊರೆಯಲಾಗಿದ್ದು, ಇವುಗಳ ಪೈಕಿ 53 ಬೋರವೆಲ್‌ಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುತ್ತದೆ 83 ಕೊಳವೆ ಬಾವಿಗಳಿಗೆ ಗ್ರಾ.ಕು.ನೀ&ನೈ ಉಪ-ವಿಭಾಗಗಳಿಂದ ಮೋಟಾರು ಅಳವಡಿಸಲಾಗಿದೆ. ಹಾಗೂ 51 ಕೊಳವೆ ಬಾವಿಗಳಿಗೆ ಗ್ರಾಮ ಪಂಚಾಯತಿ ವತಿಯಿಂದ ಮೋಟಾರು ಅಳವಡಿಸಲಾಗಿರುತ್ತದೆ. ಎಂದು ಸಭೆಯಲ್ಲಿ ತಿಳಿಸಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಎಲ್ಲಾ ಕುಡಿಯುವ ನೀರಿನ ಕಾಮಗಾರಿಗಳಿಗೆ Gescom ನವರು ಕಡ್ಡಾಯವಾಗಿ ವಿದ್ಯುಚ್ಛಕ್ತಿಯನ್ನು ಕಲ್ಪಿಸಿಕೊಡಬೇಕು. ಅದಲ್ಲದೇ ಸದರಿ ವಿದ್ಯುಚ್ಚಕ್ತಿ ಸಂಪರ್ಕವನ್ನು ಪಡೆಯಲು ಸಂಬಂಧಿಸಿದ ಕಾಮಗಾರಿಗಳ ಮೊತ್ತ ಅಂದಾಜು ಪಟ್ಟಿಯಲ್ಲಿ Provision ಮಾಡಿಕೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯ ಪ್ರತಿ ಹೋಬಳಿಗೆ ಒಬ್ಬ ಹಿರಿಯ ನೋಡಲ್ ಅಧಿಕಾರಿ ನೇಮಕ ಮಾಡುವ ಕೆಲಸ ಮುಗಿದಿದೆಯಾ ಎಂದು ಕೇಳಿ, ಜಿಲ್ಲೆಯಲ್ಲಿ ಒಟ್ಟು 30 ಹೋಬಳಿಗಳಿದ್ದು, ಅದಕ್ಕಾಗಿ ಒಟ್ಟು 30 ಹಿರಿಯ ನೋಡಲ್ ಅಧಿಕಾರಿಗಳು ನೇಮಕ ಮಾಡಬೇಕು. ಅವರು ಎಪ್ರಿಲ್, ಮೇ ಮತ್ತು ಜೂನ್ 2019 ರ ವರೆಗೆ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆ ಗ್ರಾಮಗಳಲ್ಲಿ ಜನರಿಗೆ ಉದ್ಯೋಗ ಇಲ್ಲದೆ ಇರುವದು ಈ ಮಾಹಿತಿಗಳ ಕುರಿತು ಹಿರಿಯ ನೋಡೆಲ್ ಅಧಿಕಾರಿಗಳು ನಿಗಾ ವಹಿಸಿ, ತಕ್ಷಣ ಅವುಗಳಿಗೆ ಪರಿಹಾರ ಮಾಡುವ ಕೆಲಸ ಮಾಡಬೇಕು. ಕಾರ್ಯನಿರ್ವಾಹಕ ಅಧಿಕಾರಿಗಳು ವಾರಕ್ಕೊಮ್ಮೆ ಎಲ್ಲಾ ಗ್ರಾಮ ಪಂಚಾಯತ ಪಂಚಾಯತ ಅಭಿವೃದ್ಧಿ ಅಧಿಕಾರಿ (PDO) ರವರ ಸಭೆ ಕರೆದು, ಗ್ರಾಮಗಳಲ್ಲಿ ಕುಡಿಯುವ ನೀರಿನ ಸ್ಥಿತಿಗತಿಗಳ ಕುರಿತು ಚರ್ಚಿಸಿ, ಯಾವ ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ, ಅದಕ್ಕೆ ಪರಿಹಾರ ಕಂಡುಕೊಳ್ಳಬೇಕೆಂದು ಸಭೆಯಲ್ಲಿದ್ದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಅನುದಾನದ ಕೊರತೆ ಇಲ್ಲ, ಯಾವುದೇ ಹಳ್ಳಿಯಲ್ಲಿ ಕುಡಿಯುನ ನೀರಿನ ಸಮಸ್ಯೆ ಇದ್ದರೆ ತುರ್ತು ಪರಿಹಾರ ಮಾಡಬೇಕು ಹಾಗೂ ಯಾವುದೇ ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರದ ಹಾಗೆ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು. ಇಲಾಖಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 619 ಬಾವಿಗಳಿದ್ದು, ಅದರಲ್ಲಿ 273 ಬಾವಿಗಳು ಸುಸ್ಥಿತಿಯಲ್ಲಿವೆ. 48 ಬಾವಿಗಳು ದುರಸ್ತಿಯಲ್ಲಿವೆ. ಬಹಳಷ್ಟು ಬಾವಿಗಳ ನೀರಿ ಬತ್ತಿ ಹೋಗಿವೆ ಎಂದು ತಿಳಿಸಿದರು **NRDWP** ಅಡಿ ಮಾರ್ಚ-2019ರ ಅಂತ್ಯಕ್ಕೆ ಬಾಕಿ ಉಳಿದ ಕಾಮಗಾರಿಗನ್ನು ಮೇ 2019 ರ ಅಂತ್ಯಕ್ಕೆ ಮುಗಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಬೀದರ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಬರ ಪರಿಹಾರದಡಿಯಲ್ಲಿ ರೂ. 42.20 ಲಕ್ಷ ಅನುದಾನ ಮಂಜೂರಾಗಿದ್ದು, ಒಟ್ಟು 36 ಕಾಮಗಾರಿಗಳು ತೆಗೆದುಕೊಳ್ಳಲಾಗಿದ್ದು, ಅದರಲ್ಲಿ 34 ಕಾಮಗಾರಿಗಳು ಮುಗಿದಿದ್ದು, ಇನ್ನು 2 ಕಾಮಗಾರಿಗಳು ಬಾಕಿ ಇರುತ್ತವೆ. ಇದಕ್ಕಾಗಿ ಒಟ್ಟು ರೂ. 30.72 ಲಕ್ಷ ಅನುದಾನ ಖರ್ಚಾಗಿರುತ್ತದೆಂದು ಸಭೆಯಲ್ಲಿ ತಿಳಿಸಿದರು.

ಭಾಲ್ಕಿ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಭಾಲ್ಕಿ ತಾಲ್ಲೂಕಿನಲ್ಲಿ ಒಟ್ಟು 161 ಗ್ರಾಮಗಳಿದ್ದು, ಅದರಲ್ಲಿ 22 ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿವೆ ತೇಗಂಪೂರ. ಹಾಗೂ ಹರಿವಾಡಿ ಗ್ರಾಮಕ್ಕೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಟ್ಯಾಂಕರ ನೀರು ಸರಬರಾಜು ಮಾಡಿದ ಬಿಲ್ಲನ ಪಾವತಿಯನ್ನು 15 ದಿನಗಳಿಗೊಮ್ಮೆ ಇಲಾಖೆಯಿಂದ ಮಾಡಲಾಗುತ್ತಿದೆ ಹಾಗೂ 22 ಗ್ರಾಮಗಳು ಬಿಟ್ಟು ಉಳಿದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲವೆಂದು ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಬರ ಪರಿಹಾರದಡಿಯಲ್ಲಿ ಭಾಲ್ಕಿ ತಾಲ್ಲೂಕಿಗೆ ಒಟ್ಟು ರೂ. 66.90 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ಒಟ್ಟು 72 ಕಾಮಗಾರಿಗಳು ಮಂಜೂರಾಗಿದ್ದು, ಈಗಾಲೇ 54 ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನು 18 ಕಾಮಗಾರಿಗಳ ಕೆಲಸ ಪ್ರಗತಿಯಲ್ಲಿದೆ. ಇದಕ್ಕಾಗಿ ಒಟ್ಟು ರೂ. 42.80 ಲಕ್ಷ ಅನುದಾನ ಖರ್ಚಾಗಿರುತ್ತದೆಂದು ಸಭೆಯಲ್ಲಿ ತಿಳಿಸಿದರು.

**(ಕ್ರಮ: <u>ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಐದು ತಾಲ್ಲೂಕಿನ AEE Water supply</u>)**

**<u>ವಿಷಯ:5:- NRHM:</u>**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಬೀದರ ಜಿಲ್ಲೆಯಲ್ಲಿ ಎಷ್ಟು ಆಸ್ಪತ್ರೆಗಳಿಗೆ OT ಗಳ ಸೌಲಭ್ಯವಿದೆ? ಆ ಆಸ್ಪತ್ರೆಗಳಲ್ಲಿ, Gynecologist, General Surgeon, ಇದ್ದಾರೆಯೇ? ಎಂದು ಕೇಳಿದರು. ಇಲಾಖಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿರುವ ಎಲ್ಲಾ ತಾಲ್ಲೂಕಿನಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ OT ಗಳು ಪ್ರಾರಂಭವಾಗಿದ್ದು, ಆ ಆಸ್ಪತ್ರೆಗಳಲ್ಲಿ Gynecologist, General Surgeon, ಇದ್ದಾರೆ ಹಾಗೂ ಹುಮನಾಬಾದ ತಾಲ್ಲೂಕಿನಲ್ಲಿ ಮಾತ್ರ 15 ದಿನಗಳಲ್ಲಿ OT ಪ್ರಾರಂಭವಾಗುತ್ತದೆಂದು ತಿಳಿಸಿ, ಅಲ್ಲಿ Gynecologist ಹುದ್ದೆ ಖಾಲಿ ಇದ್ದು, General Surgeon ರವರೆ ಹೆರಿಗೆ ಮಾಡುತ್ತಿದ್ದಾರೆಂದು ಸಭೆಯಲ್ಲಿ ತಿಳಿಸಿದರು.

1) **<u>ಎಲ್ಲರಿಗೂ ಆರೋಗ್ಯ</u>**:- ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಎಲ್ಲರಿಗೂ ಆರೋಗ್ಯ ಕಾರ್ಯಕ್ರಮ ಮಾಹಿತಿ ಕೇಳಿದರು. ಅದಕ್ಕೆ ಇಲಾಖಾಧಿಕಾರಿಗಳು ಮಾತನಾಡಿ, ಎಲ್ಲರಿಗೂ ಆರೋಗ್ಯ ಕಾರ್ಯಕ್ರಮದಲ್ಲಿ ಹೊಸ ಸಮುದಾಯ ಆರೋಗ್ಯ ಕೇಂದ್ರಗಳ ಅವಶ್ಯಕತೆ ಸದ್ಯದಲ್ಲಿ ಇರುವದಿಲ್ಲ ಎಂದು ತಿಳಿಸಿದರು.

2) **<u>ಮಕ್ಕಳಿಗೆ ಲಸಿಕೆ ಕಾರ್ಯಕ್ರಮ</u>**:- ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮಕ್ಕಳಿಗೆ ಲಸಿಕೆ ಕಾರ್ಯಕ್ರಮದಲ್ಲಿ ಒಟ್ಟು 35265 ಮಕ್ಕಳಿದ್ದು, ಅವರಿಗೆ ಪೆಂಟಾವ್ಯೆಲೆಟ್ 100% ಲಸಿಕೆ, ಪೋಲಿಯೋ 100%, ಬಿಸಿಜಿ 100% ಲಸಿಕೆ ಆಗಿರುತ್ತದೆ ಆದರೆ ದಡಾರ ಮಾತ್ರ 90% ಆಗಿರುತ್ತದೆ ಏಕೆ ಎಂದು ಇಲಾಖಾಧಿಕಾರಿಗಳಿಗೆ ಪ್ರಶ್ನಿಸಿ, ಮುಂಬರುವ ದಿನಗಳಲ್ಲಿ 100% ದಡಾರ ಲಸಿಕೆ ಹಾಕಬೇಕೆಂದು ಇಲಾಖಾಧಿಕಾರಿಗಳಿಗೆ ತಿಳಿಸಿದರು.

3) **<u>ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ</u>**:- ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ವಾರ್ಷಿಕ ಗುರಿ ಹಾಗೂ ಸಾಧನೆ ಕುರಿತು ಮಾಹಿತಿ ಕೇಳಿದರು. ಇಲಾಖಾಧಿಕಾರಿಗಳು ಮಾತನಾಡಿ, ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಹೊಸದಾಗಿ ಕಂಡುಹಿಡಿದ ಕ್ಷಯರೋಗಿಯ ವಾರ್ಷಿಕ ಗುರಿ 1115 ಆಗಿದ್ದು, ಅದರಲ್ಲಿ 782 ಕ್ಷಯ

ರೋಗಿಗಳ ಪತ್ತೆ ಹಚ್ಚಿ, ಶೇಕಡಾ 70% ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು. ಸಾಧನೆ ತುಂಬಾ ಕಡಿಮೆಯಾಗಿದೆ, 100% ಸಾಧನೆ ಮಾಡಬೇಕು. ತಾವು ಕೊಡುವ ಚಿಕಿತ್ಸೆಯಲ್ಲಿ ಸುಧಾರಣೆ ಮಾಡಿ ಎಂದು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿ ತಿಳಿಸಿದರು.

**<u>H1N1:-</u>** ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯಲ್ಲಿ H1N1 ಖಾಯಿಲೆ ನಿಯಂತ್ರಣಕ್ಕೆ ಬಂದಿದೆಯಾ ಎಂದು ಇಲಾಧಿಕಾರಿಗಳಿಗೆ ಕೇಳಿದರು. ಇಲಾಖಾಧಿಕಾರಿಗಳು ಮಾತನಾಡಿ, H1N1 ಕಾಯಿಲೆ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿದ್ದು, ಜಿಲ್ಲೆಯಲ್ಲಿ 6 H1N1 ಕಾಯಿಲೆ ರೋಗಿಗಳನ್ನು ಗುರುತಿಸಲಾಗಿದ್ದು, ಅವರಿಗೆ ಒಳ್ಳೆಯ ರೀತಿಯ ಚಿಕಿತ್ಸೆ ನೀಡಿ ಅವರು ಗುಣಮುಖರಾಗಿರುತ್ತಾರೆ. ಹಾಗೂ ಈ ಕಾಯಿಲೆಯ ಕುರಿತು ಎಲ್ಲಾ ಕಡೆ ಪ್ರಚಾರ ಕೂಡ ಮಾಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಕಟ್ಟಡಗಳ ನಿರ್ಮಾಣ ಯಾರು ಮಾಡುತ್ತಿದ್ದಾರೆಂದು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಕೇಳಿದಾಗ, ಅವರು ಆರೋಗ್ಯ ಇಲಾಖೆಯ ಎಲ್ಲಾ ಕಟ್ಟಡ ಕಾಮಗಾರಿಗಳನ್ನು EE, H&FWD Engineering Division, Kalaburagi ಇವರು ಮಾಡುತ್ತಿದ್ದಾರೆಂದು ತಿಳಿಸಿ, ಭಾಲ್ಕಿ ತಾಲ್ಲೂಕಿನಲ್ಲಿ 20 ಕಟ್ಟಡ ಕಾಮಗಾರಿಗಳು ಹಾಗೂ ಬಸವಕಲ್ಯಾಣ ತಾಲ್ಲೂಕಿನಲ್ಲಿ 26 ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಕೆಲವೊಂದು ಪೂರ್ಣಗೊಂಡ ಕಟ್ಟಡವನ್ನು ವಶಕ್ಕೆ ತೆಗೆದು ಕೊಳ್ಳುವುದಿದೆ ಎಂದು ತಿಳಿಸಿದರು.

<u>(ಕ್ರಮ:- ಆರೋಗ್ಯ ಇಲಾಖೆ)</u>

ಔರಾದ ತಹಶೀಲ್ದಾರ ರವರು ಮಾತನಾಡಿ, ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಒಟ್ಟು 149 ಗ್ರಾಮಗಳಿದ್ದು, ಅದರಲ್ಲಿ 181 ತಾಂಡಾಗಳಿವೆ. 15 ಗ್ರಾಮಗಳಲ್ಲಿ ಖಾಸಗಿ ಬೋರವೆಲ್ ಸೇವೆ ಪಡೆಯಲಾಗಿದೆ. 3 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಟಾಸ್ಕಫೂರ್ಸ ಯೋಜನೆ ಅಡಿಯಲ್ಲಿ ಒಟ್ಟು 100.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಒಟ್ಟು 82 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, ಅದರಲ್ಲಿ 68 ಕಾಮಗಾರಿಗಳ ಕೆಲಸ ಪೂರ್ಣಗೊಂಡಿರುತ್ತದೆ. ಇದುವರೆಗೆ ಒಟ್ಟು ರೂ. 32.86 ಲಕ್ಷ ಅನುದಾನ ಖರ್ಚಾಗಿರುತ್ತದೆಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಔರಾದ ತಾಲ್ಲೂಕಿನಲ್ಲಿ ಒಟ್ಟು ಎಷ್ಟು MI Tankಗಳು ಇವೆ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಿದರು. ಔರಾದ ತಾಲ್ಲೂಕಿನಲ್ಲಿ ಒಟ್ಟು 16 ಕೆರೆಗಳಿದ್ದು, ಅವುಗಳು ಮಳೆಗಾಲದಲ್ಲಿ ತುಂಬಿಕೊಳ್ಳುತ್ತವೆ. ಸದ್ಯದಲ್ಲಿ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ ಎಂದು ಸಣ್ಣ ನೀರಾವರಿ ವಿಭಾಗ ಬೀದರ ಕಛೇರಿಯ ಕಾರ್ಯನಿರ್ವಾಹಕ ಅಭಿಯಂತರರು ರವರು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿ 5 ಕೆರೆಗಳನ್ನು ಗುರುತಿಸಿ, ತಾಲ್ಲೂಕಿಗೆ ಒಂದರಂತೆ ಜಲಾಮೃತ ಯೋಜನೆಯಡಿಯಲ್ಲಿ ಕೆರೆಗೆಳಲ್ಲಿ ನೀರನ್ನು ಶೇಖರಿಸುವ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸೂಚಿಸಿದರು. ಅದಲ್ಲದೇ MI ನ 124

ಕೆರೆಗಳಲ್ಲಿ ಜಲಾಮೃತ water shed ಮಾಡುವ ಯೋಜನೆ ಮಾಡಿಕೊಳ್ಳಿ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು. ಅದಲ್ಲದೇ MGNREGA ಯೋಜನೆಯಡಿಯಲ್ಲಿ ಎಲ್ಲಾ ಕೆರೆಗಳಲ್ಲಿ ಒಳ ಹರಿವು ಕಾಮಗಾರಿಗಳನ್ನು ತೆಗೆದುಕೊಳ್ಳಲು ತಿಳಿಸಿದರು.

ಬೀದರ ತಾಲ್ಲೂಕಿನ ತಹಶೀಲ್ದಾರ ರವರ ಮಾತನಾಡಿ, ಬೀದರ ತಾಲೂಕಿನಲ್ಲಿ ಒಟ್ಟು 51 ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದು, ಈಗಾಗಲೇ 12 ಹೊಸ ಬೋರವೆಲ್ ಕೊರೆಯುವ ಕಾಮಗಾರಿ ನಡೆಯುತ್ತಿದ್ದು, 10 ಹಳ್ಳಿಗಳಲ್ಲಿ ಬೋರವೆಲ್ ಕೊರೆಯುವ ಕೆಲಸ ಮುಗಿದಿದೆ. ಇನ್ನು ಯದಲಾಪೂರ ಹಾಗೂ ಪೋಮಾ ತಾಂಡಾದಲ್ಲಿ ಬಾಕಿ ಇದೆ ಎಂದು ತಿಳಿಸಿ, ಟಾಸ್ಕಪೂರ್ಸ ಹಾಗೂ ಎಸ್.ಡಿ.ಆರ್.ಎಫ್ ಯೋಜನೆಯಡಿ ಒಟ್ಟು 78 ಕಾಮಗಾರಿ ತೆಗೆದುಕೊಳ್ಳಲಾಗಿದ್ದು, ಅದರಲ್ಲಿ 70 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಜನವಾಡ ಗ್ರಾಮಕ್ಕೆ ಟ್ಯಾಂಕರ ವ್ಯವಸ್ಥೆಗಾಗಿ ಪಂಚಾಯತ ಅಭಿವೃದ್ಧಿ ಅಧಿಕಾರಿಯವರಿಗೆ ಪತ್ರ ಬರೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಬಸವಕಲ್ಯಾಣ ತಾಲ್ಲೂಕಿನ ತಹಶೀಲ್ದಾರ ರವರ ಮಾತನಾಡಿ, ಬಸವಕಲ್ಯಾಣ ತಾಲ್ಲೂಕಿನಲ್ಲಿ ಒಟ್ಟು 31 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದು, 6 ಖಾಸಗಿ ಬೋರವೆಲ್ ಗುರುತಿಸಲಾಗಿದೆ. ಪ್ರತಾಪೂರ ಗ್ರಾಮದ ಕಾಮಗಾರಿ ಪೂರ್ಣಗೊಂಡಿದೆ. ಎಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಎಲ್ಲಾ ಎಮ್.ಐ. ಟ್ಯಾಂಕರ್ಸ್‌ಗಳು ಮಳೆಗಾಲದಲ್ಲಿ ತುಂಬಿಕೊಳ್ಳುವ ಹಾಗೆ ಮಾಡಬೇಕು. ಎಲ್ಲಾ ತಾಲ್ಲೂಕಿನಲ್ಲಿರುವ ಕೆರೆಗಳಲ್ಲಿ ಹೂಳು ಎತ್ತುವ ಕಾಮಗಾರಿ ನಡೆಯಬೇಕು. ಇರುವ ನೀರನ್ನೆ ಸಂರಕ್ಷಣೆ ಮಾಡಿಕೊಳ್ಳಬೇಕು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಒಂದು ಕಮ್ಯುನಿಟಿ ವರ್ಕ ನಡೆಯಬೇಕು ಎಂದು ಹೇಳಿದರು.

ಹುಮನಾಬಾದ ತಾಲ್ಲೂಕಿನ ತಹಶೀಲ್ದಾರ ರವರ ಮಾತನಾಡಿ, ಹುಮನಾಬಾದ ತಾಲ್ಲೂಕಿನಲ್ಲಿ 16 ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದು, ಆ ಗ್ರಾಮಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗಿದೆ ಹಾಗೂ ಮನ್ನಾಎಖೇಳಿ ಗ್ರಾಮದಲ್ಲಿ ಒಂದು ಹೊಸ ಬೊರವೆಲ್ ಹಾಕಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

**(ಕ್ರಮ: ಐದು ತಾಲ್ಲೂಕಿನ EO & Tahsilda r)**

**ವಿಷಯ: 6: ನರೇಗಾ:-**

ಮಾನ್ಯ ಉಪ ಕಾರ್ಯದರ್ಶಿಗಳು ಮಾತನಾಡಿ, ನರೇಗಾದಲ್ಲಿ ಆದ ಕಾಮಗಾರಿ ಹಾಗೂ ಮಾನವ ದಿನಗಳ ಸೃಜಿಕೆ ಕುರಿತು ಮಾಹಿತಿ ಕೇಳಿದರು. ಸಂಬಂಧಪಟ್ಟ ಅಧಿಕಾರಿಗಳು ಮಾತನಾಡಿ, ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ 82676 ಮಾನವ ದಿನಗಳ ಸೃಜಿಕೆಯ ಗುರಿ ಹೊಂದಿ, ಅದರಲ್ಲಿ 45917 ಮಾನವ ದಿನಗಳ ಸೃಜಿಕೆಯ ಸಾಧನೆ ಆಗಿರುತ್ತದೆ ಎಂದು ತಿಳಿಸಿದರು. ಮಾನವ ದಿನಗಳ ಸೃಜಿಕೆಯ ಸಾಧನೆಯು ತೀರಾ ಕಡಿಮೆಯಿದ್ದು, ಕನಿಷ್ಟ ಪಕ್ಷ 75,000 ಲಕ್ಷ ಮಾನವ ದಿನಗಳನ್ನು ಸೃಜಿನೆ ಆಗಲೇಬೇಕು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ನರೇಗಾ ಕೆಲಸಗಳು ನಡೆಯುತ್ತಿರಬೇಕು. ಕ್ರಿಯಾ ಯೋಜನೆ ಅನುಮೋದನೆ ಮಾಡುವಾಗ ಮಾರ್ಗಸೂಚಿಗಳನ್ನು ನೋಡಿಕೊಳ್ಳಬೇಕು. ಜಮೀನು ಕೆಲಸಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು. ಔರಾದ ತಾಲ್ಲೂಕಿನಲ್ಲಿ ತೀರ ಬರ ಜಾಸ್ತಿ ಇದೆ. ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ಕೆಲಸಗಳನ್ನು ಮಾಡಿ,

ಕಾರ್ಯನಿರ್ವಾಹಕ ಅಧಿಕಾರಿಗಳ ಜೊತೆಗೆ ಸೇರಿ ಕೆಲಸಗಳನ್ನು ಮಾಡಿ, ನರೇಗಾ ಯೋಜನೆಯಡಿ ಕೊಟ್ಟ ಗುರಿಗಳನ್ನು ಸಾಧನೆ ಮಾಡಲೇಬೇಕು. ನರೇಗಾದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಎಲ್ಲರಿಗೂ ಉದ್ಯೋಗ ಕೊಡಬೇಕು. ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯಲ್ಲಿ ತಿಳಿಸಿದರು.

MGNREGA ಗೆ ಸಂಬಂಧಪಟ್ಟ ಅಧಿಕಾರಿಗಳು ಮಾತನಾಡಿ, ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ 105914 ಮಾನವ ದಿನಗಳ ಸೃಜನಿಕೆಯ ಗುರಿ ಹೊಂದಲಾಗಿದ್ದು, ಅದರಲ್ಲಿ 52747 ಮಾನವ ದಿನಗಳು ಸೃಜನಿಕೆಯಾಗಿರುತ್ತವೆ ಎಂದು ತಿಳಿಸಿದಾಗ, ಯಾಕೆ ಮಾನವ ದಿನಗಳ ಸೃಜನಿಕೆ ತೀರಾ ಕಡಿಮೆ ಇದೆ ಎಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಕೇಳಿದಾಗ, Labour payment, Material Payment ಆಗಿರುವದಿಲ್ಲ. ಈವಾಗ payment ಆಗಿರುತ್ತದೆ. ಮುಂದಿನ ಮೇ 2019 ತಿಂಗಳಲ್ಲಿ ಎಲ್ಲಾ payment ಆಗಿ, ಸಮಸ್ಯೆಗಳು ಬಗೆಹರಿಯುತ್ತವೆಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪ್ರಸ್ತುತ ವರ್ಷಕ್ಕೆ ಎಷ್ಟು PD Generate ಆಗಿರುತ್ತದೆ. ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಕೇಳಿದರು. ಸಂಬಂಧಪಟ್ಟ ಅಧಿಕಾರಿಗಳು ಮಾತನಾಡಿ, ಪ್ರಸ್ತುತ ವರ್ಷಕ್ಕೆ ಒಟ್ಟು 2050000 ಮಾನವ ದಿನಗಳ ಗುರಿ ಹೊಂದಲಾಗಿದ್ದು, ಅದರಲ್ಲಿ 2249111 PD Generate ಆಗಿರುತ್ತದೆ. ಈ ವರ್ಷಕ್ಕೆ ನರೇಗಾದಲ್ಲಿ ಒಟ್ಟು 100882 ಕೆಲಸಗಳು ಅನುಮೋದನೆಯಾಗಿದ್ದು, ಅದರಲ್ಲಿ 34096 ಕೆಲಸಗಳು ಕೈಗೆತ್ತಿಕೊಂಡಿದ್ದು, ಇಲ್ಲಿಯವರೆಗೆ 8019 ಕಾಮಗಾರಿಗಳು ಮುಗಿದಿರುತ್ತವೆ ಎಂದು ಸಭೆಯಲ್ಲಿ ತಿಳಿಸಿದರು. 2015-16ನೇ ಸಾಲಿನ ಕಾಮಗಾರಿಗಳು ಹಾಗೂ 2016-17ನೇ ಸಾಲಿನ ಕಾಮಗಾರಿಗಳು ಎಪ್ರಿಲ್ 2019 ರ ಅಂತ್ಯದವರೆಗೆ ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯಲ್ಲಿ MGNREGA ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಯಾವುದೇ ಕೂಲಿಕಾರ್ಮಿಕರು ಗೂಳೆ ಹೋಗದಂತೆ ನೋಡಿಕೊಳ್ಳಬೇಕು. ಅದಲ್ಲದೇ MGNREGA ಯೋಜನೆಯಡಿಯಲ್ಲಿ NRM, Water shed, Agriculture ಕಾಮಗಾರಿಗಳನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳುವದು ಹಾಗೂ ಸಮುದಾಯ ಆಧಾರಿತ ಕಾಮಗಾರಿಯು ಪ್ರತಿ ಗ್ರಾಮ ಪಂಚಾಯತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಅದಲ್ಲದೇ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು Geo tagging, work complation and secure training ಕಡೆ ಅತಿ ಹೆಚ್ಚಿನ ಪ್ರಗತಿ ಸಾಧಿಸಲು ಸಂಬಂಧಿಸಿದ EO ರವರಿಗೆ ಸೂಚಿಸಿದರು.

**(ಕ್ರಮ: ನರೇಗಾ ಜಿಲ್ಲಾ ಪಂಚಾಯತ ಬೀದರ)**

**ವಿಷಯ ಸಂಖ್ಯೆ:7: ತೋಟಗಾರಿಕೆ ಇಲಾಖೆ:**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ತೋಟಗಾರಿಕೆ ಇಲಾಖೆಯವರು ಮಾಹಿತಿ ನೀಡುವಂತೆ ಕೇಳಿದರು. ಅದಕ್ಕೆ ತೋಟಗಾರಿಕೆ ಇಲಾಖಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ತೋಟಗಾರಿಕೆಯು ಒಟ್ಟು 22000 ಹೇಕ್ಟರ್ ಪ್ರದೇಶವಿದ್ದು, 5000 ಹೇಕ್ಟರ್ ಮಾತ್ರ ರಿಪ್ಲೇಸಮೆಂಟ್ ಆಗಿದ್ದು, ರೈತರ ಬೇಡಿಕೆಯಿದ್ದಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದ್ದಕ್ಕೆ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮುಂಬರುವ ದಿನಗಳಲ್ಲಿ ಬೇಡಿಕೆಯಿದ್ದಷ್ಟು ಮಾಡುವುದಲ್ಲದೆ, ಕಳೆದ

ವರ್ಷದಂತೆ, ಪ್ರತಿ ತಾಲೂಕಿಗೆ ಇಂತಿಷ್ಟು ಗುರಿ ಕೊಟ್ಟು, ರೈತರನ್ನು ಗುರುತಿಸಿ, ಪ್ರತಿ ತಾಲೂಕಿನಲ್ಲೂ ಮಾವಿನ ಹಣ್ಣು, ಚೇಕ್ಕು, ಪಪಾಯ, ನಿಂಬೆ ಹಣ್ಣು, ದ್ರಾಕ್ಷಿ ಇತ್ಯಾದಿಗಳ ಹಣ್ಣುಗಳ ಪ್ಲ್ಯಾಂಟಿಂಗ್ ಮಾಡಬೇಕೆಂದು ತಿಳಿಸಿದರು.

(ಕ್ರಮ ತೋಟಗಾರಿಕೆ ಇಲಾಖೆ)

**ವಿಷಯ ಸಂಖ್ಯೆ: 8: ಅರಣ್ಯ ಇಲಾಖೆ:**

ಅರಣ್ಯ ಇಲಾಖಾಧಿಕಾರಿಯವರು ಮಾತನಾಡಿ, ಮಳೆಯ ಪ್ರಮಾಣ ತೀವ್ರ ಕಡಿಮೆಯಾದ ಪ್ರಯುಕ್ತ, 1.22 ಲಕ್ಷ ಗುರಿ ಹೊಂದಿದ್ದು, ಅದರಲ್ಲಿ 45500 ಮಾನವ ದಿನಗಳನ್ನು ಸೃಜಿಸಿ, ಕೇವಲ ಶೇಕಡಾ 50%ರಷ್ಟು ಸಾಧನೆ ಮಾಡಲಾಗಿದೆ ಎಂದು ತಿಳಿಸಿದ್ದಕ್ಕೆ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮುಂಬರುವ ದಿನಗಳಲ್ಲಿ ಇನ್ನು ಹೆಚ್ಚಿನ ಗುರಿಯನ್ನು ಸಾಧನೆ ಮಾಡುವಂತೆ ತಿಳಿಸಿದರು.

(ಕ್ರಮ: ಉಪನಿರ್ದೇಶಕರು, ಅರಣ್ಯ ಇಲಾಖೆ)

**ವಿಷಯ ಸಂಖ್ಯೆ:9: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎನ್.ಆರ್.ಸಿ.ನಲ್ಲಿ 2 ಪ್ರಕರಣಗಳಿದ್ದು, ಅವುಗಳ ಬಗ್ಗೆ ವಿಮರ್ಶೆ ಮಾಡಿ ಕೆಲಸ ಮಾಡುವಂತೆ ತಿಳಿಸಿ, ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿ ಕೇಳಿದರು. ಅದಕ್ಕೆ ಇಲಾಖಾಧಿಕಾರಿಯವರು ಮಾತನಾಡಿ, 112 ಮತ್ತು 47 ಅಂಗನವಾಡಿ ಕಾರ್ಯಕರ್ತರ ಹುದ್ದೆಗಳು ಖಾಲಿ ಇದ್ದು, ಈಗಾಗಲೇ ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಖಾಲಿ ಇರುವ ಹುದ್ದೆಗಳನ್ನು ಚುನಾವಣೆಯ ನಂತರ ಆಯ್ಕೆ ಮಾಡಿ ಭರ್ತಿ ಮಾಡಿಕೊಳ್ಳಲಾಗುವದೆಂದು ತಿಳಿಸಿದರು. ಅದಲ್ಲದೆ ಜಿಲ್ಲೆಯಲ್ಲಿ ಒಟ್ಟು 1890 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಅದರಲ್ಲಿ 124 ಅಂಗನವಾಡಿ ಕೇಂದ್ರಗಳ ಕಟ್ಟಡಗಳಿವೆ, ಇನ್ನು 168 ಅಂಗನವಾಡಿ ಕೆಂದ್ರ ಕಟ್ಟಡಗಳನ್ನು ಹೆಚ್.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ ಮತ್ತು ನರೇಗಾ ಯೋಜನೆಯಡಿಯಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ (5ರಿಂದ 6) ಇದ್ದರು 40 ಮಕ್ಕಳ ಹಾಜರಾತಿ ಮಾಡುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಬಂದಿರುವ ಮಕ್ಕಳ ಹಾಜರಾತಿ ಸರಿಯಾಗಿ ತೆಗೆದುಕೊಂಡು ಬಿಲ್ಲು ಮಾಡಬೇಕೆಂದು ಅಂಗನವಾಡಿ ಕಾರ್ಯಕರ್ತರಿಗೆ ಸೂಚಿಸುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯವರಿಗೆ ತಿಳಿಸಿದರು.

(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

**ವಿಷಯ ಸಂಖ್ಯೆ:10: ಶಿಕ್ಷಣ ಇಲಾಖೆ:**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಶಿಕ್ಷಣದ ಬಗ್ಗೆ ಮತ್ತು ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಪಠ್ಯಪುಸ್ತಕಗಳ ವಿತರಣೆ ಬಗ್ಗೆ ಕೇಳಿದರು. ಅದಕ್ಕೆ ಶಿಕ್ಷಣಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ.ಯ ಪರೀಕ್ಷೆಯು 92 ಕೇಂದ್ರಗಳಲ್ಲಿ ನಡೆಯುತ್ತಿದ್ದು, ಈಗಾಗಲೇ

4 ವಿಷಯಗಳ ಪತ್ರಿಕೆಗಳು ಮುಗಿದಿದ್ದು, ಇನ್ನು 2 ಪತ್ರಿಕೆಗಳು ಬಾಕಿ ಇದ್ದು, 04-04-2019ರಂದು ಮುಗಿಯುತ್ತವೆ. ಹಾಗೂ ವಿದ್ಯಾರ್ಥಿಗಳ ಸಮವಸ್ತ್ರ ಮತ್ತು ಪಠ್ಯಪುಸ್ತಕಗಳನ್ನು ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗಿದ್ದು, ಬೇಸಿಗೆಯಲ್ಲಿ (Summer) ವಿತರಣೆ ಮಾಡಲಾಗುವುದು. ಕ್ಷೀರ ಭಾಗ್ಯ ಯೋಜನೆಯು ಸರಿಯಾಗಿ ನಡೆಯುತ್ತಿದೆ ಎಂದು ತಿಳಿಸಿ, ಬಸವಕಲ್ಯಾಣ, ಭಾಲ್ಕಿ ಮತ್ತು ಬೀದರ ತಾಲೂಕುಗಳಲ್ಲಿ ಕಟ್ಟಡದ ಸಲುವಾಗಿ ಸ್ಥಳ ಲಭ್ಯವಿಲ್ಲದ ಪ್ರಯುಕ್ತ ಸರ್ವಶಿಕ್ಷಣ ಅಭಿಯಾನದಲ್ಲಿನ (SSA) ಕಟ್ಟಡಗಳು ನಿರ್ಮಾಣವಾಗಿಲ್ಲ ಎಂದು ತಿಳಿಸಿದ್ದಕ್ಕೆ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಅಲ್ಲಿನ ಮುಖ್ಯೋಪಾಧ್ಯಯರ ಜೊತೆ ಮಾತನಾಡಿ, ಸ್ಥಳ ಲಭ್ಯತೆ ಮಾಡಿಕೊಡುವಂತೆ ಕೇಳಿ ಜೂನ ಮಾಹೆಯ ಒಳಗಾಗಿ ಕಟ್ಟಡ ಕಾಮಗಾರಿ ಪ್ರಾರಂಭ ಮಾಡುವಂತೆ ತಿಳಿಸಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು SDMC ಸದಸ್ಯರುಗಳಿಗೆ ತರಬೇತಿಯನ್ನು ನೀಡಿ, ಅವರನ್ನು efficient ಯಾಗಿ ಕೆಲಸ ನಿರ್ವಹಿಸುವಂತೆ ಮಾಡಿಕೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಯವರಿಗೆ ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಶಿಕ್ಷಣ ಇಲಾಖೆ)**

**ವಿಷಯ ಸಂಖ್ಯೆ: 11: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾಧಿಕಾರಿಯವರು ಮಾತನಾಡಿ, 14 ವಿದ್ಯಾರ್ಥಿಗಳ ವಸತಿ ನಿಲಯಗಳ ಕಟ್ಟಡ ಕಾಮಗಾರಿ ಕೆಲಸ ಲೋಕೋಪಯೋಗಿ (PWD) ಮತ್ತು KRIDL ಇಲಾಖೆಯವರು ಅನುಷ್ಠಾನ ಮಾಡುತ್ತಿದ್ದು, ಅದರಲ್ಲಿ 6 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜಿಲ್ಲಾಧಿಕಾರಿಗಳ ಅಧೀನದಲ್ಲಿ ಅನುದಾನ ಬಿಡುಗಡೆಯಾಗುತ್ತದೆ. ಹೆಚ್.ಕೆ.ಆರ್.ಡಿ.ಬಿ., ಯೋಜನೆಯಡಿಯಲ್ಲಿ, ಎರಡು ಕಟ್ಟಡ ಕಾಮಗಾರಿಗಳಿಗೆ ಅನುಮೋದನೆಯಾಗಿದ್ದು, ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರು ಅನುಷ್ಠಾನ ಮಾಡುತ್ತಿದ್ದು, ಸದ್ಯ ಕಾಮಗಾರಿ ಕೆಲಸ ಮುಗಿಯುವ ಹಂತದಲ್ಲಿದ್ದು, ಜುಲೈ-ಆಗಸ್ಟ ಮಾಹೆಯೊಳಗೆ ಪೂರ್ಣ ಗೊಳಿಸಲಾಗುವುದೆಂದು ತಿಳಿಸಿದರು. ಅದಲ್ಲದೇ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ವಿದ್ಯಾಸಿರಿ ಯೋಜನೆ ಬಗ್ಗೆ ಕೇಳಿದರು. ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಮಾತನಾಡಿ, 2000 ವಿದ್ಯಾರ್ಥಿಗಳಿದ್ದು, ಅವರೆಲ್ಲರಿಗೂ ಹಣವನ್ನು ಸಂದಾಯ ಮಾಡಲಾಗಿದೆ ಎಂದು ತಿಳಿಸಿದರು. ಅದಲ್ಲದೇ BCM Hostel ನಲ್ಲಿ 35 ನಿಲಯ ಪಾಲಕರ ಹುದ್ದೆಗಳು ಖಾಲಿ ಇರುವದರಿಂದ ಒಬ್ಬಬ್ಬೊರಿಗೆ ಎರಡು Hostel ಗಳ ಪ್ರಭಾರ ವಹಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು ಹಾಗೂ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ Watch man ಕಡ್ಡಾಯವಾಗಿ ಇರಿಸಲಾಗಿದೆ ಎಂದು ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆ & ಕೆ.ಆರ್.ಐ.ಡಿ.ಎಲ್)**

**ವಿಷಯ ಸಂಖ್ಯೆ:12: ಡಿ. ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮ:-**

ಇಲಾಖಾಧಿಕಾರಿಯವರು ಮಾತನಾಡಿ, 2018-19ನೇ ಸಾಲಿನ ಡಿ. ದೇವರಾಜ ಅರಸು ನಿಗಮದ ವಿವಿಧ ಸಾಲದ ಯೋಜನೆಗಳಲ್ಲಿ, ಭೌತಿಕವಾಗಿ 958 ಫಲಾನುಭವಿಗಳಿಗೆ ರೂ. 747.48 ಲಕ್ಷಗಳ ಆರ್ಥಿಕ ಗುರಿ ಹೊಂದಿದ್ದು, ರೂ. 40.00 ಸಾವಿರ ಸಾಲಕ್ಕೆ, ರೂ. 10.00 ಸಾವಿರಗಳ ಸಹಾಯಧನ (Subsidy) ಆಧಾರದ ಮೇಲೆ ಭೌತಿಕವಾಗಿ 1114 ಫಲಾನುಭವಿಗಳಿಗೆ ರೂ. 785.23 ಲಕ್ಷಗಳ ಸಾಲ ಕೊಟ್ಟು ಆರ್ಥಿಕವಾಗಿ ಇಲ್ಲಿಯವರೆಗೆ ಸಾಧನೆ ಮಾಡಲಾಗಿದ್ದು, ಶೇಕಡಾ 2%ರಷ್ಟು ಮಾತ್ರ ಮರುಪಡೆಯುವಿಕೆ (Recovery) ಆಗಿದೆ ಎಂದು ತಿಳಿಸಿದರು.

**(ಕ್ರಮ: ಡಿ. ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮ (ನಿ) ಬಿದರ)**

**ವಿಷಯ:13: ಸಮಾಜ ಕಲ್ಯಾಣ ಇಲಾಖೆ:-**

ಇಲಾಖಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 59 ವಿದ್ಯಾರ್ಥಿನಿಲಯಗಳಿದ್ದು, ಅದರಲ್ಲಿ 15 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿರುತ್ತವೆ. ಸದ್ಯದಲ್ಲಿ 5 ವಿದ್ಯಾರ್ಥಿ ನಿಯಲಗಳ ಕಟ್ಟಡ ಕಾಮಗಾರಿಯನ್ನು **Crise & PWD** ರವರಿಗೆ ವಹಿಸಲಾಗಿದ್ದು, 5 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಪ್ರಗತಿ ಹಂತದಲ್ಲಿದೆ ಎಂದು ಸಭೆಯಲ್ಲಿ ತಿಳಿಸಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ತಮ್ಮ ಇಲಾಖೆಯಲ್ಲಿ ಶಿಕ್ಷಕರ ಹುದ್ದೆಗಳು ಭರ್ತಿ ಇವೆಯಾ ಎಂದು ಕೇಳಿದರು. ಅದಕ್ಕೆ ಶಿಕ್ಷಕರ ಹುದ್ದೆಗಳು ಭರ್ತಿಯಾಗಿರುತ್ತವೆಂದು ತಿಳಿಸಿ, ಇನ್ನು 4 ಮುರಾರ್ಜಿ ದೇಸಾಯಿ ವಸತಿ ನಿಲಯಗಳಲ್ಲಿ ಒಂದು ವಸತಿ ನಿಲಯದ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ. ಒಂದು ವಸತಿ ನಿಲಯದ ಕಟ್ಟಡ ಕಾಮಗಾರಿ ಬಾಕಿ ಇದೆ. ಇನ್ನು ಎರಡು ವಸತಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ ಎಂದು ಸಭೆಯಲ್ಲಿ ತಿಳಿಸಿದರು. ಅದಲ್ಲದೇ 19 ಮೇಲ್ವಿಚಾರಕರ ಹುದ್ದೆಗಳು ಖಾಲಿ ಇವೆಯೆಂದು ಸಭೆಯ ಗಮನಕ್ಕೆ ತಂದರು.

**(ಕ್ರಮ:- ಸಮಾಜ ಕಲ್ಯಾಣ ಇಲಾಖೆ ಬೀದರ)**

**ವಿಷಯ:14: ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ:-**

ಸದರಿ ಆರ್ಥಿಕ ವರ್ಷದಲ್ಲಿ 2158 ಫಲಾನುಭವಿಗಳನ್ನು ಗುರುತಿಸಿ, ರೂ. 11 ಕೋಟಿ 94.00 ಲಕ್ಷಗಳನ್ನು ಖರ್ಚು ಮಾಡಿ ಶೇಕಡಾ 53% ಸಾಧನೆಯಾಗಿದೆ ಎಂದು ಇಲಾಖಾಧಿಕಾರಿಗಳು ತಿಳಿಸಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸದರಿ ಪ್ರಗತಿಯ ಕುರಿತು ಅಸಮಧಾನ ವ್ಯಕ್ತಪಡಿಸಿದರು.

**(ಕ್ರಮ: ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ)**

**ವಿಷಯ:15: ವಕ್ಫ್ ಮಂಡಳಿ:-**

ಇಲಾಖಾಧಿಕಾರಿಗಳು ಮಾತನಾಡಿ, ವಕ್ಫ್ ಖಾತೆಗಳ update ಆಗುತ್ತಿಲ್ಲಾ ಎಂದು ತಿಳಿಸಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಈ ಕುರಿತು ಪರಿಶೀಲಿಸಿ ಕ್ರಮ ಜರುಗಿಸಲು ಸಂಬಂಧಿಸಿದ ಸಹಾಯಕ ಆಯುಕ್ತರುಗಳಿಗೆ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಸಹಾಯಕ ಆಯುಕ್ತರು ಹಾಗೂ ಐದು ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು)**

**(ಎಲ್.ಕೆ.ಅತೀಕ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಎಎಲ್(1)ಸಿಆರ್:38/2018-19,**

**ದಿನಾಂಕ:29-03-2019 ರಂದು ಶ್ರೀ ರಾಜೇಂದರ್ ಕುಮಾರ್ ಕಠಾರಿಯಾ, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಬರಪರಿಸ್ಥಿತಿ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಅಧ್ಯಕ್ಷತೆ:-**

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ ಹಾಗೂ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ಬೆಂಗಳೂರು

ಉಪಸ್ಥಿತಿ:-

ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ
ಅಪರ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಹಾಜರಾತಿಯನ್ನು ವಹಿಯಲ್ಲಿ ಪಡೆದುಕೊಳ್ಳಲಾಗಿದೆ.

*****

ಮಾನ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಸಭೆಗೆ ಸ್ವಾಗತಿಸುತ್ತಾ, ಸದರಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರನ್ನು ಕೋರಿದರು.

ಮೊದಲಿಗೆ ಜಿಲ್ಲೆಯಲ್ಲಿ ಮಳೆ, ಬೆಳೆ, ಬಿತ್ತನೆ ಮಳೆಹಾನಿಯ ಬಗ್ಗೆ ವಿವರಿಸಲು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:-**

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ: ಜಿಲ್ಲೆಯಲ್ಲಿ ಒಟ್ಟು 52 ಪಂಚಾಯಿತಿಗಳ ವ್ಯಾಪ್ತಿಯಲ್ಲಿನ 94 ಗ್ರಾಮಗಳಲ್ಲಿ ಮುಂಬರುವ 15 ರಿಂದ 20 ದಿನಗಳಲ್ಲಿ ಸಮಸ್ಯೆ ಉದ್ಭವವಾಗಬಹುದೆಂದು ಅಂದಾಜಿಸಲಾಗಿದ್ದು, ಅಂತರ್ಜಲ ಮಟ್ಟ ಕುಸಿತ ಉಂಟಾಗುವ ಸಂಭವವಿರುವುದರಿಂದ, ಖಾಸಗಿ ಬೋರ್‌ವೆಲ್ ಗುರುತಿಸಿಕೊಂಡು ಟ್ಯಾಂಕರ್ ಮೂಲಕ ನೀರು ಒದಗಿಸುವ ಅವಶ್ಯಕತೆ ಉಂಟಾದಲ್ಲಿ ಖಾಸಗಿ ಬೋರ್‌ವೆಲ್ ಗಳನ್ನು ಬಾಡಿಗೆಗೆ ಪಡೆದು ಕ್ರಮವಹಿಸಲಾಗುವುದು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಪ್ರತಿದಿನ ಪರಿಶೀಲನೆ ನಡೆಸುತ್ತಿದ್ದು, ಜಿಲ್ಲೆಯಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆಗಳು ಕಂಡುಬಂದಿರುವುದಿಲ್ಲ. ಕೆಲವು ಗ್ರಾಮಗಳಲ್ಲಿ ಹೊಸ ಬಡಾವಣೆಗಳು ಆಗಿದ್ದು, ಸದರಿ ಬಡಾವಣೆಯಲ್ಲಿ ಹೊಸದಾಗಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕಾಗಿರುತ್ತದೆ, ಎಲ್ಲಾದರೂ ಸಮಸ್ಯೆಗಳು ಕಂಡು ಬಂದಲ್ಲಿ ತಕ್ಷಣವೆ ಪರಿಹರಿಸಲು ಕ್ರಮವಹಿಸಲಾಗುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ರವರು ಮಾಹಿತಿ ನೀಡಿದರು.

**ಈ ಸಂಬಂಧ ಮಾತನಾಡಿ, ಕಳೆದ ಸಾಲಿನಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ, ಕೊರೆದಿರುವ ಬೋರ್‌ವೆಲ್‌ಗಳ ಪೈಕಿ ಎಷ್ಟು ಬೋರ್‌ವೆಲ್‌ಗಳಲ್ಲಿ ನೀರು ಕಡಿಮೆಯಾಗಿದೆ, ಹೊಸದಾಗಿ ಕೊರೆದ ಕೊಳವೆಬಾವಿಗಳೆಷ್ಟು, ಅದರಲ್ಲಿ ವಿಫಲ ಕೊಳವೆಬಾವಿಗಳೆಷ್ಟು ಎಂಬ ಬಗ್ಗೆ ಮಾಹಿತಿಯನ್ನು ಸಿದ್ದಪಡಿಸಿ ನೀಡಲು ಸೂಚಿಸಲಾಯಿತು. ಹಾಗೂ ಜಿಲ್ಲೆಯ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ**

ಸಮಸ್ಯೆ ಉಂಟಾಗದಂತೆ ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧ ಪಟ್ಟ ತಾಲ್ಲೂಕಿನ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಚಾಮರಾಜನಗರ, ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳ, ತಾಲ್ಲೂಕು ಪಂಚಾಯತ್, ಎಲ್ಲಾ ತಹಶೀಲ್ದಾರ್‌ರು)

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-

ನರೇಗಾ ಯೋಜನೆಯಡಿ ಜಿಲ್ಲೆಗೆ 23.53 ಲಕ್ಷ ಮಾನವ ದಿನಗಳ ಗುರಿ ನಿಗಧಿಗನುಗುಣವಾಗಿ 20.97 ಲಕ್ಷ ಮಾನವ ದಿನಗಳ ಸೃಜನೆಯೊಂದಿಗೆ ಶೇ.89.04 ರಷ್ಟು ಪ್ರಗತಿ ಸಾಧಿಸಲಾಗಿದೆ. ಪ್ರಸ್ತುತ ಬರಪರಿಸ್ಥಿತಿ ಯನ್ನು ಸಮರ್ಪಕವಾಗಿ ನಿರ್ವಹಿಸುವ ಕುರಿತು ಗ್ರಾಮೀಣ ಪ್ರದೇಶಗಳಲ್ಲಿ ಜನರು ವಲಸೆ ಹೋಗದಂತೆ ಸ್ಥಳೀಯವಾಗಿ ಉದ್ಯೋಗ ನೀಡುವ ನಿಟ್ಟಿನಲ್ಲಿ ಸಮುದಾಯ ಆಧಾರಿತ ಕಾಮಗಾರಿಗಳಾದ ಕೆರೆ, ಕಟ್ಟೆ, ಕಲ್ಯಾಣಿ, ಕಾಲುವೆ ಮುಂತಾದ ಕೂಲಿ ಆಧಾರಿತ ಕಾಮಗಾರಿಗಳನ್ನು ಮತ್ತು ಹಸಿರೀಕರಣಕ್ಕೆ ಆಧ್ಯತೆ ನೀಡಿ ಹೆಚ್ಚು ಪ್ರಗತಿ ಸಾಧಿಸುವಂತೆ ತಿಳಿಸಿದರು ಮತ್ತು 2019-20ನೇ ಸಾಲಿಗೆ ಜಿಲ್ಲೆಗೆ 25.00 ಲಕ್ಷ ಮಾನವ ದಿನಗಳ ಗುರಿ ನಿಗಧಿಪಡಿಸಿದ್ದು, ಈ ಗುರಿಗಿಂತಲೂ ಅಧಿಕ ಪ್ರಗತಿ ಸಾಧಿಸುವಂತೆ ತಿಳಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು - ಜಿಲ್ಲೆಯಾಧ್ಯಂತ ನರೇಗಾ ಯೋಜನೆಯಡಿಯಲ್ಲಿ ಹೆಚ್ಚು ಕೂಲಿ ಆಧಾರಿತ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಕ್ರಮವಹಿಸಲಾಗಿದೆ. 2018-19ನೇ ಸಾಲಿನಲ್ಲಿ 23.53 ಲಕ್ಷ ಮಾನವ ದಿನಗಳ ಗುರಿಗನುಗುಣವಾಗಿ 20.95 ಲಕ್ಷ ಮಾನವ ದಿನಗಳ ಪ್ರಗತಿ ಸಾಧಿಸಲಾಗಿದ್ದು, 69.22 ಕೋಟಿ ರೂ.ವೆಚ್ಚ ಭರಿಸಲಾಗಿದೆ. ರೂ.7.04 ಕೋಟಿ ಕೂಲಿ ಪಾವತಿ ಬಾಕಿ ಇದ್ದು ರೂ.16.50 ಕೋಟಿ ಸಾಮಾಗ್ರಿ ಪಾವತಿಗೆ ಬಾಕಿ ಇರುವುದಾಗಿ ಅಧ್ಯಕ್ಷರ ಗಮನಕ್ಕೆ ತಂದರು.

ಅನುಷ್ಠಾನ ಇಲಾಖೆಗಳಿಗೆ 6.25 ಲಕ್ಷ ಮಾನವ ದಿನಗಳ ಗುರಿ ನೀಡಿದ್ದು, ಇದಕ್ಕನುಗುಣವಾಗಿ 2.08 ಲಕ್ಷ ಮಾನವ ದಿನಗಳ ಗುರಿಯೊಂದಿಗೆ ಕೇವಲ ಶೇ.33.36 ರಷ್ಟು ಮಾತ್ರ ಪ್ರಗತಿಯಾಗಿರುವುದಾಗಿ ಆಕ್ಷೇಪಿಸಿ, ಇದಕ್ಕೆ ಕಾರಣ ನೀಡುವಂತೆ ಸೂಚಿಸಲಾಯಿತು ಹಾಗೂ ಮುಂಬರುವ ದಿನಗಳಲ್ಲಿ ಸಮುದಾಯ ಕೆಲಸಗಳನ್ನು ಪ್ರತಿ ಗ್ರಾಮಗಳಲ್ಲಿ ಕೈಗೊಳ್ಳಲು ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಮಾಹಿತಿ ನೀಡಲು ತಿಳಿಸಲಾಯಿತು.

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು, ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುತ್ತಿದ್ದು, ನರೇಗಾ ಯೋಜನೆಯಡಿಯಲ್ಲಿ ಕೂಲಿಕಾರರ ಪಾಲ್ಗೊಳ್ಳುವಿಕೆ ಕಡಿಮೆ ಇರುವುದರಿಂದ ಹೆಚ್ಚು ವ್ಯಾಪಕ ಪ್ರಚಾರ ಹಾಗೂ ರೈತರಿಗೆ ವೈಯಕ್ತಿಕ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ಅರಿವು ಮೂಡಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 48,788 ಮಾನವ ದಿನಗಳ ಸೃಜನೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಕ್ರಮ ವಹಿಸಿ ನಿರೀಕ್ಷಿತ ಗುರಿ ಸಾಧಿಸುವುದಾಗಿ ತಿಳಿಸಿದರು.

ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಅರಣ್ಯ ಇಲಾಖೆಗಳ ಪಾತ್ರ ಬಹುಮುಖ್ಯವಾಗಿದ್ದು, ಪ್ರಸ್ತುತ ಬರ ಪರಿಸ್ಥಿತಿ ನಿರ್ವಹಣೆ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲವಾಗುವ ವೈಯಕ್ತಿಕ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸುವಂತೆ ಹಾಗೂ ಸಸಿ ನೆಡುವ ಕಾಮಗಾರಿಗಳನ್ನು ಸಹ ಆಧ್ಯತೆ ಮೇರೆ ಕೈಗೊಂಡು ಪ್ರಗತಿ ಸಾಧಿಸಲು ತಿಳಿಸಲಾಯಿತು

ಹಾಲಿ ಮಳೆ ಬಾರದೇ ಇರುವುದರಿಂದ ನರೇಗಾ ಯೋಜನೆಯಡಿ ಬರ ಪೀಡಿತ ಪ್ರದೇಶ ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಕುಟುಂಬಗಳಿಗೆ 150 ದಿನಗಳ ಉದ್ಯೋಗ ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಲು ಹಾಗೂ ಪ್ರತಿ ಗ್ರಾಮದಲ್ಲಿಯೂ ಕನಿಷ್ಠ 2 ಸಮುದಾಯ ಕಾಮಗಾರಿಗಳು ಚಾಲ್ತಿಯಲ್ಲಿರುವಂತೆ ಕ್ರಮ ಕೈಗೊಳ್ಳುವುದು. ಈ ಕುರಿತು ನರೇಗಾ ಅನುಷ್ಠಾನ ಇಲಾಖೆಗಳು ಸಹ ಅಗತ್ಯ ಕ್ರಮ ಕೈಗೊಂಡು ನಿಗಧಿತ ಗುರಿಗನುಗುಣವಾಗಿ ಪ್ರಗತಿ ಸಾಧಿಸುವಂತೆ ಹಾಗೂ ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ 2019-20ನೇ ಸಾಲಿನ ಗುರಿ ನಿಗಧಿಗೊಳಿಸುವಂತೆ ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಸೂಚನೆ ಹಾಗೂ ನಿರ್ದೇಶನ ನೀಡುವಂತೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಬರಪರಿಸ್ಥಿತಿ ತಲೆದೋರುವ ಸಂಭವವಿರುವುದರಿಂದ, ಹಾಗೂ ಚುನಾವಣೆ ಸಂದರ್ಭವಾಗಿರುವುದರಿಂದ ಯಾವುದೇ ಗ್ರಾಮಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರು, ಮೇವು, ನರೇಗಾ ಯೋಜನೆಯಡಿ ಜನರಿಗೆ ಉದ್ಯೋಗ ನೀಡುವ ವಿಚಾರವಾಗಿ ತಾಲ್ಲೂಕು ಮಟ್ಟದಲ್ಲಿ ಪ್ರತಿವಾರ ಟಾಸ್ಕ್‌ಫೋರ್ಸ್ ಸಮಿತಿ ಸಭೆಯನ್ನು ನಡೆಸಲು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಲು ಹಾಗೂ ಜಿಲ್ಲಾ ಮಟ್ಟದಲ್ಲಿಯೂ ಸಹ ಟಾಸ್ಕ್‌ಫೋರ್ಸ್ ಸಮಿತಿ ಸಭೆಗಳನ್ನು

ನಿ...ತಕಾಲಿಕವಾಗಿ ನಡೆಸಲು ತಿಳಿಸಲಾಯಿತು. ಬರ ನಿರ್ವಹಣೆ ಕುರಿತು ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನವನ್ನು ಹರಿಸಿ ಯಾವುದೇ ಲೋಪದೋಷಗಳು ಉಂಟಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**ಪಶುಪಾಲನಾ ಇಲಾಖೆ:**

148990 ಮೆಟ್ರಿಕ್ ಟನ್ ಮೇವು ಪ್ರಸ್ತುತ ಲಭ್ಯವಿದ್ದು, ಇದು 15 ವಾರಗಳವರೆಗೆ ಸಾಕಾಗುತ್ತದೆ. ಚಾಮರಾಜನಗರ, ಹನೂರು, ಗುಂಡ್ಲುಪೇಟೆ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿರುವುದರಿಂದ ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ಹನೂರು ಕೇಂದ್ರ ಸ್ಥಾನದಲ್ಲಿ ತಲಾ 100 ಟನ್ ಮೇವನ್ನು ಶೇಖರಿಸಿಟ್ಟುಕೊಳ್ಳಲು ಈಗಾಗಲೇ ಟೆಂಡರ್ ಕರೆಯಲಾಗಿರುತ್ತದೆ. ರೈತರೂ ಸಹ ಮೇವನ್ನು ಶೇಖರಿಸಿ ಕೊಂಡಿರುತ್ತಾರೆ. ಪ್ರಸ್ತುತ 2018-19ನೇ ಸಾಲಿನಲ್ಲಿ 30,000 ಮೇವಿನ ಬೀಜದ ಕಿರುಪೊಟ್ಟಣ ಸರಬರಾಜು ಮಾಡಿಕೊಡುವಂತೆ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ರವರಿಗೆ ಬೇಡಿಕೆಯನ್ನು ಸಲ್ಲಿಸಲಾಗಿದ್ದು, ಸೆಪ್ಟೆಂಬರ್-2018 ರ ಮಾಹೆಯಲ್ಲಿ ಜಿಲ್ಲೆಗೆ 10694 ಮೇ.ಬೀ.ಕಿ.ಪೊ. ಸರಬರಾಜಾಗಿದ್ದು, ತಾಲ್ಲೂಕುವಾರು ನಿಯಮಾನುಸಾರ ರೈತರಿಗೆ ವಿತರಿಸಲಾಗಿರುತ್ತದೆ. ಇದರಿಂದ 67932 ಮೆ.ಟನ್ ಮೇವನ್ನು ಜಿಲ್ಲೆಯ ಜಾನುವಾರುಗಳಿಗೆ ಉಪಯೋಗಿಸಿಕೊಳ್ಳಲಾಗಿರುತ್ತದೆ. ಪ್ರಸಕ್ತ ಮಾಹೆಯಲ್ಲಿ 9094 ಮೇ.ಬೀ.ಕಿರುಪೊಟ್ಟಣಗಳು ಸರಬರಾಜಾಗಿದ್ದು, ನೀರಾವರಿ ಸೌಲಭ್ಯ ಹೊಂದಿರುವ ರೈತರಿಗೆ ನಿಯಮಾನುಸಾರ ವಿತರಿಸಲು ಕ್ರಮವಹಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

**ಮೇವು ಲಭ್ಯತೆ ಬಗ್ಗೆ ಮಾಹಿತಿ ಕಲೆಹಾಕುವ ಬಗ್ಗೆ ಹಾಗೂ ಲಭ್ಯವಿರುವ ಮೇವು ಮುಂದಿನ ಎಷ್ಟು ದಿನಗಳಿಗೆ ಸಾಕಾಗಬಹುದು ಎಂಬುದನ್ನು ಅಂದಾಜಿಸಲು ಇರುವ ಮಾನದಂಡಗಳ ಬಗ್ಗೆ ವಿವರಿಸಲು ಸೂಚಿಸಲಾಯಿತು.**

ಉಪ ನಿರ್ದೇಶಕರು ಪಶುಪಾಲನಾ ಇಲಾಖೆ ರವರು ಮಾತನಾಡಿ, ಜಿಲ್ಲೆಯಲ್ಲಿ 2012 ನೇ ಜನಗಣತಿ ಪ್ರಕಾರ 2,84,495 ಜಾನುವಾರುಗಳಿದ್ದು, ಒಂದು ಜಾನುವಾರಿಗೆ 5 ಕೆ.ಜಿ ಒಣ ಹುಲ್ಲಿನಂತೆ (ಹಸಿರು ಮೇವು 10 ರಿಂದ 15 ಕೆ.ಜಿ ) ದಿನಕ್ಕೆ 1423 ಟನ್ ಮೇವನ್ನು ಅಂದಾಜಿಸಲಾಗಿದ್ದು, ಲಭ್ಯವಿರುವ 148990 ಟನ್ ಮೇವು ಮುಂದಿನ 15 ದಿನಗಳವರೆಗೆ ಸಾಕಾಗುವುದಾಗಿ ಅಂದಾಜಿಸಲಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

**ಈ ಸಂಬಂಧ ಮಾತನಾಡಿ, ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತೆ ಕ್ರಮವಹಿಸಲು ಸೂಚಿಸಲಾಯಿತು.**

**(ಕ್ರಮ: ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಚಾಮರಾಜನಗರ)**

**ಕೃಷಿ ಇಲಾಖೆ:-**

ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, 2019ನೇ ಸಾಲಿನಲ್ಲಿ ಏಪ್ರಿಲ್, ಮೇ ಮಾಹೆಯಲ್ಲಿ ಪೂರ್ವ ಮುಂಗಾರು ಪ್ರಾರಂಭವಾಗಲಿದ್ದು, ಏಪ್ರಿಲ್ ಮಾಹೆಯಲ್ಲಿ 67.4 ಮಿ.ಮೀ ಹಾಗೂ ಮೇ ಮಾಹೆಯಲ್ಲಿ -142.1 ವಾಡಿಕೆ ಮಳೆಯಿದ್ದು ಮಳೆಯ ನಿರೀಕ್ಷೆಯಲ್ಲಿರುವುದಾಗಿ ಹಾಗೂ ಮಾರ್ಚ್ 5 ಮತ್ತು 6 ರಂದು ಬಿದ್ದ ಮಳೆಯಿಂದಾಗಿ ಗುಂಡ್ಲುಪೇಟೆ ತಾಲ್ಲೂಕು ಭಾಗದಲ್ಲಿ ರೈತರು ಭೂಮಿಯನ್ನು ಹದ ಮಾಡಿಕೊಂಡು ಬಿತ್ತನೆಗೆ ಸಿದ್ದತೆಯನ್ನು ಮಾಡಿಕೊಂಡಿರುತ್ತಾರೆಂದು ಸಭೆಗೆ ಮಾಹಿತಿಯನ್ನು ನೀಡಿದರು.

**ರಸಗೊಬ್ಬರ:** 2019-20 ನ ಸಾಲಿಗೆ 12,540 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ಇದ್ದು, ಕೇಂದ್ರ ಕಛೇರಿಯಿಂದ ಸರಬರಾಜು ಆಗಬೇಕಿರುತ್ತದೆ. ಬಿತ್ತನೆ ಬೀಜ ರೈತರಿಗೆ ಸರಬರಾಜು ಮಡುವ ಸಂಬಂಧ ಮುಖ್ಯ ಚುನವಾಣಾಧಿಕಾರಿಗಳಿಗೆ ಪತ್ರ ಬರೆಯಲಾಗಿರುತ್ತದೆ. 4259 ಮೆಟ್ರಿಕ್ ಟನ್ ರಸಗೊಬ್ಬರ ಹಾಲಿ ದಾಸ್ತಾನು ಇರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ರಸಗೊಬ್ಬರದ ಸಮಸ್ಯೆಯಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಈ ಸಂಬಂಧ ಮಾತನಾಡಿ ಎಲ್ಲ ಕಡೆಗಳಲ್ಲಿ ಸಬ್ಸಿಡಿ ಮೂಲಕ ಬಿತ್ತನೆ ಬೀಜಗಳನ್ನು ರೈತರಿಗೆ ಒದಗಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗದಿದ್ದರೂ, ಹೆಚ್ಚಿನ ಸಂಖ್ಯೆಯಲ್ಲಿ ಬಿತ್ತನೆ ಬೀಜ ಸರಬರಾಜಾಗಿದ್ದು, ಬಿತ್ತನೆಯಾಗಿರುವುದು ಸಹ ಬೇರೆ ಬಿತ್ತನೆಬೀಜ ಗಳಾಗಿರುವುದರ ಬಗ್ಗೆ ಪರಿಶೀಲಿಸಲು ಸೂಚಿಸಲಾಯಿತು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಜಿಲ್ಲೆ)

**ಬೆಳೆಹಾನಿ:** 2018–19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆಯ ಅಭಾವದಿಂದ ಬೆಳೆ ಹಾನಿಯಾಗಿರುವ ಬಗ್ಗೆ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆ ಜಂಟಿ ಸರ್ವೆ ನಡೆಸಲಾಗಿರುತ್ತದೆ. ಕೊಳ್ಳೇಗಾಲ ತಾಲ್ಲೂಕು ವ್ಯಾಪ್ತಿಯಲ್ಲಿ ತಡವಾಗಿ ಬಿತ್ತನೆ ಕಾರ್ಯ ನಡೆಯುವುದರಿಂದ ಜಂಟಿ ಸರ್ವೆ ಮಾಡುವ ಸಂದರ್ಭದಲ್ಲಿ ಬಿತ್ತನೆಯಾಗಿಲ್ಲದೇ ಇದ್ದುದರಿಂದ ಯಾವುದೇ ಹಾನಿಯಿಲ್ಲವೆಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಯಿತು. ಅದೇ ರೀತಿ ಯಳಂದೂರು ತಾಲ್ಲೂಕು ವ್ಯಾಪ್ತಿಯಲ್ಲಿಯೂ ಯಾವುದೇ ಹಾನಿಯಾಗಿರುವುದಿಲ್ಲ ವೆಂದು ಜಂಟಿ ಸರ್ವೆ ನಡೆಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಹಿಂಗಾರು ಹಂಗಾಮಿನಲ್ಲಿ ಮಳೆಯ ಅಭಾವ ಉಂಟಾಗಿದ್ದು ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲ್ಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ಕೊಳ್ಳೇಗಾಲ ಹಾಗೂ ಚಾಮರಾಜನಗರ ತಾಲ್ಲೂಕು ವ್ಯಾಪ್ತಿಯಲ್ಲಿ 20122 ಹೆಕ್ಟೇರ್ (ಹುರುಳಿ, ರಾಗಿ) ಪ್ರದೇಶದಲ್ಲಿ ಬೆಳೆ ಹಾನಿಯಾಗಿರುತ್ತದೆ. ಆದರೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಮೇಮೋರ್ಯಾಂಡಮ್‌ನಲ್ಲಿ ಕೊಳ್ಳೇಗಾಲ ಮತ್ತು ಹನೂರು ತಾಲ್ಲೂಕನ್ನು ಹೊರತುಪಡಿಸಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸಣ್ಣ ಮತ್ತು ಅತೀ ಸಣ್ಣ ರೈತರ 11605 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದಂತೆ 789.14 ಲಕ್ಷಗಳ ಪರಿಹಾರಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಸಲ್ಲಿಸಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

ಅಂತಿಮವಾಗಿ ಜಿಲ್ಲಾಧಿಕಾರಿಗಳು, ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ನೀಡಿರುವ ಸೂಚನೆಯಂತೆ ಕ್ರಮವಹಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ವಂದನೆ ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ರಾಜೇಂದರ್ ಕುಮಾರ್ ಕಠಾರಿಯಾ),
ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ
ಹಾಗೂ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

<u>ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಾಗಲಕೋಟೆ ಹಾಗೂ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 27–03–2019 ರಂದು ಬಾಗಲಕೋಟೆ ಜಿಲ್ಲೆಯ ಬರ ಪರಿಸ್ಥಿತಿ ನಿರ್ವಹಣೆ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.</u>

| ಕ್ರಸಂ | ಅಂಶಗಳು | ಮಾನ್ಯ ಪ್ರಾದೇಶಿಕ ಆಯುಕ್ತರ ಷರಾ |
|---|---|---|
| 01 | ಜಿಲ್ಲೆಯ ಹೆಸರು | ಬಾಗಲಕೋಟೆ |
| 02 | ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ | ತುಷಾರ್ ಗಿರಿನಾಥ್, ಭಾ.ಆ.ಸೇ. |
| 03 | ಭೇಟಿಯಾದ / ಪ್ರವಾಸದ ದಿನಾಂಕ | 27–03–2019 |
| 04 | ಮುಖ್ಯವಾಗಿ ಗಮನಿಸಿದ ಅಂಶಗಳು | <u>ಬರಪರಿಸ್ಥಿತಿ ನಿರ್ವಹಣೆ:</u><br><br>1. ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುತ್ತಿರುವ 4 ಗ್ರಾಮಗಳಲ್ಲಿ [ಬದಾಮಿ ತಾಲೂಕಿನಲ್ಲಿ 2 ಗ್ರಾಮಗಳಾದ ನಂದಿಕೇಶ್ವರ ಆಸರೆ ಕಾಲನಿ, ಲಿಂಗಾಪೂರ,] [ಹುನಗುಂದ ತಾಲೂಕಿನಲ್ಲಿ 2 ಗ್ರಾಮಗಳಾದ ಮುರಡಿ ಮಿಲ್ಕ ಸೆಂಟರ್, ಗುಡೂರ ಎಸ್ ಸಿ ] ಶಾಶ್ವತ ಕುಡಿಯುವ ನೀರು ಪೂರೈಕೆ ಮಾಡಲು ಕೈಕೊಂಡ ಕ್ರಮದ ಕುರಿತು ಮಾಹಿತಿ ನೀಡಲು EE.RWS & D Bagalkot ಇವರಿಗೆ ಕೇಳಿದರು.<br>EE.RWS & D Bagalkot ಇವರು 4 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸುವ ಬಗ್ಗೆ ವಿವರಿಸಿ, ಗುಡೂರ ಎಸ್.ಸಿ. ಗ್ರಾಮಕ್ಕೆ ಚಿಮ್ಮಲಗಿ ಬ್ಯಾರೇಜ್‌ನಿಂದ ರಂಗಸಮುದ್ರ ಕೆರೆಗೆ ನೀರನ್ನು ಎತ್ತಿ ಅಲ್ಲಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ ವಿದ್ಯುತ್ ಸೌಲಭ್ಯ 5–6 ಗಂಟೆ ಮಾತ್ರ ಲಭ್ಯವಿರುವುದರಿಂದ ನೀರು ಪೂರೈಕೆಯಲ್ಲಿ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.<br><br>2. ಗುಡೂರ ಎಸ್.ಸಿ. ಗ್ರಾಮಕ್ಕೆ ನಿರಂತರ ಜ್ಯೋತಿ ಯೋಜನೆಯಿಂದ 24ಞ7 ವಿದ್ಯುತ್ ಒದಗಿಸುವ ಬಗ್ಗೆ ಕೈಕೊಂಡ ಕ್ರಮದ ಬಗ್ಗೆ EE.RWS & D Bagalkot ಇವರಿಗೆ ಕೇಳಿದರು.<br>ಈಗಾಗಲೇ ಶಾಶ್ವತ ಕುಡಿಯುವ ನೀರು ಪೂರೈಕೆಗಾಗಿ NRDWP ಯೋಜನೆಯಡಿ ರೂ. 32.00 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ, ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗಿದೆ. ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಆಗಿದೆ. ಆದರೆ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ 24X7 ವಿದ್ಯುತ್ ಪೂರೈಕೆಯಾದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಬಹುದಾಗಿದೆ ಎಂದು EE.RWS & D Bagalkot ಇವರು ತಿಳಿಸಿದರು. |

| | | |
|---|---|---|
| | | 3. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸಭೆಯಲ್ಲಿಯೇ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ ರವರಿಗೆ ಮಾತನಾಡಿ ನಿರಂತರ ಜ್ಯೋತಿ ಯೋಜನೆಯಡಿ ತಕ್ಷಣ ಕ್ರಮವಹಿಸಿ, 3 ದಿನಗಳಲ್ಲಿ ನೀರು ಪೂರೈಕೆ ಮಾಡಲು ತಿಳಿಸಿದರು. [ಕ್ರಮ: SE.Hescom BGK ]<br><br>4. TTF-1 & TTF-2 ಕ್ಕೆ ಸಂಬಂಧಿಸಿದಂತೆ ಕುಡಿಯುವ ನೀರಿನ ಅನುದಾನದಲ್ಲಿ ಒಟ್ಟು ತೆಗೆದುಕೊಂಡ ಕಾಮಗಾರಿಗಳು ಹಾಗೂ ಸದರಿ ಕಾಮಗಾರಿಗಳಿಗೆ ಬೇಕಾಗುವ ಒಟ್ಟು ಅನುದಾನದ ವಿವರ ನೀಡುವುದು. ಬೇಕಾಗುವ ಒಟ್ಟು ಅನುದಾನಕ್ಕೆ ವಿವಿಧ ಯೋಜನೆಯಲ್ಲಿ ನಿಗದಿಪಡಿಸಲಾದ ಹಣ ಮುಖ್ಯವಾಗಿ TTF–1 ರಡಿ, CRF ರಡಿ ಮತ್ತು 14th Finace, ರಡಿಯಲ್ಲಿ ಮೀಸಲಿಟ್ಟ ಹಣದ ವಿವರ ಹಾಗೂ ಕೊರತೆ ಬೀಳುವ ಅನುದಾನಕ್ಕೆ TTF-3 ರಡಿಯಲ್ಲಿ ಹೊಂದಾಣಿಕೆ ಮಾಡಿ ಮೀಸಲಿಟ್ಟ ಹಣದ ವಿವರ ನೀಡಲು EE.RWS & D Bagalkot ಇವರಿಗೆ ತಿಳಿಸಿದರು.<br><br>TTF–1 ರಲ್ಲಿ ಒಟ್ಟು 199 ಕೊಳವೆಬಾವಿ ಕೊರೆಯುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ 155 ಸಫಲ ಕೊಳವೆಬಾವಿ ಕಾಮಗಾರಿಗಳಿಗೆ CRಈ ಅನುದಾನದಲ್ಲಿ 243.25 ಲಕ್ಷ ಹಾಗೂ TTF-2 ರಲ್ಲಿ ಒಟ್ಟು65 ಕೊಳವೆ ಬಾವಿಗಳನ್ನು ತೆಗೆದು ಕೊಂಡಿದ್ದು ಇದರಲ್ಲಿ 52 ಕೊಳವೆಬಾವಿಗಳು ಸಫಲವಾಗಿದ್ದು, ಈ ಕಾಮಗಾರಿಗಳಿಗೆ ಹೊಂದಾಣಿಕೆ ಮೊತ್ತವಾಗಿ CRಈ ರಡಿಯಲ್ಲಿ ರೂ. 103.20 ಲಕ್ಷ ಕೋರಲಾಗಿದ್ದು, ಒಟ್ಟು ರೂ,346.45 ಲಕ್ಷ CRF ರಡಿ ಅನುದಾನ ಕೋರಲಾಗಿದೆ ಎಂದು ವಿವರಿಸಿದರು.<br><br>ಆದರೆ ಒಟ್ಟು ತಗೆದುಕೊಂಡ ಕಾಮಗಾರಿಗಳಿಗೆ ಬೇಕಾಗುವ ಅನುದಾನದ ವಿವರ ಹಾಗೂ ಇದಕ್ಕೆ ಹೊಂದಾಣಿಯಾಗಿ ತೆಗೆದುಕೊಂಡ ವಿವಿಧ್ ಯೋಜನೆಯಲ್ಲಿ [CRF, 14th Finace, TTF-2] ಮಾಹಿತಿ ಸಧ್ಯ ಲಭ್ಯವಿರುವುದಿಲ್ಲವೆಂದು EE.RWS & D Bagalkot ಇವರು ತಿಳಿಸಿದರು. [ ಕ್ರಮ: EE.RWS & D Bagalkot ]<br><br>5. ಪ್ರಸ್ತುತ ಟಿಟಿಎಫ್–3 ಅನುದಾನ ಬಿಡುಗಡೆಯಾಗಿದ್ದು, TTF–1 & 2 ರಲ್ಲಿ ಬಿಡುಗಡೆಯಾದ ಅನುದಾನಕ್ಕೆ ಈಗಾಗಲೇ ಕ್ರಿಯಾ ಯೋಜನೆ ರೂಪಿಸಿದ್ದು, ಈ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳಿಗೆ ಅನುದಾನದ ಕೊರತೆ ಕಂಡು ಬಂದಲ್ಲಿ ಅದನ್ನು ಬಳಕೆಮಾಡಿಕೊಂಡು ಮುಕ್ತಾಯಗೊಳಿಸಲು ಸೂಚಿಸಿದರು. ಉಳಿಕೆ ಅನುದಾನಕ್ಕೆ ಮಾತ್ರ ಹೊಸದಾಗಿ ಕ್ರೀಯಾಯೋಜನೆ ಸಿದ್ದಪಡಿಸಲು ಸೂಚಿಸಿದರು. |

6. ಟಿಟಿಎಫ್‌-1 & 2 ರ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸಿಆರ್‌ಎಫ್ ಅನುದಾನ ಬಳಕೆ ಮಾಡುವುದಕ್ಕಿಂತ ಮೊದಲು ಕಾರ್ಯನಿರ್ವಾಹಕ ಅಭಿಯಂತರರಿಂದ ಅಂದಾಜು ಪತ್ರಿಕೆಗಳನ್ನು ತರಿಸಿಕೊಂಡು, ಜಿಲ್ಲಾಧಿಕಾರಿಗಳ ಹಂತದಲ್ಲಿ 3 ದಿನಗಳಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಮಂಜೂರಾತಿ ನೀಡಿದ ಅಂದಾಜು ಪತ್ರಿಕೆಯ ಕಾಮಗಾರಿಗಳಿಗೆ ಮಾತ್ರ ಅನುದಾನ ಬಿಡುಗಡೆ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರು ಟಿಟಿಎಫ್‌-1 & 2 ರ ಕಾಮಗಾರಿಗಳ ಮುಕ್ತಾಯದ ಬಗ್ಗೆ ಖುದ್ದು ಆಸಕ್ತಿವಹಿಸಿ, ಆಧ್ಯತೆಯ ಮೇಲೆ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಸೂಚಿಸಲಾಯಿತು.

8. ಉಪವಿಭಾಗಾಧಿಕಾರಿಗಳು, ಜಮಖಂಡಿ ಇವರ ಕೋರಿಕೆಯ ಮೇರೆಗೆ ಹಿಪ್ಪರಗಿ ಜಲಾಶಯದ ಹಿನ್ನೀರನ್ನು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ಹಾಗೂ ರಾಯಬಾಗ ತಾಲ್ಲೂಕುಗಳಲ್ಲಿ ನಿರಂತರ ಕೃಷಿಗೆ ನೀರು ಪಡೆಯುತ್ತಿರುವುದರಿಂದ ಕೃಷ್ಣಾ ನದಿಯ ನೀರು ಕಡಿಮೆಯಾಗುತ್ತಿದ್ದು, ತುರ್ತಾಗಿ ವಿದ್ಯುತ್ ಪೂರೈಕೆ ನಿಯಮಿತವಾಗಿ 4-5 ಗಂಟೆ ಮಾತ್ರ ಪೂರೈಸಲು ಸಭೆಯಲ್ಲಿಯೇ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ ಹುಬ್ಬಳ್ಳಿ ಇವರಿಗೆ ದೂರವಾಣಿ ಮುಖೇನ ತಿಳಿಸಿದರು.

9. ಬರ ಪರಿಸ್ಥಿತಿ ನಿರ್ವಹಣೆಗೆ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಲಭ್ಯವಿರುವ ಅನುದಾನದ ಮಾಹಿತಿ ಒದಗಿಸಲು ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳು, ಸಧ್ಯ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ. 9.95 ಕೋಟಿಗಳ ಅನುದಾನ ಲಭ್ಯವಿರುತ್ತದೆ. ಇದರಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಿದ ಟ್ಯಾಂಕರ್ ಬಿಲ್ ಡಿಸೆಂಬರ್-2018 ರಿಂದ ಫೆಬ್ರವರಿ-2019 ವರೆಗೆ ರೂ. 12.51 ಲಕ್ಷಗಳನ್ನು ಪಾವತಿಸಲಾಗಿದೆ.

ಹುನಗುಂದ ತಾಲೂಕಿನಲ್ಲಿ ಮಾರ್ಚ 1 ರಿಂದ 15-03-2019ರವರೆಗೆ ಒಟ್ಟು ರೂ,2.20ಲಕ್ಷ ಅನುದಾನ ಪಾವತಿಸಲಾಗಿದೆ.

ಬದಾಮಿ ತಾಲೂಕಿನಲ್ಲಿ ಮಾರ್ಚ 1 ರಿಂದ ಇಲ್ಲಿಯವರೆಗೌ ಒಟ್ಟು ರೂ,1.62 ಲಕ್ಷ ಅನುದಾನ ಪಾವತಿಸಲು ಬಾಕಿ ಇದೆ. ಈ ಕುರಿತು ಬಾಕಿ ಮೊತ್ತವನ್ನು ಕೂಡಲೇ ಪಾವತಿಸಲು ಕ್ರಮ ವಹಿಸುವುದಾಗಿ ವಿವರಿಸಿದರು.

ಈಗಾಗಲೇ ದಿನಾಂಕ: 29-11-2018 ರಂದು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಿಂದ ಪ್ರತಿ ತಾಲ್ಲೂಕಿಗೆ ರೂ. 30.00 ಲಕ್ಷದಂತೆ ಒಟ್ಟು 6 ತಾಲ್ಲೂಕುಗಳಿಗೆ ರೂ. 180.00 ಲಕ್ಷ ಅನುದಾನ ಬರ ಪರಿಸ್ಥಿತಿ ನಿರ್ವಹಣೆಗೆ [ಟ್ಯಾಂಕರ್ ಮೂಲಕ ನೀರು ಪೂರೈಕೆ, ಗೋಶಾಲೆ, ಮೇವು ಬ್ಯಾಂಕ್ ಮುಂತಾದ ] ಬಿಡುಗಡೆ ಮಾಡಲಾಗಿದೆ ಎಂದು ವಿವರ ಒದಗಿಸಲಾಯಿತು.

<u>ನಗರ ಪ್ರದೇಶ:</u>

10. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ನಗರ ಪ್ರದೇಶಗಳಲ್ಲಿ ಮಂಜೂರಾತಿ ನೀಡಿದ ಒಟ್ಟು ಕಾಮಗಾರಿಗಳಲ್ಲಿ ಒಟ್ಟು ಈವರೆಗೆ ಮುಕ್ತಾಯವಾದ ಕಾಮಗಾರಿಗಳ ವಿವರ ಒದಗಿಸಲು ತಿಳಿಸಿದರು.

PD, DUDC BGK ರವರು ಒಟ್ಟು 15 ನಗರ ಸ್ಥಳೀಯ ಸಂಸ್ಥೆಗಳಿಗೆ ಸನ್ 2018-19ನೇಸಾಲಿನ ಎಸ್ ಎಫ್ ಸಿ ಯೋಜನೆಯಡಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ರೂ,513 ಲಕ್ಷಗಳು ಬಿಡುಗಡೆಯಾಗಿದ್ದು, ಈ ಅನುದಾನಕ್ಕೆ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಕ್ರೀಯಾಯೋಜನೆ ಮಂಜೂರಾತಿ ನೀಡಿದ್ದು. ಒಟ್ಟು 168 ಕಾಮಗಾರಿಗಳನ್ನು ತೆಗೆದು ಕೊಂಡಿದ್ದು ಇವುಗಳ ಪೈಕಿ 30 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. 52 ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತವೆ. ಇನ್ನೂ 86 ಕಾಮಗಾರಿಗಳು ಟೆಂಡರ್ ಪ್ರಕ್ರೀಯೇ ಹಂತದಲ್ಲಿರುತ್ತವೆ ಎಂದು PD, DUDC BGK ಇವರು ತಿಳಿಸಿದರು.

11. ಬಾಕಿ ಇರುವ ಎಲ್ಲ ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಂಡು ಬೇಸಿಗೆಯಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಎಪ್ರಿಲ್-2019 ರ ಅಂತ್ಯದೊಳಗಾಗಿ ಎಲ್ಲ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು. ಸದರಿ ಕಾಮಗಾರಿಗಳನ್ನು ಕಾಲ ಕಾಲಕ್ಕೆ ತಹಶೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು, ಸ್ಥಳ ತನಿಖೆಮಾಡಿ ಖಚಿತ ಪಡಿಸಿಕೊಳ್ಳಲು ನಿರ್ದೇಶಿಸಿದರು.

<u>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ</u>

12. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾನವದಿನಗಳ ಸೃಜನೆ ಗುರಿಯನ್ನು 24.71 ಲಕ್ಷ ಪರಿಷ್ಕರಿಸಿ 31.50 ಲಕ್ಷ ಗುರಿ ನಿಗದಿಪಡಿಸಿದ್ದು, ಸದರಿ ಗುರಿಯನ್ನು ಮಾರ್ಚ್ 2019ರ ಅಂತ್ಯದೊಳಗೆ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.
13. ಅನುಷ್ಠಾನ ಇಲಾಖೆ ಅಧಿಕಾರಿಗಳಿಗೆ ತಮ್ಮ ಇಲಾಖೆಗೆ ನಿಗದಿಪಡಿಸಿದ ಮಾನವದಿನ ಸೃಜನೆ ಗುರಿಗೆ ಶೇ.100 ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.

14. 2019-20ನೇ ಸಾಲಿಗೆ ವರ್ಷದ ಪ್ರಾರಂಭದಿಂದಲೇ ಅಂದರೆ ಎಪ್ರಿಲ್, ಮೇ,

ಮತ್ತು ಜೂನ್ ತಿಂಗಳಲ್ಲಿ ಹೆಚ್ಚಿನ ಸಮುದಾಯ ಆಧಾರಿತ ಕಾಮಗಾರಿಗಳನ್ನು ತೆಗೆದುಕೊಂಡು ಪ್ರಗತಿ ಸಾಧಿಸಲಾಗುದು ಎಂದು CEO, ZP BGK ರವರು ವಿವರಣೆ ನೀಡಿದರು.

ಜಾನುವಾರುಗಳಿಗೆ ಮೇವು ಪೂರೈಕೆ:

15. ಜಿಲ್ಲೆಯಲ್ಲಿ ಮೇವಿನ ಲಭ್ಯತೆಯ ಕುರಿತು ವಿವರಣೆ ಒದಗಿಸಲು DD,AH & VS Bagalkot ಇವರಿಗೆ ಕೇಳಿದರು.

DD,AH & VS Bagalkot ಇವರು ಈಗಾಗಲೇದಿನಾಂಕ: 07-02-2019 ರ ಸಭೆಯಲ್ಲಿ ತಿಳಿಸಿದಂತೆ, ಸನ್ 2018-19ನೇ ಸಾಲಿನ ಜಾನುವಾರು ಹಾಗೂ ಮೇವಿನ ಸಮೀಕ್ಷೆ ಕೈಗೊಂಡಿದ್ದು, ಸಮೀಕ್ಷೆಯನ್ವಯ ಜಿಲ್ಲೆಯಲ್ಲಿ ಒಟ್ಟು 465563 ಜಾನುವಾರುಗಳು [ದನ ಮತ್ತು ಎಮ್ಮೆ ಸೇರಿ] ಇರುತ್ತವೆ.

ಪ್ರಸ್ತುತ 2.20 ಲಕ್ಷ ಮೇ.ಟನ್ ಮೇವು ಲಭ್ಯವಿದ್ದು ಇದರಲ್ಲಿ ಈಗಾಗಲೇ ರೈತರಿಗೆ ಪೂರೈಸಿದ ಮಿನಿಕಿಟ್‌ಗಳಿಂದ ಬಂದ ಹಸಿರು ಮೇವು ಸಹಿತ ಸೇರಿದ್ದು, ಇದು ಮುಂದಿನ 12 ವಾರಗಳಿಗೆ ಸಾಕಾಗುತ್ತದೆ ಎಂದು DD,AH & VS Bagalkot ತಿಳಿಸಿದರು.

16. ಕಾರ್ಯದರ್ಶಿಗಳು, 12 ವಾರಗಳಿಗೆ ಮೇವು ಇದ್ದರೂ ಸಹ ಮುಂಬರುವ ದಿನಗಳಲ್ಲಿ ಮೇವು ಕೊರತೆಯಾದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮೇವು ಬ್ಯಾಂಕ್ ಮತ್ತು ಗೋ ಶಾಲೆಗಳನ್ನು ಪ್ರಾರಂಭಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದರು.

DD,AH & VS Bagalkot ರವರು ಈ ಸಲುವಾಗಿ ಪ್ರಸಕ್ತ ಸಾಲಿಗೆ ಇ-ಟೆಂಡರ್ ಮೂಲಕ ಈಗಾಗಲೇ ಟೆಂಡರ್ ಅಂತಿಮಗೊಳಿಸಿದ್ದು, ದರ ನಿಗದಿಪಡಿಸಿ, Letter of Acceptance ನ್ನು ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡು ಅರ್ಹ ಬಿಡ್ ದಾರರಿಗೆ ನೀಡಲಾಗಿದೆ ಎಂದು ತಿಳಿಸಿದರು.

ಮೇಲಿನ ಎಲ್ಲ ನಿರ್ದೇಶನಗಳನ್ನು ನಿಗದಿತ ಕಾಲಮಿತಿಯಲ್ಲಿ ಕೈಗೊಂಡು ಸೂಚನೆಗಳಿಗೆ ಅಗತ್ಯ ಅನುಸರಣಾ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಜಿಲ್ಲಾಧಿಕಾರಿಗಳ ಮುಖಾಂತರ 1 ವಾರದಲ್ಲಿ ಸಲ್ಲಿಸಲು ಕಾರ್ಯದರ್ಶಿಗಳು ಸೂಚಿಸಿದರು. ಕೊನೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿ ನಾಥ್)

**ದಿನಾಂಕ 07.03.2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು ಇವರು ತುಮಕೂರಿನಲ್ಲಿ ಕೈಗೊಂಡ ಸಭೆ ಮತ್ತು ಕ್ಷೇತ್ರ ಪರಿವೀಕ್ಷಣೆಯ ವಿವರಗಳು.**

- ಬೆಳಗ್ಗೆ 10.30 ಗಂಟೆಗೆ ತುಮಕೂರಿಗೆ ಆಗಮನ ಹಾಗೂ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್ ಹಾಗೂ ಇತರೆ ಅಧಿಕಾರಿಗಳೊಂದಿಗೆ ಬರ ಪರಿಹಾರಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.
- ಬೆಳಗ್ಗೆ 11.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಗಳಲ್ಲಿ ಒಂದಾದ ಹೊರವರ್ತುಲ ರಸ್ತೆಯ ಅಭಿವೃದ್ಧಿ ಕಾಮಗಾರಿಯ ಪ್ರಗತಿಯ ಕುರಿತು ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ಕಾಮಗಾರಿಗಳು ವೇಗವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.
- ಮಧ್ಯಾಹ್ನ 12.00 ಗಂಟೆಗೆ ಕಿರಿಯ ಆರೋಗ್ಯ ಕೇಂದ್ರ, ಜಯನಗರ, ತುಮಕೂರು ಇಲ್ಲಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಡಿಜಿಟಲ್ ನರ್ವ್ ಸೆಂಟರ್ ಯೋಜನೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳು, ಆಯುಕ್ತರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಜಿಲ್ಲಾ ಆರೋಗ್ಯ ಅಧಿಕಾರಿಗಳೊಂದಿಗೆ ಭಾಗವಹಿಸಿದರು.
- ಮಧ್ಯಾಹ್ನ 12.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಗಳಲ್ಲಿ ಇನ್ನೊಂದಾದ ಇಂಟಿಗ್ರೇಟೆಡ್ ಕಮ್ಯಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICMCC) ಕಾಮಗಾರಿಯ ಅನುಷ್ಠಾನಕ್ಕೆ ಸ್ಥಳ ಗುರುತಿಸುವ ಕುರಿತು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಕಛೇರಿಗೆ ತೆರಳಿ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಅಪರ ಪೋಲಿಸ್ ವರಿಷ್ಠಾಧಿಕಾರಿಗಳೊಂದಿಗೆ ಸಭೆ ನಡೆಸಿ ಸ್ಥಳ ಪರಿಶೀಲನೆ ನಡೆಸಲಾಯಿತು.
- ಮಧ್ಯಾಹ್ನ 02.00 ಗಂಟೆಗೆ ಸರ್ಕಾರಿ ಕಿರಿಯ ಪ್ರಾಥಾಮಿಕ ಶಾಲೆ, ಕ್ಯಾತ್ಸಂದ್ರಕ್ಕೆ ತೆರಳಿ ಶಾಲಾ ಮಕ್ಕಳಿಗೆ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳೊಂದಿಗೆ Sai Sure Milk Powder ನ್ನು ವಿತರಣೆ ಮಾಡಿದರು, ಶಾಲಾ ಸ್ವಚ್ಛತೆ ಮತ್ತು ಸುವ್ಯವಸ್ಥೆಯ ಬಗ್ಗೆ ಪರಿಶೀಲನೆ ಮಾಡಿ ಮಾಹಿತಿ ಪಡೆಯಲಾಯಿತು.
- ಮಧ್ಯಾಹ್ನ 02.45 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಯಾದ ಇಂಟಿಗ್ರೇಟೆಡ್ ಕಮ್ಯಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICMCC) ಕಾಮಗಾರಿಯನ್ನು ತುಮಕೂರು ಮಹಾನಗರ ಪಾಲಿಕೆ ಕಛೇರಿಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಪಾಲಿಕೆ ಕಛೇರಿಗೆ ತೆರಳಿ ಆಯುಕ್ತರು, ಇತರೆ ಪಾಲಿಕೆ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದು ಚರ್ಚಿಸಲಾಯಿತು ಹಾಗೂ ಪಾಲಿಕೆಯ ತೆರಿಗೆ ವಿಷಯವಾಗಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ತುರ್ತುಗತಿಯಲ್ಲಿ ತೆರಿಗೆ ಹಣವನ್ನು ಪಾಲಿಕೆಗೆ ವಸುಲಾತಿ ಮಾಡಲು ಸೂಚಿಸಲಾಯಿತು.
- ಮಧ್ಯಾಹ್ನ 03.15 ಗಂಟೆಗೆ ಎಂಪ್ರೆಸ್ ಬಾಲಕಿಯರ ಶಾಲೆ, ಅಶೋಕ ರಸ್ತೆಗೆ ತೆರಳಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಅನುಷ್ಠಾನಗೊಳಿಸಿದ ಸ್ಮಾರ್ಟ್ ಕ್ಲಾಸ್ ರೂಂನ್ನು ಮಾನ್ಯ ಶಾಸಕರೊಂದಿಗೆ ಚಾಲನೆ ನೀಡಿ, ಅದರ ಉಪಯೋಗದ ಬಗ್ಗೆ ಮಕ್ಕಳು ಹಾಗೂ ಪ್ರಾಧ್ಯಾಪಕರೊಂದಿಗೆ ಚರ್ಚಿಸಲಾಯಿತು.

P 17

❖ ಮಧ್ಯಾಹ್ನ 04.00 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಜಂಟಿ ವ್ಯವಸ್ಥಾಪಕ ನಿರ್ದೇಶಕರು, ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಹಾಗೂ ಎಲ್ಲಾ ಅಧಿಕಾರಿಗಳೊಂದಿಗೆ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ಸಭೆಯನ್ನು ಕೈಗೊಂಡು ಚರ್ಚಿಸಿ ಹಾಗೂ ಪ್ರಗತಿಯಲ್ಲಿರುವ ಯೋಜನೆಗಳ ಬಗ್ಗೆ ಪೂರಕ ವಿವರಗಳನ್ನು ಪಡೆದು ತುರ್ತುಗತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

(ಡಾ:ಶಾಲಿನಿ ರಜನೀಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ, ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ.

**ದಿನಾಂಕ: 16-03-2019ರಂದು ಮಧ್ಯಾಹ್ನ 12.00 ಗಂಟೆಗೆ ಮಾನ್ಯ ಶ್ರೀ ಎಸ್.ಆರ್. ಉಮಾಶಂಕರ್ ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿ.**

--

ಸಭೆಯ ಪ್ರಾರಂಭದಲ್ಲಿ ಜಿಲ್ಲೆಯ ಬರ ಅಧ್ಯಯನ ಪರಿಹಾರ ಹಾಗೂ ನಿರ್ವಹಣೆಯ ಕುರಿತು ಹವಾಮಾನದ ಮಾಹಿತಿಯ ವಿವರ, ಬೆಳೆಗಳ ನಷ್ಟದ ವಿವರ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಕ್ರಿಯಾ ಯೋಜನೆಯ ವಿವರ, ಪಶು ಸಂಗೋಪನಾ ಕ್ರಿಯಾ ಯೋಜನೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ವಿವರವನ್ನು ಪರಿಶೀಲಿಸುವುದಾಗಿ ತಿಳಿಸಲಾಯಿತು.

1. **ಕೃಷಿ ಇಲಾಖೆ:**

ಜಿಲ್ಲೆಯಲ್ಲಿ ಬರಪರಿಸ್ಥಿತಿ ನಿರ್ವಹಣೆ ಮಾಹಿತಿ ಪಡೆದ ಸಭಾಧ್ಯಕ್ಷರು ಕಳೆದ ಎರಡು ಮೂರು ತಿಂಗಳಿಂದ ಒಣ ಹವೆ ಇದೆ ಮಳೆಯ ಮುನ್ಸೂಚನೆ ಬಗ್ಗೆ ಮಾಹಿತಿ ಏನಾದರೂ ಇದೆಯೇ ಎಂಬ ಬಗ್ಗೆ ತಜ್ಞರಿಂದ ಅಭಿಪ್ರಾಯ ಪಡೆದುಕೊಳ್ಳಲು ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಿದರು. ಮುಂದುವರೆದು ಬೆಳೆ ಪರಿಹಾರದ ಹಣವನ್ನು ಜಿಲ್ಲೆಗೆ ಬಿಡುಗಡೆ ಮಾಡುವ ಬಗ್ಗೆ ಕೃಷಿ ಇಲಾಖೆ ಕಾರ್ಯದರ್ಶಿಯವರೊಂದಿಗೆ ಚರ್ಚಿಸಲಾಗಿದೆ ಹಣ ಬಿಡುಗಡೆ ಮಾಡಲು ಸರ್ಕಾರ ಒಪ್ಪಿಗೆ ಸೂಚಿಸಿದ್ದು, ಹಣ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ತಿಳಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ)**

**2. ತೋಟಗಾರಿಕೆ ಇಲಾಖೆ:**

ಮಳೆ ಅಭಾವದಿಂದ ತೋಟಗಾರಿಕಾ ಬೆಳೆಗಳ ನಷ್ಟ ಉಂಟಾದ ಬಗ್ಗೆ ಮಾಹಿತಿ ಪಡೆದ ಸಭಾಧ್ಯಕ್ಷರು ಲಭ್ಯವಿರುವ ನೀರಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಸಂರಕ್ಷಣೆ ಮಾಡಿಕೊಳ್ಳುವ ಬಗ್ಗೆ ರೈತರಿಗೆ ಅಗತ್ಯ ಮಾಹಿತಿ ನೀಡಲು ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಇವರಿಗೆ ಸಭಾಧ್ಯಕ್ಷರು ಸೂಚಿಸಿದರು. ಜಿಲ್ಲೆಯ ಮಳೆಯ ಅಭಾವದಿಂದ ಪ್ರಮುಖ ಬೆಳೆಯಾದ ಈರುಳ್ಳಿ ಬೆಳೆ ತುಂಬಾ ನಷ್ಟ ಉಂಟಾಗಿದ್ದು, ಕೇಂದ್ರ ತಂಡ ಜಿಲ್ಲೆಗೆ ಪರಿಶೀಲನೆಗೆ ಬಂದ ಸಮಯದಲ್ಲಿ ಪರಿಸ್ಥಿತಿಯನ್ನು ತಂಡದ ಗಮನಕ್ಕೆ ತರಲಾಗಿದೆ ಎಂದು ಉಪನಿರ್ದೇಶಕರು ತೋಟಗಾರಿಕೆ ಇಲಾಖೆ ಇವರು ಸಭೆಗೆ ಮಾಹಿತಿ ನೀಡಿದರು.

**3. ಪಶುಪಾಲನೆ ಮತ್ತು ಪಶುವೈದ್ಯಸೇವಾ ಇಲಾಖೆ:**

ಜಿಲ್ಲೆಯಲ್ಲಿ ಮೇವು ಸಂಗ್ರಹಣೆ ಬಗ್ಗೆ ಮಾಹಿತಿ ಪಡೆದ ಸಭಾಧ್ಯಕ್ಷರು ಜಿಲ್ಲೆಯಲ್ಲಿ 13 ವಾರಗಳಿಗಾಗುವಷ್ಟು ಮೇವು ಸಂಗ್ರಹವಿದೆ ಇನ್ನೂ ಹೆಚ್ಚಿನ ಮೇವು ಬೆಳೆಯಲು ರೈತರಿಗೆ ಮೇವು ಬೆಳೆ ಮಿನಿಕಿಟ್‌ಗಳನ್ನು ಒದಗಿಸಲು ಸೂಚಿಸಿದರು. ಇದರ ಜೊತೆಗೆ ಮೇವು ಬಹುಬೆಳೆ ಕಿಟ್‌ಗಳನ್ನು ಜಿಲ್ಲೆಗೆ ಸರಬರಾಜು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಕಿಟ್‌ಗಳು ಬಂದ ತಕ್ಷಣ ನೀರು ಲಭ್ಯವಿರುವ ಪ್ರದೇಶಗಳಲ್ಲಿ ಮೇವು ಬೆಳೆಯಲು ರೈತರಿಗೆ ಒದಗಿಸುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

ಬೇಸಿಗೆ ಕಾಲ ಇರುವುದರಿಂದ ಜಾನುವಾರುಗಳಿಗೆ ತಗಲಬಹುದಾದ ಸಾಂಕ್ರಾಮಿಕ ರೋಗಗಳ ಬಗ್ಗೆ ಅಗತ್ಯ ಮುಂಜಾಗರೂಕ ಕ್ರಮ ಕೈಗೊಳ್ಳಲು ಹಾಗೂ ಜಿಲ್ಲೆಯಲ್ಲಿ ಅಗತ್ಯ ಇರುವ ಕಡೆ ಗೋಶಾಲೆಗಳನ್ನು ಪ್ರಾರಂಭಿಸಲು ಉಪನಿರ್ದೇಶಕರು, ಪಶುಪಾಲನೆ ಮತ್ತು ಪಶು ವೈದ್ಯಸೇವಾ ಇಲಾಖೆ ಇವರಿಗೆ ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯಸೇವಾ ಇಲಾಖೆ, ದಾವಣಗೆರೆ)**

**4. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:-**

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಪರಿಶೀಲಿಸಿದ ಸಭಾಧ್ಯಕ್ಷರು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚು ಕಂಡುಬಂದಿದ್ದು, ಕುಡಿಯುವ ನೀರಿಗಾಗಿ ಹೊಸದಾಗಿ ಕೊಳವೆ ಬಾವಿಗಳನ್ನು ನಿರ್ಮಾಣಕ್ಕೆ ಆದ್ಯತೆ ನೀಡದೆ ಟ್ಯಾಂಕರ್ ಮೂಲಕ ಗುಣಮಟ್ಟದ ಕುಡಿಯುವ ನೀರನ್ನು ಒದಗಿಸಲು ಹಾಗೂ ನಗರ ಪ್ರದೇಶಗಳಲ್ಲಿ ಇರುವ ಖಾಸಗಿ ಕೊಳವೆ ಬಾವಿಗಳ ಮಾಲಿಕರೊಂದಿಗೆ ಚರ್ಚಿಸಿ ಸದರಿ ಕೊಳವೆ ಬಾವಿಗಳಿಂದ ನೀರು ಪಡೆಯುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು. ಮಳೆಗಾಲದಲ್ಲಿ ಹಾಲಿ ಇರುವ ಕೊಳವೆ ಬಾವಿಗಳ ಅಂತರ್‌ಜಲ ಅಭಿವೃದ್ಧಿಯಾಗುವ ಸಾದ್ಯತೆ ಇರುವುದರಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅನಗತ್ಯ ಕೊಳವೆ ಬಾವಿಗಳ ನಿರ್ಮಾಣ ಮಾಡದಿರುವಂತೆ ಸೂಚಿಸಲಾಯಿತು.

ಭದ್ರಾ ನಾಲೆಯಲ್ಲಿ ಈಗ ನೀರು ಹರಿಯುತ್ತಿದ್ದು, ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಎಲ್ಲಿಯವರೆಗೆ ನಾಲೆಗಳಲ್ಲಿ ನೀರು ಹರಿಸಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ಪಡೆದು ಹಾಲಿ ಇರುವ ಕೆರೆ ಕುಂಟೆ ಹಾಗೂ ಕುಡಿಯುವ ನೀರು ಸಂಗ್ರಹಗಳಿಗೆ ನಾಲೆಯ ನೀರನ್ನು ಸಂಗ್ರಹ ಮಾಡಿಕೊಳ್ಳಲು ಸಭಾಧ್ಯಕ್ಷರು ಸೂಚಿಸಿದರು. ಕುಡಿಯುವ ನೀರಿನ ಲಭ್ಯತೆ ನಿರ್ವಹಣೆ ಬಗ್ಗೆ ಒಂದು ವಿಶೇಷ ಸಭೆ ನಡೆಸಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲು ಸಭಾಧ್ಯಕ್ಷರು ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು. ಭದ್ರಾ ನಾಲೆಯಲ್ಲಿ ನೀರು ಹರಿಯುವಾಗ ನಾಲೆಗಳ ಮೇಲ್ಭಾಗದ ರೈತರು ಪಂಪ್‌ಸೆಟ್ ಬಳಸಿ ನೀರು ಬಳಸುವುದರಿಂದ ನಾಲೆಯ ಮುಂದಕ್ಕೆ ನೀರು ಸಾಗಲು ತೊಂದರೆಯಾಗುತ್ತದೆ. ಇದರಿಂದ ಕುಡಿಯುವ ನೀರಿಗಾಗಿ ನೀರು ಸಂಗ್ರಹಿಸಿಕೊಳ್ಳಲು ಅಡಚಣೆ ಉಂಟಾಗುವುದರಿಂದ ಪೋಲಿಸ್ ಇಲಾಖೆ ಸಹಕಾರದೊಂದಿಗೆ ಪಂಪ್‌ಸೆಟ್ ತೆರವುಗೊಳಿಸಲು ಸಭಾಧ್ಯಕ್ಷರು ಸೂಚಿಸಿದರು. ಬಹು ಗ್ರಾಮ ಯೋಜನೆಗಳ ಮೂಲಕ ಜನರಿಗೆ ನೈಸರ್ಗಿಕವಾಗಿ ಉತ್ತಮ ಗುಣಮಟ್ಟದ ನೀರು ದೊರೆಯುವುದರಿಂದ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದ ಸಭಾಧ್ಯಕ್ಷರು ಕುಡಿಯುವ ನೀರಿಗಾಗಿ ಲಭ್ಯವಿರುವ ಅನುದಾನದಲ್ಲಿ ಅನಗತ್ಯ ಕಾಮಗಾರಿಗಳನ್ನು ನಿಯಂತ್ರಿಸಿ ಇದಕ್ಕೆ ನಿಗಧಿಪಡಿಸಿರುವ ಹಣವನ್ನು ಬಹು ಗ್ರಾಮ ಯೋಜನೆಗಳನ್ನು ಪೂರ್ಣಗೊಳಿಸಲು ಬಳಸಿಕೊಳ್ಳಲು ಸಲಹೆ ನೀಡಲಾಯಿತು.

**(ಕ್ರಮ: 1.ಜಿಲ್ಲಾಧಿಕಾರಿಗಳ ಕಾರ್ಯಾಲಯ 2. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು 3. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕು.ನೀ.ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ)**

**5. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಜಗಳೂರು ತಾಲ್ಲೂಕಿನಲ್ಲಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿರುವುದು ಕಂಡು ಬಂದಿದ್ದು, ಅರ್ಹ ಕೂಲಿಕಾರರಿಂದ ಮಾತ್ರ ಕೆಲಸ ನಿರ್ವಹಿಸಲು ಯಾವುದೇ ಕಾರಣಕ್ಕೂ ಯಾಂತ್ರಿಕ ಮತ್ತಿತರೆ ಪದ್ಧತಿಯಲ್ಲಿ ಕೆಲಸ ನಿರ್ವಹಿಸದಿರುವಂತೆ ಸೂಚಿಸಲಾಯಿತು. ಯೋಜನೆಯಲ್ಲಿ ಯಾವುದೇ ರೀತಿಯ ಲೋಪದೋಷಗಳು ಆಗದಂತೆ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಜಗಳೂರು ಇವರಿಗೆ ಸೂಚಿಸಲಾಯಿತು. ಜಗಳೂರು ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರು ಇದ್ದಾರೆ ಜಿಲ್ಲಾ ಪಂಚಾಯತ್ ವತಿಯಿಂದ ಅಧಿಕಾರಿಗಳು ತಾಲ್ಲೂಕಿನ ಕೆಲಸ ನಡೆಯುವ ಸ್ಥಳಗಳಿಗೆ ದಿನಾಂಕ:15-03-2019ರಂದು ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರು ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆಂದು ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಯವರು ಗಮನಕ್ಕೆ ತಂದರು.

**(ಕ್ರಮ:ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ದಾವಣಗೆರೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಜಗಳೂರು)**

**6. ಸಾರ್ವಜನಿಕ ಶಿಕ್ಷಣ ಇಲಾಖೆ:**

ಜಿಲ್ಲೆಯನ್ನು ಬರಗಾಲ ಜಿಲ್ಲೆಯೆಂದು ಘೋಷಿಸಿರುವುದರಿಂದ ಬೇಸಿಗೆ ರಜಾ ದಿನಗಳಲ್ಲಿಯೂ ಸಹ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಮುಂದುವರೆಸಲು ಸರ್ಕಾರ ನಿರ್ದೇಶನ ನೀಡಿದೆ. ಈ ಬಗ್ಗೆ ಎಲ್ಲಾ ಮಕ್ಕಳ ಪೋಷಕರಿಗೆ ಮಾಹಿತಿ ನೀಡಿ ಶಾಲಾ ರಜಾ ದಿನದಲ್ಲಿಯೂ ಸಹ ಯೋಜನೆ ಸದುಪಯೋಗ ಪಡೆದುಕೊಳ್ಳುವಂತೆ ಕ್ರಮವಹಿಸಲು ಹಾಗೂ ಬೇಸಿಗೆ ರಜಾ ಅವಧಿಯಲ್ಲಿ ಮಕ್ಕಳ ವಿಷೇಶ ಚಟುವಟಿಕೆ ಶಿಬಿರಗಳನ್ನು ಆಯೋಜಿಸಲು ಇಲಾಖೆಯಿಂದ ನಿರ್ದೇಶನ ನೀಡಲಾಗಿದ್ದು, ಇದರ ಪ್ರಯೋಜನೆಯನ್ನು ಮಕ್ಕಳು ಪಡೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮವಹಿಸಲು ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷಾ ವೇಳೆ ವಿದ್ಯಾರ್ಥಿಗಳು ನಕಲು ಮಾಡದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಚಿಸಲಾಯಿತು. ಮುಂದುವರೆದು ಜಿಲ್ಲೆಯ ಮತಗಟ್ಟೆಗಳನ್ನಾಗಿ ಗುರುತಿಸಿರುವ ಶಾಲೆಗಳ ದುರಸ್ಥಿಗೆ ಶಿಕ್ಷಣ ಇಲಾಖೆಯಿಂದ ಹಣ ಬಿಡುಗಡೆ ಮಾಡಲಾಗಿದ್ದು, ತ್ವರಿತವಾಗಿ ಮತಗಟ್ಟೆಗಳು ಇರುವ ಶಾಲೆಗಳನ್ನು ದುರಸ್ಥಿಗೊಳಿಸಲು ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ)**

**7. ಆರೋಗ್ಯ ಇಲಾಖೆ:**

ದಿಢೀರ್ ಕಂಡು ಬರುವ ಸಾಂಕ್ರಾಮಿಕ ರೋಗಗಳ ಕುರಿತಂತೆ ರೋಗಗಳಿಗೆ ಹವಾಮಾನ ಬದಲಾವಣೆ ಕಾರಣವೇ ಎಂಬ ಬಗ್ಗೆ ತಜ್ಞರಿಂದ ಮಾಹಿತಿ ಪಡೆದು ಒಂದು ವೇಳೆ ಹವಾಮಾನ ಆಧಾರಿತ ರೋಗ ಎಂದು ಕಂಡು ಬಂದಲ್ಲಿ ಸೂಕ್ತ ಮುಂಜಾಗರೂಕ ಕ್ರಮಗಳನ್ನು ಕೈಗೊಳ್ಳಲು ಹಾಗೂ

ಸಾರ್ವಜನಿಕರಿಗೆ ಅಗತ್ಯ ತಿಳುವಳಿಕೆ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ದಾವಣಗೆರೆ)**

**8. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:**

ಜಿಲ್ಲೆಯ ಅಪೌಷ್ಠಿಕ ಮಕ್ಕಳ ಹಾಗೂ ಗರ್ಭಿಣಿಯರ ಮಾಹಿತಿ ಪಡೆದ ಸಭಾಧ್ಯಕ್ಷರು ಅಪೌಷ್ಠಿಕತೆಯಿಂದ ಬಳಲುತ್ತಿರುವವರನ್ನು ಪೌಷ್ಠಿಕವಾಗಿ ಮತ್ತು ಆರೋಗ್ಯವಂತರನ್ನಾಗಿ ಮಾಡುವ ಕಡೆಗೆ ವಿಶೇಷ ಗಮನ ಹರಿಸಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಇವರಿಗೆ ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ದಾವಣಗೆರೆ)**

**9. ಸಮಾಜ ಕಲ್ಯಾಣ ಇಲಾಖೆ:**

ವಿದ್ಯಾರ್ಥಿ ವೇತನ ಹಾಗೂ ಇತರೆ ಸೌಲಭ್ಯ ಒದಗಿಸಲು ಮಕ್ಕಳ ಆಧಾರ್ ಜೋಡಣೆ ಕಡ್ಡಾಯ ಮಾಡಿದ್ದು, ಇನ್ನೂ ಆಧಾರ್ ಜೋಡಣೆ ಆಗದಿರುವ ಮಕ್ಕಳ ಹಿತದೃಷ್ಠಿಯಿಂದ ಈ ಶೈಕ್ಷಣಿಕ ಸಾಲಿಗೆ ಆಧಾರ್ ಜೋಡಣೆಯಾಗದಿದ್ದರೂ ವಿದ್ಯಾರ್ಥಿವೇತನ ಹಾಗೂ ಇತರೆ ಸೌಲಭ್ಯ ನೀಡಲು ಸರ್ಕಾರ ಉದ್ದೇಶಿಸಿದೆ, ಆದರೆ ಮುಂದಿನ ಸಾಲಿಗೆ ಆಧಾರ್ ಜೋಡಣೆ ಕಡ್ಡಾಯವಾಗಿರುವುದರಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಎಲ್ಲಾ ಮಕ್ಕಳ ಆಧಾರ್ ಜೋಡಣೆ ಕಡ್ಡಾಯವಾಗಿ ಮಾಡುವಂತೆ ಸಂಬಂಧಿಸಿದ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಸಮಾಜ ಕಲ್ಯಾಣ/ಹಿಂದುಳಿದವರ್ಗ/ಪರಿಶಿಷ್ಟ ಪಂಗಡ ಕಲ್ಯಾಣ/ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆ)**

**10. ಆಯುಷ್ ಇಲಾಖೆ:**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಸಹಕಾರ ಪಡೆದು ಇಲಾಖೆಯ ಸಿಬ್ಬಂದಿಗಳ ಸಹಯೋಗದೊಂದಿಗೆ ಆಯುಷ್ ಇಲಾಖೆ ಸಾರ್ವಜನಿಕರಿಗೆ ಆಹಾರ ಪದ್ಧತಿ ಜೀವನ ಶೈಲಿ ರೋಗಗಳ ನಿಯಂತ್ರಣ ಬಗ್ಗೆ ಅಗತ್ಯ ತಿಳುವಳಿಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಜಿಲ್ಲಾ ಆಯುಷ್ ಅಧಿಕಾರಿಯವರಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾ ಆಯುಷ್ ಅಧಿಕಾರಿ, ಆಯುಷ್ ಇಲಾಖೆ, ದಾವಣಗೆರೆ)**

ಆರ್ಥಿಕ ವರ್ಷದ ಕೊನೆಯ ತಿಂಗಳು ಮಾರ್ಚ್‌ನಲ್ಲಿ ಹಣ ಡ್ರಾ ಮಾಡಲು ಖಜಾನೆಯಲ್ಲಿ ಬಿಗಿಯಾದ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇರುವುದರಿಂದ ಹಾಗೂ ಮಾರ್ಚ್-24ಕ್ಕೆ ಆರ್ಥಿಕ ವರ್ಷ ಕೊನೆಗೊಳ್ಳುವ ಸಾಧ್ಯತೆ ಇರುವುದರಿಂದ ಕೊನೆಯವರೆವಿಗೂ ಸಮಯ ವಿಳಂಬ ಮಾಡದೇ ಬೇಗ ಬೇಗ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಆರ್ಥಿಕ ಪ್ರಗತಿ ಸಾಧಿಸಲು ಹಾಗೂ ಯಾವುದೇ ರೀತಿಯಲ್ಲಿ ಅನುದಾನ ಲ್ಯಾಪ್ಸ್ ಆಗದಂತೆ ಕ್ರಮವಹಿಸಲು ಎಲ್ಲಾ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು. ಮುಂದುವರೆದು ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆ ಎಲ್ಲಾ ಕಾಮಗಾರಿಗಳನ್ನು

ಕಡ್ಡಾಯವಾಗಿ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಅನುದಾನ ವ್ಯರ್ಥವಾಗದಂತೆ ಕ್ರಮವಹಿಸಲು ಸೂಚಿಸಿ, ಅನುದಾನ ಲ್ಯಾಪ್ಸ್ ಆದಲ್ಲಿ ಸಂಬಂಧಿಸಿದ ಅಧಿಕಾರಿಯವರನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು ಎಂದು ತಿಳಿಸಲಾಯಿತು.

**(ಕ್ರಮ: ಎಲ್ಲಾ ಇಲಾಖೆ ಮುಖ್ಯಾಧಿಕಾರಿಗಳು, ದಾವಣಗೆರೆ ಜಿಲ್ಲೆ)**


ಉಪಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಶ್ರೀ ಎಸ್.ಆರ್.ಉಮಾಶಂಕರ್ ಭಾ.ಆ.ಸೇ., ಅಧ್ಯಕ್ಷರು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಇವರು ದಿನಾಂಕ: **16-03-2019** ರಂದು ದಾವಣಗೆರೆಯಲ್ಲಿ ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ ಕಾಮಗಾರಿಗಳ ಪರಿವೀಕ್ಷಣೆಯ ವಿವರ:



**Smart E- Toilet Kasala shresti Park**




**Smart E- Toilet Kasala shresti Park**




**Smart E- Toilet Kasala shresti Park**





**Smart E- Toilet Kasala shresti Park**



**ICCC Building**




**ICCC Building**



ICCC Building



Kondajji road drain D4A



Kondajji road drain D4A

- ದಾವಣಗೆರೆ ನಗರದಲ್ಲಿ ನಿರ್ಮಿಸಲಾಗಿರುವ ಸ್ಮಾರ್ಟ್ ಇ– ಶೌಚಾಲಯ ಕಾಮಗಾರಿಯನ್ನು ಪರಿಶೀಲಿಸಿ ಸ್ಮಾರ್ಟ್ ಇ–ಶೌಚಾಲಯದಲ್ಲಿ ಶುಚಿತ್ವವನ್ನು ಕಾಪಾಡುವ ಉದ್ದೇಶದಿಂದ ಸುಂಗಧಭರಿತ ಪರಿಸರ ಸ್ನೇಹಿ ದ್ರವ್ಯವನ್ನು ಬಳಸಿ ಎಂಬ ಸಲಹೆಯನ್ನು ಸೂಚಿಸಲಾಯಿತು.
- ದಾ.ಸ್ಮಾ.ಸಿ.ಲಿ, ಯೋಜನೆ Remodelling of storm water drains in ABD area - Kondajji Road Drain – Drain Nos: D4A & D4B ಕಾಮಗಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ D4A ಕಾಮಗಾರಿಯಲ್ಲಿ ASSISTANT DIRECTOR LAND RECORDS (ADLR) ಮತ್ತು ತಹಶೀಲ್ದಾರ್‌ರ ಕಛೇರಿಗೆ ಖುದ್ದು ಭೇಟಿ ನೀಡಿ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ರವಿನ್ಯೂ ಮ್ಯಾಪ್ ಪಡೆದು ಅದರಂತೆ ಅಲೈನ್‌ಮೆಂಟ್ ಪರಿಶೀಲಿಸಲು ಸೂಚಿಸಲಾಯಿತು.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ
ಮತ್ತು ಅಧ್ಯಕ್ಷರು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:09.03.2019 ರಂದು ಮುಂಜಾನೆ 11.00 ಗಂಟೆಗೆ ಬರಗಾಲ ಪರಿಸ್ಥಿತಿಯ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
3. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
4. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
5. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
6. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
7. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
8. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
9. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
10. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
11. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
12. ಉಪ-ನಿರ್ದೇಶಕರು ತೋಟಗಾರಿಕೆ ಬೆಳಗಾವಿ.
13. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ದಿ ಇಲಾಖೆ ಬೆಳಗಾವಿ.
14. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
15. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
16. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
17. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
19. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
20. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಅಭಿನಂದಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಇತ್ತೀಚಿನ ಬರಗಾಲ ಪರಿಸ್ಥಿತಿಯಿಂದ ಹಾನಿಯಾಗಿರುವ ಕುರಿತು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ಈ ಕೆಳಕಂಡಂತೆ ಸಭೆಗೆ ವಿವರಿಸಿದರು. ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಮಾಣ ಗಮನಿಸಿದಾಗ ಅಕ್ಟೋಬರ 2018 ರಿಂದ ಡಿಶೆಂಬರ 2018ರವರೆಗೆ 153 ಮೀ.ಮೀ. ವಾಡಿಕೆ ಮಳೆಯಾಗಬೇಕಿದ್ದು ವಾಸ್ತವಿಕವಾಗಿ 51 ಮೀ.ಮೀ. ಮಳೆಯಾಗಿದೆ. ಶೇ-67ರಷ್ಟು ಮಳೆ ಕೊರತೆಯಾಗಿದೆ. ತಾಲೂಕುವಾರು ಮಳೆಯ ಪ್ರಮಾಣವನ್ನು ಪರಿಶೀಲಿಸಿದಾಗ ಎಲ್ಲ ತಾಲೂಕುಗಳಲ್ಲಿ ಮಳೆಯ

ಕೊರತೆಯಿರುತ್ತದೆ. ಇದೇ ಪರಿಸ್ಥಿತಿ ಮುಂದುವರೆದಲ್ಲಿ ತೇವಾಂಶ ಕೊರತೆಯುಂಟಾಗಿ ಬೆಳೆಗಳು ಒಣಗುವ ಸಾಧ್ಯತೆಗಳಿವೆ. ಸರ್ಕಾರವು ಘೋಷಿಸಿರುವ ಮುಂಗಾರು ಹಂಗಾಮಿನ ರಾಮದುರ್ಗ, ಸವದತ್ತಿ, ಅಥಣಿ ಹಾಗೂ ಕಾಗವಾಡ ತಾಲೂಕುಗಳಲ್ಲಿ ಬರ ಪರಿಸ್ಥಿತಿಯಿಂದಾಗಿ ಬೆಳೆ ಹಾನಿಯಾದ ಬಗ್ಗೆ ಕೃಷಿ, ಕಂದಾಯ, ತೋಟಗಾರಿಕೆ ಇಲಾಖೆಗಳ ಜಂಟಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಿ ರಾಮದುರ್ಗ ತಾಲೂಕಿನಲ್ಲಿ 34,294ಹೆಕ್ಟೇರ್, ಸವದತ್ತಿ ತಾಲೂಕಿನಲ್ಲಿ 18358.77ಹೆಕ್ಟೇರ್, ಅಥಣಿ ತಾಲೂಕಿನಲ್ಲಿ 27895 ಹೆಕ್ಟೇರ್ ಹೀಗೆ ಒಟ್ಟು80547.77 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಿಂಗಾರು ಹಂಗಾಮಿನಲ್ಲಿ 3.32ಲಕ್ಷ ಹೆ.ಪ್ರದೇಶ ಬಿತ್ತನೆಯಾಗಬೇಕಿದ್ದು ಇದುವರೆಗೆ 2.92 ಲಕ್ಷ ಹೆ.ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಒಟ್ಟು 87.8% ರಷ್ಟು ಬಿತ್ತನೆಯಾಗಿದೆ. ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳು ಎಂದು ಮಾನ್ಯ ಸರ್ಕಾರದವರು ಘೋಷಣೆ ಮಾಡಿರುತ್ತಾರೆ. ಸದರಿ ವಿಷಯದ ಕುರಿತು ಬರ ಪರಿಸ್ಥಿತಿಯಿಂದಾಗಿ ಬೆಳೆ ಹಾನಿಯಾದ ಬಗ್ಗೆ ಕೃಷಿ,ಕಂದಾಯ, ತೋಟಗಾರಿಕೆ ಇಲಾಖೆಗಳ ಜಂಟಿ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ, 124126 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಬೆಳಗಾವಿ ಇವರು ಮಾತನಾಡಿ ಮುಂಗಾರಿ ಹಂಗಾಮಿನಲ್ಲಿ ಒಟ್ಟು 10788 ಹೆ. ಬಿತ್ತನೆ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು ಈ ಪೈಕಿ 8930 ಹೆ. ಬಿತ್ತನೆಯಾಗಿದ್ದು, ಒಟ್ಟು 82.8% ರಷ್ಟು ಬಿತ್ತನೆಯಾಗಿದೆ ಮತ್ತು ಬರಪರಿಸ್ಥಿತಿಯಿಂದಾಗಿ ಯಾವುದೇ ತೋಟಗಾರಿಕೆ ಬೆಳೆ ಹಾನಿಯಾಗಿರುವುದಿಲ್ಲ ಎಂದು ಸಭೆಗೆ ವಿವರಿಸಿದರು. ಹಿಂಗಾರಿ ಹಂಗಾಮಿನಲ್ಲಿ ಒಟ್ಟು 2430 ಹೆ. ಬಿತ್ತನೆ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು ಈ ಪೈಕಿ 608 ಹೆ. ಬಿತ್ತನೆಯಾಗಿದ್ದು, ಒಟ್ಟು 25.02% ರಷ್ಟು ಬಿತ್ತನೆಯಾಗಿದೆ ಎಂದು ಸಭೆಗೆ ತಿಳಿಸಿದರು.

ಉಪನಿರ್ದೇಶಕರು, ಪಶು ಪಾಲನೆ & ಪಶುವೈದ್ಯಕೀಯ ಸೇವಾ ಇಲಾಖೆ ಬೆಳಗಾವಿ ಇವರು ಬೆಳಗಾವಿ ಜಿಲ್ಲೆಯಲ್ಲಿ 2012ರ ಜಾನುವಾರುಗಳ ಗಣತಿಯಂತೆ ಒಟ್ಟು 14.22ಲಕ್ಷ ಜಾನುವಾರುಗಳಿದ್ದು, ರೈತರಲ್ಲಿ ಅಂದಾಜು 09 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯತೆಯಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಅಥಣಿ ತಾಲೂಕಿನ 08 ಗ್ರಾಮಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಲಾಗಿದೆ. ಮುಂಬರುವ ದಿನಗಳಲ್ಲಿ ಮೇವಿನ ಸಮಸ್ಯೆ ಎದುರಾದಲ್ಲಿ ಜಿಲ್ಲೆಯ ಬರಪೀಡಿತ ತಾಲೂಕುಗಳಲ್ಲಿ 41 ಗ್ರಾಮಗಳನ್ನು ಮತ್ತು ಆ ಗ್ರಾಮಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಬೇಕು ಎನ್ನುವ ಕುರಿತು ಸ್ಥಳವನ್ನು ಗುರುತಿಸಿ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಜಿಲ್ಲೆಯ ರೈತರಲ್ಲಿ ಮೇವಿನ ಲಭ್ಯತೆಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ನೀರಾವರಿ ಸೌಲಭ್ಯ ಹೊಂದಿದ ರೈತರಿಗೆ ಒಟ್ಟು 78632 ಮೇವಿನ ಕಿಟ್‌ಗಳನ್ನು ಹಂಚಿಕೆ ಮಾಡಿದ್ದು, ಪೂರೈಕೆಯಾದ ಮೇವಿನ ಮಿನಿಕಿಟ್ಟಗಳಿಂದ ಒಟ್ಟು 393160 ಮೆ.ಟನ್ ಹಸಿ ಮೇವಿನ ಇಳುವರಿ ಬರಬಹುದೆಂದು ಅಂದಾಜಿಸಲಾಗಿದ್ದು, ಈ ಮೇವು 03 ವಾರಗಳ ವರೆಗೆ ಸಾಕಾಗಬಹುದು ಎಂದು ಅಧ್ಯಕ್ಷರಿಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಮಾತನಾಡಿ 2018-19ನೇ ಸಾಲಿನಲ್ಲಿ ಮುಂಗಾರು & ಹಿಂಗಾರು ಮಳೆಯು ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೇ ಇರುವುದರಿಂದ ಮೇವು ಆಧಾರಿತ ಬಿತ್ತನೆ ಕ್ಷೇತ್ರವು ಕುಂಠಿತವಾಗಿರುವುದರಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯ ಜಾನುವಾರುಗಳಿಗೆ ಆಂತರಿಕ ಮೇವಿನ ಪ್ರಮಾಣವನ್ನು ಸರಿದೂಗಿಸುವ ಹಿತದೃಷ್ಟಿಯಿಂದ ಮತ್ತು ಜಿಲ್ಲೆಯಿಂದ ಹೊರ ರಾಜ್ಯಗಳಿಗೆ ಮೇವು

ಸಾಗಾಣಿಕೆ ಮಾಡುವುದನ್ನು ಹಾಗೂ ಒಣ ಮೇವುನ್ನು ಯಾವುದೇ ರೂಪದಲ್ಲಿ ಸಂಸ್ಕರಿಸಿ ಸಾಗಾಣಿಕೆ ಮಾಡುವುದನ್ನು, ಮಾನ್ಯ ಸರ್ಕಾರದ ಆದೇಶದ ದಿನಾಂಕ:23.12.2018 ರನ್ವಯ ದಿನಾಂಕ:31.05.2019ರ ಅವಧಿಯವರೆಗೆ ಜಿಲ್ಲೆಯಾದ್ಯಾಂತ ಮೇವು ಸಾಗಾಣಿಕೆಯನ್ನು ನಿಷೇಧಿಸಿ ಆದೇಶಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ ಇವರು ಮಾತನಾಡಿ ಪ್ರಸ್ತುತವಾಗಿ ಜಿಲ್ಲೆಯ ಅಥಣಿ ತಾಲೂಕಿನ 08 ಗ್ರಾಮಗಳ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು. ಅದೇ ರೀತಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ ಇವರು ಜಿಲ್ಲೆಯ ನಗರಪ್ರದೇಶಗಳಲ್ಲಿ ಸಧ್ಯಕ್ಕೆ ಯಾವುದೇ ನಗರ/ಪಟ್ಟಣಕ್ಕೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿಲ್ಲ ಎಂದು ಸಭೆಗೆ ವಿವರಿಸಿದರು.

ಮುಂದುವರೆದು ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಬೆಳಗಾವಿ ಇವರು ಮಾತನಾಡಿ ಮುಂಬರುವ ದಿನಗಳಲ್ಲಿ ಜಿಲ್ಲೆಯಾದ್ಯಾಂತ ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡಬಹುದಾದ ಸಮಸ್ಯಾತ್ಮಕ ಒಟ್ಟು 175 ಗ್ರಾಮಗಳನ್ನು ಗುರುತಿಸಿ, 150 ದಿನಗಳ ಕ್ರೀಯಾ ಯೋಜನೆಯನ್ನು ತಯಾರಿಸಲಾಗಿದೆ ಹಾಗೂ ಪ್ರತಿಯೊಂದು ಗ್ರಾಮದಲ್ಲಿ ಲಬ್ಯವಿರುವ ಹಾಗೂ ತುರ್ತು ಸಂದರ್ಭದಲ್ಲಿ ಬಾಡಿಗೆ ಆಧಾರದಲ್ಲಿ ತೆಗೆದುಕೊಳ್ಳಬಹುದಾದ ಖಾಸಗಿ ಕೊಳವೆ ಭಾವಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಸಿ.ಆರ್.ಎಫ್ ಅಡಿಯಲ್ಲಿ ಈಗಾಗಲೇ ಮುಂಗಾರು ಹಂಗಾಮಿನ 03 ಬರಪೀಡಿತ ತಾಲೂಕುಗಳಲ್ಲಿ ರೂ.148.50 ಲಕ್ಷಗಳ ಅಂದಾಜು ಮೊತ್ತದಲ್ಲಿ ಒಟ್ಟು 105 ಕಾಮಗಾರಿಗಳನ್ನು ಅನುಮೋದನೆಯನ್ನು ನೀಡಿ, ಶೇ 75ರಷ್ಟು ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ 60 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 45 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು. ಅಲ್ಲದೇ ಹಿಂಗಾರು ಹಂಗಾಮಿನಲ್ಲಿ ಬರಪೀಡಿತ ಎಂದು ಘೋಷಿತವಾದ ಬೆಳಗಾವಿ, ಖಾನಪೂರ, ಕಿತ್ತೂರ, ಬೈಲಹೊಂಗಲ ತಾಲೂಕುಗಳಲ್ಲಿ ಒಟ್ಟು ರೂ. 193.50ಲಕ್ಷಗಳ ಮೊತ್ದಲ್ಲಿ 138 ಕಾಮಗಾರಿಗಳನ್ನು ಅನುಮೋದನೆಯನ್ನು ನೀಡಲಾಗಿದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ. ತುರ್ತು ಕಾಮಗಾರಿಗಳು (ಟಾಸ್ಕ ಫೋರ್ಸ) ಯೋಜನೆಯಡಿ ರೂ. 650.00 ಲಕ್ಷಗಳ ಅಂದಾಜು ಮೊತ್ತದಲ್ಲಿ 337 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಈ ಪೈಕಿ 56 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು. ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 66 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿದ್ದು, ಸದರಿ ಯೋಜನೆಗಳಲ್ಲಿ ಒಟ್ಟು 552 ಗ್ರಾಮಗಳು ಒಳಗೊಂಡಿರುತ್ತವೆ ಎಂದು ತಿಳಿಸಿದರು. ಎನ್.ಆರ್.ಡಿ.ಡಬ್ಲ್ಯು.ಪಿ ಯೋಜನೆಯಡಿ 1442 ಮುಂದುವರೆದ ಕಾಮಗಾರಿಗಳು ಮತ್ತು 960 ಹೊಸ ಕಾಮಗಾರಿಗಳು ಇರುತ್ತವೆ. ಒಟ್ಟು ರೂ. 11268.61 ಲಕ್ಷ ಅನುದಾನ ಹಂಚಿಕೆಯಾಗಿದ್ದು ಈ ಪೈಕಿ ರೂ 8541.41 ಲಕ್ಷ ಅನುದಾನ ಖರ್ಚಾಗಿದೆ ಎಂದು ಸಭೆಗೆ ತಿಳಿಸಿದರು.

ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರು ಮಾತನಾಡಿ ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ನಗರ ಪ್ರದೇಶದಲ್ಲಿ ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು. ಕುಡಿಯುವ ನೀರು ಸರಬರಾಜು ಕುರಿತು ಒಟ್ಟು ರೂ.610.38 ಲಕ್ಷ ಅನುದಾನ ಲಭ್ಯವಿರುತ್ತದೆ ಇದರಲ್ಲಿ ಈವರೆಗೆ ರೂ.158.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ ಎಂದು ವಿವರಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಮಾತನಾಡಿ, ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಸರಬರಾಜಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಜಿಲ್ಲಾಡಳಿತ ಸರ್ವರೀತಿ ಸನ್ನದ್ಧವಾಗಿದೆ ಎಂದು ತಿಳಿಸಿದರು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರು ಮಾತನಾಡಿ ಮುಂಜಾಗೃತಾ ಕ್ರಮ ಹಾಗೂ ಅನಾವೃಷ್ಟಿಯ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

1. ಮಾನ್ಯ ಸರ್ಕಾರವು 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ, ರಾಮದುರ್ಗ, ಅಥಣಿ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಹಾಗೂ ಹಿಂಗಾರಿ ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಈ ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆ ಉಂಟಾಗದಂತೆ ಸಂಬಂಧಿಸಿದ ಕಂದಾಯ, ಪಂಚಾಯತರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಪಶುಪಾಲನೆ ಇಲಾಖೆಗಳ ಸಹಯೋಗದಲ್ಲಿ ಎಲ್ಲ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
2. ಸಧ್ಯಕ್ಕೆ ಜಿಲ್ಲೆಯಲ್ಲಿ ಅಥಣಿ ತಾಲೂಕಿನ 08 ಗ್ರಾಮಗಳ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದಾದ ಗ್ರಾಮಗಳನ್ನು ಗುರುತಿಸಿ, ಅಲ್ಲಿನ ಸಮಸ್ಯೆಗಳಿಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಒಂದು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸದರಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಂಡು ಸಮಸ್ಯೆಗಳು ಬರದಂತೆ ಕ್ರಮಗಳನ್ನು ಜರುಗಿಸಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಲ್ಲ ಕೈಗೊಂಡ ಕ್ರಮಗಳು ವಿಫಲವಾದ ನಂತರವೇ ಕೊನೆಯ ಪರಿಹಾರದ ಕ್ರಮವಾಗಿ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು ಎಂದು ಸಭೆಯಲ್ಲಿದ್ದ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ, ಕೋಶ ಬೆಳಗಾವಿ ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ, ಚಿಕ್ಕೋಡಿ ಇವರಿಗೆ ಸೂಚನೆಗಳನ್ನು ನೀಡಿದರು.
3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಹೆಚ್ಚಿನ ಮಾನವ ದಿನಗಳನ್ನು ಸೃಜನೆಯನ್ನು ಮಾಡಿ ಉದ್ಯೋಗ ಕೇಳಿಕೊಂಡು ಬರುವ ಜನರಿಗೆ ಉದ್ಯೋಗವನ್ನು ಒದಗಿಸಬೇಕು. ಜನರು ಉದ್ಯೋಗವಿಲ್ಲದೇ ಬೇರೆ ಕಡೆಗೆ ವಲಸೆ ಹೋಗದಂತೆ ಹಾಗೂ ಯಾವುದೇ ದೂರಗಳು ಬರಂದತೆ ಎಚ್ಚರಿಕೆಯನ್ನು ವಹಿಸಬೇಕು ಎಂದು ನಿರ್ದೇಶನಗಳನ್ನು ನೀಡಲಾಯಿತು.

4. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ ಇವರಿಗೆ ಸಿಆರ್ಎಫ್ ನಡಿ ಈಗಾಗಲೇ ಅನುಮೋದನೆ ನೀಡಿದ ಕಾಮಗಾರಿಗಳನ್ನು

ಪೂರ್ಣಗೊಳಿಸಿ, ಉಳಿದ ಶೇ25 ರಷ್ಟು ಅನುದಾನದ ಬಿಡುಗಡೆಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

5. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ ಇವರು ಟಾಸ್ಕ್‌ಫೋರ್ಸ್, ಎನ್‌ಆರ್‌ಡಿಡಬ್ಲುಪಿ, ಎಮ್‌ವ್ಹಿಎಸ್ ನಲ್ಲಿನ ಎಲ್ಲ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಮುಂಬರುವ ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅವಶ್ಯಕವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಅನವಶ್ಯಕವಾಗಿ ಟ್ಯಾಂಕರ ಮೂಲಕ ನೀರು ಪೂರೈಕೆ ಮಾಡುವುದನ್ನು ತಪ್ಪಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ಜರುಗಿಸಬೇಕು.
6. ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ, ಕೋಶ ಬೆಳಗಾವಿ ಇವರು ಕುಡಿಯುವ ನೀರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸ ಬೇಕು. ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಜರುಗಿಸತಕ್ಕದ್ದು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ವಿಭಾಗ,ಬೆಳಗಾವಿ

**ದಿನಾಂಕ:27.04.2019ರಂದು ಉಡುಪಿ ಜಿಲ್ಲಾಧಿಕಾರಿ ಕಛೇರಿಯ ಸಭಾಂಗಣದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 2018-19ನೇ ಸಾಲಿನ ಬರ ಪರಿಸ್ಥಿತಿ ಮತ್ತು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ನಡೆದ ಸಭೆಯ ನಡವಳಿ.**

**ಈ ಕೆಳಕಂಡ ಇಲಾಖೆಯಿಂದ ಅಧಿಕಾರಿಗಳು ಭಾಗವಹಿಸಿದ್ದರು**

- ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ
- ಯೋಜನಾ ನಿರ್ದೇಶಕರು ಕೋಶ ನಗಾರಭಿವೃದ್ಧಿ ಉಡುಪಿ
- ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ಉಡುಪಿ
- ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಉಡುಪಿ
- ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆ ಉಡುಪಿ
- ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಜತಾದ್ರಿ, ಉಡುಪಿ
- ಪೌರಾಯುಕ್ತರು, ನಗರಸಭೆ, ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ ಪರವಾಗಿ
- ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ, ಉಡುಪಿ ಪರವಾಗಿ
- ತಹಸೀಲ್ದಾರರು, ಉಡುಪಿ, ಕುಂದಾಪುರ, ಕಾರ್ಕಳ, ಬೈಂದೂರು ಹಾಗೂ ಬ್ರಹ್ಮಾವರ
- ಕಾರ್ಯನಿರ್ವಾಹಣಾಧಿಕಾರಿ, ತಾಲೂಕು ಪ0ಚಾಯತ್, ಉಡುಪಿ, ಕುಂದಾಪುರ ಹಾಗೂ ಕಾರ್ಕಳ

****

2018-19ನೇ ಸಾಲಿನ ಬರಪರಿಸ್ಥಿತಿ ಹಿನ್ನಲೆಯಲ್ಲಿ ಜಿಲ್ಲೆಯ ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳನ್ನು, ಬರಪೀಡಿತ ಪ್ರದೇಶಗಳೆಂದು ಘೋಷಿಸಿದ್ದು ಹಾಗೂ ಹೊಸದಾಗಿ ಸೃಜನೆಯಾದ ಬ್ರಹ್ಮಾವರ, ಬೈಂದೂರು, ಕಾಪು, ಹೆಬ್ರಿ ತಾಲ್ಲೂಕುಗಳು ಸಹ ಬರಪೀಡಿತ ಪ್ರದೇಶಗಳ ವ್ಯಾಪ್ತಿಗೆ ಒಳಪಟ್ಟಿದ್ದು ಈ ಬಗ್ಗೆ ಜಿಲ್ಲೆಯಲ್ಲಿ ದನಕರುಗಳಿಗೆ ಮೇವಿನ ತೊಂದರೆ ಇರುವುದಿಲ್ಲ ಹಾಗೂ ಗೋಶಾಲೆಗಳನ್ನು ತೆರೆಯುವ ಅವಶ್ಯಕತೆ ಇರುವುದಿಲ್ಲ. ಒಟ್ಟು 147117 ಮೆ.ಟನ್ ಮೇವಿನ ಲಭ್ಯತೆ ಇದ್ದು ಪ್ರಸ್ತುತ ಲಭ್ಯವಿರುವ ಮೇವುಗಳು 22 ವಾರಗಳಿಗೆ ಸಾಕಾಗಬಹುದಾಗಿದ್ದು ಮೇವಿನ ತೊಂದರೆ ಇರುವುದಿಲ್ಲ ಹಾಗೂ ಜಿಲ್ಲೆಯಲ್ಲಿ ಯಾವುದೇ ಗೋಶಾಲೆಗಳನ್ನು ತೆರೆಯಲಾಗಿರುವುದಿಲ್ಲ. ಜಿಲ್ಲೆಯಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿರುವುದರಿಂದ ಅಂತಹ ಗ್ರಾಮಗಳನ್ನು / ಪ್ರದೇಶಗಳನ್ನು ಗುರುತಿಸಿ ಅವಶ್ಯವಿದ್ದಲ್ಲಿ ಟ್ಯಾಂಕರ್‌ಗಳ ನೀರು ಸರಬರಾಜು ಮಾಡಲು ಕ್ರಮವಹಿಸಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 90 ಗ್ರಾಮ ಪಂಚಾಯತ್ ನ 128 ಗ್ರಾಮಗಳಲ್ಲಿ (ಉಡುಪಿ ತಾಲ್ಲೂಕಿನ 48, ಕುಂದಾಪುರ ತಾಲ್ಲೂಕಿನ 71 ಮತ್ತು ಕಾರ್ಕಳ ತಾಲೂಕಿನ 9 ಗ್ರಾಮಗಳು) ವ್ಯಾಪ್ತಿಯಲ್ಲಿ ಇದುವರೆಗೆ ಒಟ್ಟು 1886 ಟ್ರಿಪ್ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗಿದೆ. ಅದರಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಟ್ಯಾಂಕರ್ ನೀರು ಸರಬರಾಜು ಜಾಸ್ತಿಯಾಗಿದ್ದು ಸಮುದ್ರ ತೀರ ಪ್ರದೇಶದಲ್ಲಿ ಉಪ್ಪು ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ನೀರಿನ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ NRDWP ಟಾಸ್ಕ್ ಫೋರ್ಸ್ ಯೋಜನೆಯಡಿಯಲ್ಲಿ ಮೊದಲನೇ ಹಂತದಲ್ಲಿ ಪ್ರತಿ ತಾಲೂಕಿಗೆ ರೂ.50.00ಲಕ್ಷಗಳಂತೆ 3 ತಾಲ್ಲೂಕುಗಳಿಗೆ ಒಟ್ಟು ರೂ.150.00ಲಕ್ಷದ ಮೊತ್ತದ 85 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಅದರಲ್ಲಿ 26 ಕಾಮಗಾರಿಗಳು ಮುಕ್ತಾಯವಾಗಿದ್ದು 09 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಉಳಿದ 50 ಕಾಮಗಾರಿಗಳು ಪ್ರಾರಂಭ ಹಂತದಲ್ಲಿರುತ್ತದೆ ಮತ್ತು ಎರಡನೇ ಹಂತದಲ್ಲಿ ಪ್ರತಿ ತಾಲ್ಲೂಕಿಗೆ ರೂ.25.00 ಲಕ್ಷಗಳಂತೆ 3 ತಾಲ್ಲೂಕುಗಳಿಗೆ ಒಟ್ಟು ರೂ.150.00ಲಕ್ಷ ಹೆಚ್ಚುವರಿ ಬಿಡುಗಡೆಯಾಗಿರುತ್ತದೆ ಈ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚನೆ ನೀಡಿರುತ್ತಾರೆ ಅದರಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ನಗರ ಪ್ರದೇಶಗಳಲ್ಲಿ ಇದುವರೆಗೂ ಯಾವುದೇ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿಲ್ಲ ಎಲ್ಲಾ ಕಡೆಗಳಲ್ಲಿ ನೀರಿನ ಪೈಪ್ ಲೈನ್ ವ್ಯವಸ್ಥೆ ಮಾಡಲಾಗಿದ್ದು ಅದರ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ನೀರಿನ ಕಾಮಗಾರಿಗಳಿಗೆ ಸರ್ಕಾರದಿಂದ ಉಡುಪಿ ನಗರಸಭೆಗೆ ರೂ.25.00ಲಕ್ಷ, ಕುಂದಾಪುರ ಪುರಸಭೆಗೆ ರೂ.20.00 ಲಕ್ಷ , ಕಾರ್ಕಳ ಪುರಸಭೆಗೆ ರೂ.20.00 ಲಕ್ಷ, ಕಾಪು ಪುರಸಭೆಗೆ ರೂ.20.00 ಲಕ್ಷ ಮತ್ತು ಸಾಲಿಗ್ರಾಮ.ಪ.ಪಂಚಾಯತ್ ಗೆ ರೂ.15.00 ಲಕ್ಷದಂತೆ ಒಟ್ಟು ರೂ.100.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಸರ್ಕಾರದ ಆದೇಶದಂತೆ ಕ್ರಿಯಾಯೋಜನೆ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್‌ನಲ್ಲಿ ಅನುಮೋದನೆ ಪಡೆದುಕೊಂಡು ಆಡಳಿತ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭ ಹಂತದಲ್ಲಿರುತ್ತದೆ. ಉಡುಪಿ ನಗರಸಭೆ ಪ್ರದೇಶಗಳಿಗೆ ಸ್ವರ್ಣ ನದಿಯ ಬಜೆ ಅಣೆಕಟ್ಟಿನಿಂದ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಈಗ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ಸ್ವರ್ಣ ನದಿಯ ಬಜೆ ಅಣೆಕಟ್ಟಿನಲ್ಲಿ ಇರುವ ಹೊಂಡಗಳಿಂದ ನೀರನ್ನು ಪಂಪು ಮಾಡುವ ಅವಶ್ಯಕತೆ ಇದ್ದು, ಅಂದಾಜು ಮೊತ್ತ ರೂ.80.00 ಲಕ್ಷ ಅನುದಾನ ಬೇಕಾಗುವುದಾಗಿ ಯೋಜನ ನಿರ್ದೇಶಕರು ನಗಾರಭಿವೃದ್ಧಿ ಕೋಶಉಡುಪಿ ಇವರು ಸೂಚಿಸಿದರು ಈ ಬಗ್ಗೆ ಅನುದಾನ ಬಿಡುಗಡೆ ಕೋರಿ ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ ಇವರಿಗೆ ಪತ್ರ ಬರೆಯುವಂತೆ ಸೂಚಿಸಲಾಯಿತು.

ಕುಡಿಯುವ ನೀರಿನ ಸಮಸ್ಯೆ ಮತ್ತು ಜಾನುವಾರುಗಳ ಮೇವು ಲಭ್ಯತೆ ಹಾಗೂ ಬರ ಪರಿಸ್ಥಿತಿ ನಿರ್ವಹಣೆಯ ಕುರಿತು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರ ಅಧಕ್ಷತೆಯಲ್ಲಿ ಕಾರ್ಯನಿರ್ವಾಣಾಧಿಕಾರಿ, ತಾಲೂಕು ಪಂಚಾಯತ್, ಸಹಾಯಕ ಅಭಿಯಂತರರು ಕುಡಿಯುವ ನೀರು, ಮೆಸ್ಕಾಂ, ಕೃಷಿ ಹಾಗೂ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳುಳ್ಳ

ಸಮಿತಿ ರಚಿಸಲಾಗಿದ್ದು ಸದರಿ ಸಮಿತಿಯವರು ಪ್ರತಿ ಶನಿವಾರ ತಾಲ್ಲೂಕು ಮಟ್ಟದ ಸಭೆಯನ್ನು ಜಿಲ್ಲೆಗೆ ಬರ ಪರಿಸ್ಥಿತಿ ನಿರ್ವಹಣೆಗೆ ರೂ.6.00 ಕೋಟಿ ಅನುದಾನ ಬಿಡುಗಡೆಗೊಂಡಿರುತ್ತದೆ ಸದರಿ ಅನುದಾನವನ್ನು ಮುಂದಿನ ದಿನಗಳಲ್ಲಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಿದ ಬಿಲ್ ಗಳನ್ನು ಭರಿಸಲು ಕ್ರಮಕೈಗೊಳ್ಳಲಾಗುವುದು ಹಾಗೂ ತುರ್ತು ಕುಡಿಯುವ ನೀರಿನ ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ವಹಿಸಲಾಗಿದೆ.

ಕುಡಿಯವ ನೀರಿನ ಸಮಸ್ಯೆಯನ್ನು ನಿಯಂತ್ರಿಸಲು ಮತ್ತು ಸಮರ್ಪಕವಾಗಿ ನಿರ್ವಹಿಸಲು ತುರ್ತು ಕ್ರಮ ಕೈಗೊಳ್ಳುವ ಸಲುವಾಗಿ 24X7 ಮಾದರಿಯಲ್ಲಿ ಕಂಟ್ರೋಲ್ ರೂಂಗಳನ್ನು ಸಂಬಂಧ ಪಟ್ಟ ಎಲ್ಲಾ ಕಛೇರಿಯಲ್ಲಿ ತೆರೆಯುವುದು ಹಾಗೂ ಈ ಬಗ್ಗೆ ಪ್ರಚಾರಪಡಿಸಿ ಸಾರ್ವಜನಿಕರಿಂದ ದಾಖಲಾಗುವ ದೂರುಗಳ ಮೇಲೆ ತಕ್ಷಣ ಕ್ರಮ ಕೈಗೊಂಡು ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆಯನ್ನು ವಹಿಸಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸದಂತೆ ನೋಡಿಕೊಳ್ಳುವಂತೆ ತಾಲೂಕು ತಹಶೀಲ್ದಾರ್‌ರರು ಮತ್ತು ಕಾರ್ಯನಿರ್ವಾಹಣಾಧಿಕಾರಿಯವರಿಗೆ ಸೂಚಿಸಲಾಯಿತು ಹಾಗೂ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಪ್ರತಿ ಟ್ಯಾಂಕರ್ ಗಳಿಗೆ GPS ಅಳವಡಿಸಿರುವುದರಿಂದ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ ನಿಯಂತ್ರಣ ಮಾಡಲು ಸಾಧ್ಯವಾಗುತ್ತದೆ ಅದುದರಿಂದ ನೀರು ಸರಬರಾಜು ಮಾಡುವ ಎಲ್ಲಾ ಟ್ಯಾಂಕರ್ ಗಳಿಗೆ GPS ಅಳವಡಿಸಿರುವುದು ಉತ್ತಮ ಎಂದು ತಿಳಿಸಿದರು.

2018ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ಬಿಡುಗಡೆಯಾಗಿರುವ ರೂ.14.54ಕೋಟಿ ಅನುದಾನಕ್ಕೆ ಸಂಬಂಧಿಸಿದಂತೆ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದ್ದು, ಅನುಷ್ಠಾನಾಧಿಕಾರಿಗಳಾದ ಲೋಕೋಪಯೋಗಿ ಇಲಾಖೆಗೆ ನೀಡಲಾದ ರೂ.868.00ಲಕ್ಷದ 34 ಕಾಮಗಾರಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ನೀಡಲಾದ ರೂ.117.00ಲಕ್ಷದ 22 ಕಾಮಗಾರಿಗಳು ಮುಕ್ತಾಯಗೊಳಿಸಿ ಬಿಲ್ ಪಾವತಿಯಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರೂ.375.00ಲಕ್ಷದ 106 ಕಾಮಗಾರಿಗಳನ್ನು ನೀಡಲಾಗಿದ್ದು ಅದರಲ್ಲಿ 45 ಕಾಮಗಾರಿಗಳು ಮುಕ್ತಾಯಗೊಂಡಿದ್ದು ಉಳಿದ 61 ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ ಹಾಗೂ ನೀರಾವರಿ ಇಲಾಖೆಗೆ ಬಿಡುಗಡೆಯಾದ ರೂ.94.00 ಲಕ್ಷದ 6 ಕಾಮಗಾರಿಗಳನ್ನು ಪ್ರಗತಿಯ ಹಂತದಲ್ಲಿರುತ್ತದೆ, ಪ್ರವಾಹ ಪರಿಹಾರ ಕಾಮಗಾರಿಗಳನ್ನು ತುರ್ತು ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಸಿ ಈ ಎಲ್ಲಾ ಕಾಮಗಾರಿಗಳು ಅತೀ ಶೀಘ್ರದಲ್ಲಿ ಮುಕ್ತಾಯಗೊಳಿಸುವಂತೆ ಸೂಚನೆ ನೀಡಲಾಯಿತು.

**ದಿನಾಂಕ: 27.04.2019 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ (ಎಂಎಸ್‌ಎಂಇ & ಗಣಿ) ಇಲಾಖೆ ಹಾಗೂ ಉಡುಪಿ ಜಿಲ್ಲಾ ಮರಳು ಉಸ್ತುವಾರಿ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಉಡುಪಿ ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನಾ ಸಭೆಯ ನಡವಳಿ.**

**ಈ ಕೆಳಕಂಡ ಇಲಾಖೆಯಿಂದ ಅಧಿಕಾರಿಗಳು ಭಾಗವಹಿಸಿದ್ದರು**

- ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ
- ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಜತಾದ್ರಿ, ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ ಪರವಾಗಿ
- ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ

****

ಜಿಲ್ಲಾಧಿಕಾರಿಯವರು, ಸಭೆಯಲ್ಲಿ ಉಪಸ್ಥಿತರಿದ್ದ, ಮಾನ್ಯ ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಸಭೆಯ ಕಾರ್ಯಸೂಚಿಯಂತೆ ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

1. ಉಡುಪಿ ಜಿಲ್ಲೆಯ ಮರಳಿನ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಚರ್ಚಿಸಿದ್ದು, ಈ ಕುರಿತು ಹಿರಿಯ ಭೂವಿಜ್ಞಾನಿಯವರು ಮಾತನಾಡುತ್ತಾ, ಪ್ರಸ್ತುತ ಜಿಲ್ಲಾ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಆರ್.ಐ.ಡಿ.ಎಲ್ ರವರು ಇಲ್ಲಿಯವರೆಗೂ ಮರಳುಗಾರಿಕೆ ನಡೆಸಿರುವ ಮರಳಿನ ಪ್ರಮಾಣ ಹಾಗೂ ನಿರ್ಮಿತಿ ಕೇಂದ್ರದಿಂದ ವಿತರಿಸಲಾದ ಮರಳು ಪ್ರಮಾಣ ಒಳಗೊಂಡಂತೆ ಒಟ್ಟು 23,912 ಮೆ.ಟನ್ ಆಗಿದ್ದು, ಸದರಿಯವರು ಇದುವರೆಗೂ ಪೂರೈಸಲಾದ ಮರಳಿನ ಪ್ರಮಾಣ ಒಟ್ಟು 16,552.192 ಮೆ.ಟನ್ ಹಾಗೂ ಪ್ರಸ್ತುತ ದಾಸ್ತಾನು ಕೇಂದ್ರದಲ್ಲಿ ಶೇಖರಿಸಲಾಗಿರುವ ಮರಳಿನ ಪ್ರಮಾಣ ಒಟ್ಟು 7,359.808 ಮೆ.ಟನ್ ಮರಳು ಲಭ್ಯವಿದ್ದು ಹಾಗೂ ಸಿಆರ್ ಝಡ್ ವ್ಯಾಪ್ತಿಯಲ್ಲಿ ಇಬ್ಬರು ತಾತ್ಕಾಲಿಕ ಮರಳುಗಾರರಿಂದ ಮರಳನ್ನು ಸರ್ಕಾರಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ಈಗಾಗಲೇ ಪೂರೈಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

2. ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಿಂದ ವಿವಿಧ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಮರಳು ಬ್ಲಾಕ್‌ಗಳ ಪ್ರಗತಿಯ ಬಗ್ಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಕೇಳಲಾಗಿ, ಲೋಕೋಪಯೋಗಿ ಇಲಾಖೆ, ಕೆ.ಆರ್.ಐ.ಡಿ.ಎಲ್ ಇಲಾಖೆಯವರು ನಮಗೆ ವಹಿಸಿರುವ ಮರಳು ಬ್ಲಾಕ್‌ಗಳಲ್ಲಿ ತಲಾ 2 ಮರಳು ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಸಿ, ಸರ್ಕಾರಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

3. ಈ ಸಂದರ್ಭದಲ್ಲಿ ಮಾನ್ಯ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಉಳಿದ ಮರಳು ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಸಲು ಕೂಡಲೇ ಅಗತ್ಯ ಕ್ರಮಕೈಗೊಂಡು ಜಿಲ್ಲೆಯಲ್ಲಿ ಸುಲಭವಾಗಿ ಮರಳು ವಿತರಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು.

4. ಮುಂದುವರೆದು, ನಾನ್ ಸೀಆರ್ ಝಡ್ ಪ್ರದೇಶದಲ್ಲಿ ಈಗಾಗಲೇ 02 ಮರಳು ಬ್ಲಾಕ್‌ಗಳಿಗೆ ಟೆಂಡರ್ ಡ್ಯಾಕ್ಯೂಮೆಂಟ್‌ನಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು/ ಮಾನದಂಡಗಳನ್ನು ಬಿಡ್‌ದಾರರು ಪರಿಪೂರ್ಣವಾಗಿ ಸಲ್ಲಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಯನ್ನು ಹೊಂದಿದ್ದರಿಂದ ನಿಯಮಾನುಸಾರವಾಗಿ ಮುಂದಿನ ಟೆಂಡರ್ ಪ್ರಕ್ರಿಯೆ ಮುಂದುವರಿಸಿದ್ದು ಸದರಿ ಬಿಡ್‌ದಾರರು ಇ-ಆಕ್ಷನ್‌ನ ಲೈವ್ ಬಿಡ್ ಅನ್ನು ದಿನಾಂಕ:08.03.2019 ರಂದು ನಡೆಸಲಾಗಿರುತ್ತದೆ. ನಂತರ ಲೋಕಸಭಾ ಸಾರ್ವತ್ರಿಕ ಚುನಾವಣಾ-2019 ರ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಮುಂದಿನ ಪ್ರಕ್ರಿಯೆ ಮುಂದುವರೆಸಿರುವುದಿಲ್ಲ. ಆದರೆ ಈ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಎಸ್/06/ಎಸ್‌ಸಿಎಂ/2019 ದಿನಾಂಕ:08.04.2019ರ ಪತ್ರದಲ್ಲಿನ ಅಂಶಗಳಂತೆ ಮೂಲಭೂತ ಸೌಲಭ್ಯ, ಅಭಿವೃದ್ಧಿ ಕಾಮಗಾರಿಗಳು ಮತ್ತು ಸರಕು ಮತ್ತು ಸೇವೆಗಳ ಖರೀದಿ ಸಂಬಂಧಿಸಿದಂತೆ ಟೆಂಡರ್ ಗಳನ್ನು ಆಹ್ವಾನಿಸುವುದು, ಟೆಂಡರ್ ಗಳನ್ನು ಅಂತಿಮಗೊಳಿಸುವುದು ಹಾಗೂ ಕಾರ್ಯದೇಶಗಳನ್ನು ನೀಡುವ ಕುರಿತ ಪ್ರಸ್ತಾವನೆಗಳಿಗೆ ಮಾದರಿ ನೀತಿ ಸಂಹಿತೆಯಿಂದ ವಿನಾಯಿತಿ ನೀಡಲು ತಿಳಿಸಲಾಗಿರುವ ಬಗ್ಗೆ ಚರ್ಚಿಸಲಾಗಿ, ಮೇಲ್ಕಂಡಂತೆ ಸರ್ಕಾರದ ಸುತ್ತೋಲೆ ಪತ್ರದಲ್ಲಿ ಮಾದರಿ ನೀತಿ ಸಂಹಿತೆಯಿಂದ ವಿನಾಯಿತಿ ಕೋರಿ ಬಾಕಿ ಇರುವ ಟೆಂಡರ್ ಪ್ರಸ್ತಾವನೆಗಳನ್ನು ಪರಿಶೀಲನಾ ಸಮಿತಿಯ ಮುಂದೆ ಮಂಡಿಸುವ ಬದಲು, ದಿನಾಂಕ:23.04.2019 ರ ನಂತರ ಅಂದರೆ, ಕರ್ನಾಟಕದಲ್ಲಿ ಕೊನೆಯ ಮತದಾನ ದಿನಾಂಕದ ನಂತರ ಅವುಗಳ ಬಗ್ಗೆ ಸಕ್ಷಮ ಪ್ರಾಧಿಕಾರಗಳು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ. ಆದ್ದರಿಂದ ಸದರಿ ಮರಳು ಬ್ಲಾಕ್‌ಗಳಿಗೆ ಈಗಾಗಲೇ ಇ-ಆಕ್ಷನ್ ಲೈವ್ ಬಿಡ್‌ವರೆಗೂ ಟೆಂಡರ್ ಪ್ರಕ್ರಿಯೆ ಆಗಿರುವುದರಿಂದ ಸರ್ಕಾರದ ಸುತ್ತೋಲೆಯ ವಿಷಯಗಳಂತೆ ಜಿಲ್ಲಾಡಳಿತದಿಂದ ಮುಂದಿನ ಪ್ರಕ್ರಿಯೆಯನ್ನು ಕೈಗೊಂಡು ಮುಂದುವರೆಸಲು ಸರ್ಕಾರದ ಕಾರ್ಯದರ್ಶಿಯವರು ತಿಳಿಸಿದರು.

5. ಉಡುಪಿ ಜಿಲ್ಲೆಯ ಕರಾವಳಿ ನಿಯಂತ್ರಣಾ ವಲಯದಲ್ಲಿ (CRZ) ಗುರುತಿಸಿರುವ ಮರಳು ದಿಬ್ಬಗಳನ್ನು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ((KSCZMA)) ಬೆಂಗಳೂರು ರವರಿಂದ ಸ್ವೀಕೃತವಾಗಿರುವ ನಿರಾಕ್ಷೇಪಣಾ ಪತ್ರದನ್ವಯ 8 ಮರಳು ದಿಬ್ಬಗಳನ್ನು ತೆರವುಗೊಳಿಸುವ ಕುರಿತು ಚರ್ಚಿಸಲು ದಿನಾಂಕ 14.03.2019 ರಂದು ಜಿಲ್ಲಾ 7 ಸದಸ್ಯರ ಸಮಿತಿ ಸಭೆಯನ್ನು ನಿಗದಿಪಡಿಸಲಾಗಿತ್ತು. ಲೋಕಸಭಾ ಸಾರ್ವತ್ರಿಕ ಚುನಾವಣೆ -2019 ರ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಹಾಗೂ ಜಿಲ್ಲಾ 7 ಸದಸ್ಯರ ಸಮಿತಿಯಲ್ಲಿ ಒಬ್ಬರು ಮೀನುಗಾರಿಕಾ ಸಮುದಾಯ ಹಾಗೂ ಇನ್ನಿಬ್ಬರು ಸರ್ಕಾರಿ ಅಧಿಕಾರಿ ಹೊರತುಪಡಿಸಿದ ವ್ಯಕ್ತಿಗಳಿರುವುದರಿಂದ ಸದರಿ ಜಿಲ್ಲಾ 7 ಸದಸ್ಯರ ಸಮಿತಿಯ ಸಭೆಯನ್ನು ನಡೆಸಬಹುದೇ,ಎಂಬುದರ ಬಗ್ಗೆ ಮಾರ್ಗದರ್ಶನ ಪಡೆದು ಮುಂದಿನ ಕ್ರಮವಹಿಸುವ ಸಂಬಂಧ ಸಭೆಯನ್ನು ಮುಂದೂಡಲಾಗಿರುವ ಬಗ್ಗೆ ಚರ್ಚಿಸಲಾಯಿತು.

**6.** ಈ ಕುರಿತು ಮಾನ್ಯ ಸರ್ಕಾರದ ಕಾರ್ಯದರ್ಶಿಯವರು (ಎಂ.ಎಸ್.ಎಂ.ಇ & ಗಣಿ) ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ, ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಸಿಎಸ್/**06**/ಎಸ್‌ಸಿಎಂ/2019 ದಿನಾಂಕ 08.04.2019 ರ ಪತ್ರದಲ್ಲಿನ ಅಂಶಗಳಂತೆ ಮೂಲಭೂತ ಸೌಲಭ್ಯ, ಅಭಿವೃದ್ಧಿ ಕಾಮಗಾರಿಗಳು ಮತ್ತು ಸರಕು ಮತ್ತು ಸೇವೆಗಳ ಖರೀದಿಗೆ ಸಂಬಂಧಿಸಿದಂತೆ ಟೆಂಡರ್ ಗಳನ್ನು ಆಹ್ವಾನಿಸುವುದು, ಟೆಂಡರ್ ಗಳನ್ನು ಅಂತಿಮಗೊಳಿಸುವುದು ಹಾಗೂ ಕಾರ್ಯದೇಶಗಳನ್ನು ನೀಡುವ ಕುರಿತ ಪ್ರಸ್ತಾವನೆಗಳಿಗೆ ಮಾದರಿ ನೀತಿ ಸಂಹಿತೆಯಿಂದ ವಿನಾಯಿತಿ ನೀಡಲು ತಿಳಿಸಿರುವ ಬಗ್ಗೆ ಚರ್ಚಿಸಲಾಯಿತು.

**7.** ಮೇಲ್ಕಂಡಂತೆ ಸರ್ಕಾರದ ಸುತ್ತೋಲೆ ಪತ್ರದಲ್ಲಿ ಮಾದರಿ ನೀತಿ ಸಂಹಿತೆಯಿಂದ ವಿನಾಯಿತಿ ಕೋರಿ ಬಾಕಿ ಇರುವ ಟೆಂಡರ್ ಪ್ರಸ್ತಾವನೆಗಳನ್ನು ಪರಿಶೀಲನಾ ಸಮಿತಿಯ ಮುಂದೆ ಮಂಡಿಸುವ ಬದಲು, ದಿನಾಂಕ: 23.04.2019 ರ ನಂತರ ಅಂದರೆ, ಕರ್ನಾಟಕದಲ್ಲಿ ಕೊನೆಯ ಮತದಾನ ದಿನಾಂಕದ ನಂತರ ಅವುಗಳ ಬಗ್ಗೆ ಸಕ್ಷಮ ಪ್ರಾಧಿಕಾರಗಳು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ.

**8.** ಆದರೆ, ಪ್ರಸ್ತುತ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ (KSCZMA) ಬೆಂಗಳೂರು ರವರಿಂದ ಸ್ವೀಕೃತವಾಗಿರುವ ನಿರಾಕ್ಷೇಪಣಾ ಪತ್ರದಲ್ಲಿನ ಅಂಶಗಳನ್ವಯ ಟೆಂಡರ್ ಪ್ರಸ್ತಾವನೆ ವ್ಯಾಪ್ತಿಯಲ್ಲಿ ಬಾರದೇ ಇರುವ ಪ್ರಯುಕ್ತ ಸೀಆರ್ಝ ಡ್ ವ್ಯಾಪ್ತಿಯಲ್ಲಿನ (KSCZMA) ಬೆಂಗಳೂರು ರವರಿಂದ 8 ಮರಳು ದಿಬ್ಬಗಳನ್ನು ತೆರವುಗೊಳಿಸಲು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿನ ಅನುಮತಿಯಂತೆ ಜಿಲ್ಲಾ 7 ಸದಸ್ಯರ ಸಮಿತಿ ಸಭೆಯನ್ನು ನಡೆಸಿ, ಸದರಿ 8 ಮರಳು ದಿಬ್ಬಗಳನ್ನು ತೆರವುಗೊಳಿಸಲು ಸಾಂಪ್ರದಾಯಿಕ ಮರಳು ಪರವಾನಿಗೆದಾರರಿಗೆ ಮರಳು ದಿಬ್ಬಗಳನ್ನು ಹಂಚಿಕೆ ಮಾಡಲು ಮುಂದಿನ ಪ್ರಕ್ರಿಯೆಯನ್ನು ಕೈಗೊಳ್ಳಬಹುದೇ ಎಂಬುದರ ಬಗ್ಗೆ ಸೂಕ್ತ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನ ಕೋರಿದ್ದಲ್ಲಿ, ಮುಂದಿನ ಕ್ರಮವಹಿಸುವ ಬಗ್ಗೆ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನ ನೀಡಲಾಗುವುದೆಂದು ಸರ್ಕಾರದ ಕಾರ್ಯದರ್ಶಿಯವರು ತಿಳಿಸಿದರು.

**9.** ಪ್ರಸ್ತುತ ಜಿಲ್ಲೆಯಲ್ಲಿ ಮರಳಿನ ಸಮಸ್ಯೆಯನ್ನು ಪರಿಹರಿಸಲು ಸಂಬಂಧಿಸಿದ ಎಲ್ಲಾ ಇಲಾಖೆಯವರಿಗೆ ಈಗಾಗಲೇ ಹಂಚಿಕೆ ಮಾಡಿರುವ ಮರಳು ಬ್ಲಾಕ್‌ಗಳಲ್ಲಿ ಕೂಡಲೇ ಮರಳುಗಾರಿಕೆ ಪ್ರಾರಂಭಿಸಿ, ಅಭಿವೃದ್ಧಿ ಕಾಮಗಾರಿಗಳಿಗೆ, ಕಡಿಮೆ ವರಮಾನದ ವಸತಿ ಯೋಜನೆಗಳಿಗೆ ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ಮರಳು ಸಿಗುವಂತೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆಂದು ಮಾನ್ಯ ಸರ್ಕಾರದ ಕಾರ್ಯದರ್ಶಿಯವರಿಗೆ ಮಾಹಿತಿ ನೀಡಿದರು.

ಅಂತಿಮವಾಗಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾರ್ಯದರ್ಶಿಯವರ ಅಪ್ಪಣೆ ಮೇರೆಗೆ ವಂದಾನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಎಂ.ಮಹೇಶ್ವರ್ ರಾವ್)**
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತೀ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.**

**-:ಮೈಸೂರು ಜಿಲ್ಲೆ:-**

| ಕ್ರ ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆಯ ಹೆಸರು | ಮೈಸೂರು |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು. | ಡಾ॥ ಜಿ.ಕಲ್ಪನ, ಭಾ.ಆ.ಸೇ., |
| 3. | ಭೇಟಿಯಾದ /ಪ್ರವಾಸದ ದಿನಾಂಕ. | 29-04-2019 ಹಾಗೂ 30-04-2019 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು. | ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:26-4-2019ರಂದು ನಡೆದ ಕೆ.ಡಿ.ಪಿ. ಸಭೆಯಲ್ಲಿ ನೀಡಿದ ಸೂಚನೆಗಳನ್ವಯ ದಿನಾಂಕ:29-4-2019 ಹಾಗೂ 30-4-2019ರಂದು ಮೈಸೂರು ಜಿಲ್ಲೆಗೆ ಭೇಟಿ ನೀಡಿರುತ್ತೇನೆ.<br><br>ಸದರಿ ಭೇಟಿಯ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳೊಂದಿಗೆ ಬರ ಪರಿಹಾರ ಕಾರ್ಯಕ್ರಮಗಳು, ಹವಾಮಾನ ಪರಿಸ್ಥಿತಿ, ಕುಡಿಯುವ ನೀರಿನ ಪರಿಸ್ಥಿತಿ, ಮೇವು ಪರಿಸ್ಥಿತಿ ಹಾಗೂ ನರೇಗಾ ಕಾರ್ಯಕ್ರಮಗಳ ಕುರಿತು ಚರ್ಚಿಸಿರುತ್ತೇನೆ.<br><br>ಮೈಸೂರು ಜಿಲ್ಲೆಯಲ್ಲಿ ಭಾಗಶ: ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ಪಿರಿಯಾಪಟ್ಟಣದಲ್ಲಿ ಗ್ರಾಮ ಪಂಚಾಯತಿ ವತಿಯಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಸಂದರ್ಭ ಉಂಟಾಗಿರುವುದಿಲ್ಲ. ಆದರೆ, ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಬಹುದಾದ ಸಂದರ್ಭ ಬಂದಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.<br><br>ಅತಿ ಮುಖ್ಯವಾಗಿ ಕುಡಿಯುವ ನೀರಿಗೆ ಯಾವುದೇ ರೀತಿಯಾದ ಸಮಸ್ಯೆ ಉಂಟಾಗದಂತೆ ಆದ್ಯತೆ ನೀಡಿ, ಅಗತ್ಯವಿದ್ದ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಬಗ್ಗೆ ಕ್ರಮ ವಹಿಸಲು ಹಾಗೂ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.<br><br>ಮೈಸೂರು ಜಿಲ್ಲೆಯಲ್ಲಿ ಸದ್ಯದಲ್ಲಿ ಮೇವಿಗೆ ಯಾವುದೇ ಸಮಸ್ಯೆ ಇರುವುದಿಲ್ಲ. ಸರ್ಕಾರವು ನೀಡಿರುವ ಮೇವಿನ ಕಿಟ್ ಅನ್ನು ಸದುಪಯೋಗ ಪಡೆದುಕೊಂಡು ಮೇವು ಬೆಳೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. |

| | | |
|---|---|---|
| | | ಮುಂಬರುವ ಮುಂಗಾರು ಮಳೆಯಿಂದ ಆಗಬಹುದಾದ ಅನಾಹುತಗಳನ್ನು ತಪ್ಪಿಸಲು ಈಗಿನಿಂದಲೇ ಎಲ್ಲಾ ಇಲಾಖೆಗಳು ಚರ್ಚಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವಂತೆ ಹಾಗೂ ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸುಸಜ್ಜಿತವಾಗಿ ಇಟ್ಟುಕೊಂಡು ಅವುಗಳ ದೂರವಾಣಿ ಸಂಖ್ಯೆಯನ್ನು ಪ್ರಚಾರ ಮಾಡಿ, ದೂರುಗಳು ಸ್ವೀಕೃತವಾದ ಬಗ್ಗೆ ಒಂದು ವಹಿಯಲ್ಲಿ ದಾಖಲಿಸಿಕೊಂಡು ಅವುಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.<br><br>ಬೇಸಿಗೆ ಸಮಯದಲ್ಲಿ ನರೇಗಾ ಯೋಜನೆಯಲ್ಲಿ ಹೆಚ್ಚು ಗುರಿಯನ್ನು ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. |

Kalpana. G

(ಡಾ॥ ಜಿ.ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಡಾ॥ ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:30-04-2019ರಂದು ಮಧ್ಯಾಹ್ನ 12-00ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣ, ತುಮಕೂರು ಇಲ್ಲಿ ನಡೆದ ಬರ ಪರಿಹಾರ ಹಾಗೂ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

****

**ಹಾಜರಿ: (ಹಾಜರಾತಿ ವಹಿಯಲ್ಲಿದ್ದಂತೆ)**

***

ಸಭೆಯ ಪ್ರಾರಂಭದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ಸಭೆಯ ಮಾನ್ಯ ಅಧ್ಯಕ್ಷರನ್ನು, ಜಿಲ್ಲಾ/ತಾಲ್ಲೂಕು ಮಟ್ಟದ ಎಲ್ಲಾ ಆಹ್ವಾನಿತ ಅಧಿಕಾರಿಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಹೃತೂರ್ವಕವಾಗಿ ಸ್ವಾಗತಿಸಿದರಲ್ಲದೆ, ಮಾನ್ಯ ಅಧ್ಯಕ್ಷರು ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಆರ್ಟ್ ಆಫ್ ಲಿವಿಂಗ್ ವತಿಯಿಂದ ರಾಜ್ಯದ ಗದಗ ಜಿಲ್ಲೆಯಲ್ಲಿ ನದಿಗಳ ಜೋಡಣೆ ಮಾಡಿ ನೀರಿನ ಸಂಗ್ರಹಣೆ ಮತ್ತು ನೀರು ಪೂರೈಕೆಗೆ ಅತ್ಯುತ್ತಮ ಅವಕಾಶ ಕಲ್ಪಿಸಿರುವ ಕುರಿತು ಸಭೆಗೆ ತಿಳಿಸುತ್ತಾ, ಸದರಿ ಸಂಸ್ಥೆಯ ವತಿಯಿಂದ ಆಗಮಿಸಿದ್ದ ನಿರ್ದೇಶಕರಿಂದ ಯೋಜನೆಯ ತಂತ್ರಜ್ಞಾನದ ಕುರಿತು ಪ್ರಾತ್ಯಕ್ಷಿಕೆಯ ಮೂಲಕ ಸಭೆಗೆ ಮಾಹಿತಿ ಪೂರೈಸಿದರು. ಮುಂದುವರೆದು ಮಾತನಾಡುತ್ತಾ, 6 ಯೋಜನೆಗಳನ್ನು (ಮಳೆ ನೀರು ಕೊಯ್ಲು, ಇಂಗು ಗುಂಡಿ, ಬಜ್ಜಲನೀರು ಸಂಗ್ರಹಣೆ, ನದಿ ಜೊಡಣೆ, ಕೆರೆಗಳ ಜೋಡಣೆ, ಕಂಪಾರ್ಟ್‌ಮೆಂಟ್ ಬಂಡಿಂಗ್ಸ್) ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಿದರೆ ಹೆಚ್ಚಿನ ನೀರು ಸಂಗ್ರಹವಾಗಿ ಮುಂದಿನ ದಿನಗಳಲ್ಲಿ ನೀರಿಗೆ ಅತ್ಯಂತ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಪ್ರಸ್ತುತ ಭೀಕರ ಬರಗಾಲವಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು 24*7 ಆಧಾರದಲ್ಲಿ ಸಹಾಯವಾಣಿಯನ್ನು (ದೂರವಾಣಿ ಸಂಖ್ಯೆ.0816-2260202) ವ್ಯವಸ್ಥೆಗೊಳಿಸಲಾಗಿದ್ದು ಈವರೆಗೆ 300 ದೂರುಗಳನ್ನು ಸ್ವೀಕರಿಸಲಾಗಿದ್ದು, ಸದರಿ ದೂರುಗಳ ಮೇರೆಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಪಿ.ಡಿ.ಒ.ಗಳಿಂದ ಆ ಗ್ರಾಮಗಳಲ್ಲಿನ ಕುಡಿಯುವ ನೀರಿನ ಸಮಸ್ಯೆಯ ನೈಜ ವರದಿಯನ್ನು ನೀಡಲು ತಿಳಿಸಿ ಅಂದೇ ಸಮಸ್ಯೆ ಬಗೆಹರಿಸಲು ಕ್ರಮವಹಿಸಲಾಗಿದೆ; ಜೊತೆಗೆ ದಿನಾಂಕ:10-03-2019ರಿಂದ ಇಂದಿನವರೆಗೂ ಸಂಬಂಧಪಟ್ಟ ಕ್ಷೇತ್ರಾಧಿಕಾರಿಗಳೊಂದಿಗೆ ವಿಡಿಯೋ ಸಂವಾದವನ್ನು ನಡೆಸಲಾಗುತ್ತಿದೆ; ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಒಂದಾದ ನಂತರ ಒಂದರಂತೆ ಎಲ್ಲಾ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ; ಕೊರೆಯಲಾದ ಕೊಳವೆಬಾವಿಗಳಿಗೆ ಪಂಪು-ಮೋಟಾರು ಅಳವಡಿಸಿ ವಿದ್ಯುತ್ತೀಕರಣ ಸೌಲಭ್ಯವನ್ನೂ ಸಹ ಕಲ್ಪಿಸಲಾಗಿದೆ; ಕುಡಿಯುವ ನೀರಿಗೆ ಸಮಸ್ಯೆ ಉದ್ಭವಿಸಿದ 24 ಗಂಟೆಗಳೊಳಗೆ ಟ್ಯಾಂಕರ್‌ಗಳ ಮೂಲಕ ನೀರು ಒದಗಿಸಲಾಗುತ್ತಿದೆ; 77 ಗ್ರಾಮಗಳಲ್ಲಿ ಈವರೆಗೆ 186

ನೀರು ದೊರೆತಿರಲಿಲ್ಲವಾದ್ದರಿಂದ ಸಧ್ಯ ಯೋಜನೆಯ ಅನುಷ್ಠಾನಕ್ಕಾಗಿ ಸದರಿ ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಸಭೆಗೆ ತಿಳಿಸುತ್ತಾ, ನುಡಿಗಟ್ಟಿನ ಮೂಲಕ ನೀರಿನ ಸಾಂಧ್ರತೆಯ ಕುರಿತು ಸಭೆಗೆ ವಿವರಿಸಿದರು. ಮಳೆ ನೀರು ಸಂಗ್ರಹಣೆ ಮತ್ತು ನೀರಿನ ಇಂಗುವಿಕೆಯ ಕುರಿತು ಸಭೆಗೆ ಸ್ವಾರಸ್ಯವಾಗಿ ವಿವರಿಸಿದರು. ಮಳೆನೀರು ಮತ್ತು ಬಚ್ಚಲು ನೀರಿನ ಸಂಬಂಧ ಪ್ರತಿ ಮನೆಗೊಂದು ಇಂಗು ಬಾವಿ(ನುಂಗು ಬಾವಿ)ಯನ್ನು ನಿರ್ಮಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೆಯೇ ರೈನ್ ವಾಟರ್ ಹಾರ್ವೆಸ್ಟಿಂಗ್ ಅನ್ನು ಅಳವಡಿಸಿಕೊಳ್ಳಬೇಕು; ಇದರಿಂದಾಗಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ಪದ್ಯರೂಪದಲ್ಲಿ ಹಾಡಿ ಮನದಟ್ಟು ಮಾಡಿಸಿದರು. ಈ ಯೋಜನೆಯು ಜನರಿಂದ-ಜನರಿಗಾಗಿ-ಜನರಿಗೋಸ್ಕರವಾಗಿ ನಡೆದರೆ ಮಾತ್ರ ಭಾರತ ದೇಶ ಸಮೃದ್ಧ ರಾಷ್ಟ್ರವಾಗಲು ಸಾಧ್ಯ ಎಂದು ಸ್ಪಷ್ಟಪಡಿಸಿದರು. ನಂತರ ಮಾತನಾಡಿ, ಕೇಂದ್ರ ಸರ್ಕಾರದ ಈ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕ-ಯುವತಿಯರು ಭಾಗವಹಿಸಿ ಯೋಜನೆಯನ್ನು ಸಾರ್ಥಕಗೊಳಿಸಬೇಕೆಂದು ಕರೆನೀಡಿದರು.

ನೀರು ಎಂದರೆ ನೀ-ಇರು ಎಂದರ್ಥ; ಆದ್ದರಿಂದ ಜನ ಬೆಂಬಲ/ಸಹಕಾರ ನೀಡುವುದಾದರೆ ಅವರು ತುಮಕೂರು ಜಿಲ್ಲೆಯಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಶ್ರಮಿಸಲು ಸಿದ್ಧರಿರುವುದಾಗಿ (ಮಗನ ಬಾವಿ, ಅಪ್ಪನ ಬಾವಿ ಮತ್ತು ತಾತನ ಬಾವಿಗಳನ್ನು ಪ್ರಾತ್ಯಕ್ಷಿಕೆಯಲ್ಲಿ ತೋರಿಸಿ ಇಂದಿನ ದಿನಗಳಲ್ಲಿಯೂ ನೀರಿನ ಅತ್ತ್ಯುತ್ತಮ ಸಂಗ್ರಹಣೆಗಾಗಿ ತಾತನ ಬಾವಿಯನ್ನು ನಿರ್ಮಿಸಿಕೊಡಲು ಸಿದ್ಧರಿರುವುದಾಗಿ)ಸಭೆಗೆ ಭರವಸೆಯಿತ್ತರು. ಭೂಮಿಯ ವಿವಿಧ ಪದರಗಳಲ್ಲಿನ ನೀರಿನ ಸೆಲೆಯ ಕುರಿತು ಸಭೆಗೆ ವಿವರಿಸಿದರು. ಪ್ರಸ್ತುತ ಗ್ರಾಮ ಪಂಚಾಯಿತಿಗಳಲ್ಲಿ ದಿನ ಒಂದಕ್ಕೆ 10 ಲೀಟರ್‌ನಂತೆ ನೀರು ಒದಗಿಸಿದರೆ ಅದರಲ್ಲಿ 03 ಲೀಟರ್ ನೀರು ಕುಡಿಯಲು ಬಳಕೆಯಾಗುತ್ತದೆ, ಉಳಿದ ನೀರು ವ್ಯರ್ಥವಾಗುತ್ತದೆ; ಸ್ನಾನದ ನೀರು ಕೂಡ ಒಳ್ಳೆಯ ನೀರಾಗಿದ್ದು, ಸೋಪಿನಲ್ಲಿರುವ ಫಾಸ್ಫೇಟ್ ಅಂಶ ಗೊಬ್ಬರಕ್ಕೆ ಒಳ್ಳೆಯದು ವಿಶೇಷವಾಗಿ ತೆಂಗಿನ ಗಿಡಕ್ಕೆ ಒಳ್ಳೆಯದು; ಭೂಮಿಯು ಬೃಹದಾಕಾರದ ನೈಸರ್ಗಿಕ ಫಿಲ್ಟರ್ ಆಗಿರುವುದರಿಂದ ಸುತ್ತ-ಮುತ್ತಲಿನ ನೀರು ಕೊಳವೆಬಾವಿಗೆ ಹೋಗುತ್ತದೆಯಾದ್ದರಿಂದ ಪ್ರತಿ ಮನೆಗೊಂದು ಇಂಗು ಗುಂಡಿಯನ್ನು ನಿರ್ಮಿಸಿಕೊಳ್ಳಲೇಬೇಕು ಎಂದು ಸಲಹೆಯಿತ್ತರು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೂ.3.50ಲಕ್ಷ ಖರ್ಚಿನಲ್ಲಿ ಇಂಗು ಗುಂಡಿ-ನುಂಗು ಗುಂಡಿ ನಿರ್ಮಿಸಿರುವ ಕುರಿತು (ಸಂಗ್ರಹಣೆ + ಶೋಧಿಸುವಿಕೆ + ಸಂರಕ್ಷಣೆ) ಪ್ರಾತ್ಯಕ್ಷಿಕೆಯ ಮೂಲಕ ಸಭೆಗೆ ತಿಳಿಸಿದರು. ಈ ಯೋಜನೆಯ ಅನುಷ್ಠಾನದಿಂದ ಒಂದು ವರ್ಷ ಒಳ್ಳೆಯ ಮಳೆಯಾದರೆ, 14 ಎಕರೆ ಪ್ರದೇಶದಲ್ಲಿ ಮೂರು ವರ್ಷ ಸತತ ಒಳ್ಳೆಯ ಬೆಳೆಯಾಗುತ್ತದೆ ಎಂದು ಸಭೆಗೆ ವಿವರಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಯೋಜನೆಯ ಉಪಯುಕ್ತತೆಯ ಬಗ್ಗೆ ಅಧಿಕಾರಿಗಳಿಗೆ ಮನವರಿಕೆಯಾಗಿದ್ದು, ಸಮಯಾಭಾವವಿರುವ ಕಾರಣ ಯೋಜನೆಯ ತಂತ್ರಜ್ಞಾನದ ಕುರಿತು ಸೂಕ್ಷ್ಮವಾಗಿ ಸಭೆಗೆ ತಿಳಿಸುವಂತೆ ಕೋರಿದರು. ಅದರಂತೆ, ಸಂಸ್ಥಾಪಕ ನಿರ್ದೇಶಕರು, ಜಲಶ್ರೀ ಸಮೃದ್ಧಿ ಫೌಂಡೇಷನ್, ಬೆಂಗಳೂರು ಇವರು ಮಾತನಾಡಿ;

1. Surface water recharging(in apartments)
2. Sub soil & deep soil recharge ( small sump & borewell recharge )
3. sub soil & ground water recharge (small borewell of schools & House)

4. Ground water recharge(big sump borewell recharge with a cost of Rs.49,000/-)
5. ಲೇಕ್‌ಟೈಪ್ ಬೋರ್‌ವೆಲ್ ರೀಚಾರ್ಜಿಂಗ್
6. ಆನ್‌ಲೈನ್ ಫೀಲ್ಟರ್ ಆನ್ ಬಿಲ್ಡಿಂಗ್‌ವಾಲ್ (With a cost of Rs.6,500/- per filter) (ಈ ನೀರು ಕುಡಿದರೆ ಹೃದಯದ ಸಮಸ್ಯೆ, ಕಿಡ್ನಿ ಸಮಸ್ಯೆ ಮತ್ತು ಆಸ್ತಮಾ ಖಾಯಿಲೆಗಳು ಬರುವುದಿಲ್ಲ) ಇತ್ಯಾದಿ ಅಂಶಗಳ ಕುರಿತು ಸಭೆಗೆ ಸವಿಸ್ತಾರವಾಗಿ ವಿವರಿಸಿದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ವತಿಯಿಂದ ನಿರ್ವಹಿಸಲಾಗುವ Ground water rechargeಗೆ ರೂ.85,000/- ವೆಚ್ಚವಾಗುತ್ತಿರುವುದಾಗಿ ತಿಳಿಸಿದ ಮೇರೆಗೆ ಮಾನ್ಯ ಅಧ್ಯಕ್ಷರು ಮಾತನಾಡಿ, ರೈನ್ ವಾಟರ್ ಹಾರ್ವೆಸ್ಟಿಂಗ್ ಮತ್ತು ಗ್ರೇ ವಾಟರ್ ಹಾರ್ವೆಸ್ಟಿಂಗ್ ಕಂಬೈನ್ ಮಾಡಿಕೊಳ್ಳಬೇಕಾದ ಅಗತ್ಯತೆಯಿದ್ದು, ತತ್ಸಂಬಂಧ ಗ್ರಾ.ಕು.ನೀ.ನೈ.ವಿಭಾಗದ ಇಂಜಿನಿಯರ್‌ಗಳು ಫೌಂಡೇಷನ್‌ನ ಸಂಸ್ಥಾಪಕರೊಂದಿಗೆ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದು, ಸದರಿ ತೀರ್ಮಾನದ ಕುರಿತು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಗಮನಕ್ಕೆ ಮಾಹಿತಿ ನೀಡಬೇಕೆಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಜಿಲ್ಲೆಯಲ್ಲಿ 600 ಕಡೆಗಳಲ್ಲಿ ಅರ್ದನ್ ಡ್ಯಾಂ ಮಾಡಲು ಅಗತ್ಯತೆ ಇದ್ದು ಫ್ಲೋ ಮತ್ತು ಸ್ಲೋಪ್ ಪ್ರಕಾರ ಮಾಡಿದರೆ ಎಷ್ಟು ಎಕರೆ ಪ್ರದೇಶಕ್ಕೆ ಪ್ರಯೋಜನವಾಗುತ್ತದೆ ಎಂಬ ಕುರಿತು ಸಂಸ್ಥಾಪಕರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು. ಹಾಗೆಯೇ, ಸಣ್ಣ ನೀರಾವರಿ ಇಲಾಖೆಯಡಿ ಅಸ್ತಿತ್ವದಲ್ಲಿರುವ/ನೀರು ನಿಲ್ಲದ ಚೆಕ್‌ಡ್ಯಾಂಗಳ ಪಟ್ಟಿ ಮಾಡಿಕೊಂಡು ಸಂಸ್ಥಾಪಕರೊಂದಿಗೆ ಚರ್ಚಿಸುವಂತೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ನಂತರ, ಲೋಕೋಪಯೋಗಿ ಇಲಾಖೆವತಿಯಿಂದ ನಿರ್ಮಿಸಲಾಗಿದ್ದ ಹಳೆಯ ಸೇತುವೆಗಳನ್ನು ಪರಿಶೀಲಿಸುವಂತೆ ಸದರಿ ಇಲಾಖೆಯ ಅಧಿಕಾರಿಯವರಿಗೆ ತಿಳಿಸಿದರು. ನಂತರ ಮಾತನಾಡಿ, ಆನ್‌ಲೈನ್ ಫೀಲ್ಟರ್ ಆನ್ ಬಿಲ್ಡಿಂಗ್‌ವಾಲ್ ಯೋಜನೆಯನ್ನು ಕೆ.ಐ.ಎ.ಡಿ.ಬಿ. ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಿ, ಸದರಿ ಯೋಜನೆಯ ಕುರಿತು ಸವಿವರವಾದ ಮಾಹಿತಿ ಪಡೆದರು. ಮುಂದುವರೆದು ಮಾತನಾಡುತ್ತಾ, ಲೇಕ್‌ಟೈಪ್ ರೀಚಾರ್ಜಿಂಗ್ ತುಮಕೂರು ನಗರದ ಅಮಾನಿಕೆರೆಯನ್ನು ಅಭಿವೃದ್ಧಿಪಡಿಸಲು ಸ್ಮಾರ್ಟ್‌ಸಿಟಿ ವತಿಯಿಂದ ತುರ್ತು ಕ್ರಮವಹಿಸುವಂತೆ ಸ್ಮಾರ್ಟ್‌ಸಿಟಿ ಅಧಿಕಾರಿಗಳಿಗೆ ತಿಳಿಸಿದರು.

ಸಂಸ್ಥಾಪಕ ನಿರ್ದೇಶಕರು ಮಾತನಾಡಿ, ಇಂಗು ಗುಂಡಿ – ನುಂಗು ಗುಂಡಿಯ ವಿನ್ಯಾಸದ ಕುರಿತು ಸಭೆಗೆ ಪರಿಪೂರ್ಣವಾಗಿ ವಿವರಿಸಿದರು. ಮುಂದುವರೆದು ಮಾತನಾಡುತ್ತಾ, ಭೂಮಿಯ ಇಳಿಜಾರನ್ನು ಆಧರಿಸಿ 4–00ಎಕರೆ ವಿಸ್ತೀರ್ಣದವರೆಗೆ ಕಂಪಾರ್ಟ್‌ಮೆಂಟ್ ಬಂಡಿಂಗ್‌ಗಳನ್ನು ಮಾಡಬಹುದು ಎಂದು ಪ್ರಾತ್ಯಕ್ಷಿಕೆಯ ಮೂಲಕ ಸಭೆಗೆ ಮನದಟ್ಟು ಮಾಡಿಸಿದರು. ಪೂರಕವಾಗಿ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ನೆಡು ತೋಪು, ಬಂಡಿಂಗ್‌ಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಕಂಪಾರ್ಟ್‌ಮೆಂಟ್ ಬಂಡಿಂಗ್‌ಗಳನ್ನು ನಿರ್ಮಿಸಲು ತಿಳಿಸಿದರು. ಉತ್ತರವಾಗಿ ಜಂಟ ಕೃಷಿ ನಿರ್ದೇಶಕರು ಮಾತನಾಡಿ, ಈ ಯೋಜನೆಯ ಅನುಷ್ಠಾನದಿಂದ ಫಲಿತಾಂಶ ಒಳ್ಳೆಯದಾಗಿದ್ದರೂ ಸಹ ಕೆಲವರು ಕಂಪಾರ್ಟ್‌ಮೆಂಟ್ ಬಂಡಿಂಗ್‌ಗನ್ನು ಒಪ್ಪುವುದಿಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಇಲಾಖಾವತಿಯಿಂದ ನಿರ್ಮಿಸಲ್ಪಡುವ ಕೃಷಿಹೊಂಡಗಳಿಗೂ ಹಾಗೂ ಜಲಶ್ರೀ ಸಮೃದ್ಧಿ ಫೌಂಡೇಷನ್‌ವತಿಯಿಂದ ನಿರ್ಮಿಸಲ್ಪಡುವ ಕೃಷಿಹೊಂಡಗಳಿಗೂ ಇರುವ ವ್ಯತ್ಯಾಸದ ಕುರಿತು ವಿವರವಾದ ಮಾಹಿತಿ ಪಡೆದರು. ಹಾಗೂ ಕೊಳಾಯಿ ನೀರು ಸರಬರಾಜು ಯೋಜನೆಯ ಒ.ಹೆಚ್.ಟಿ.ಗಳ ಸುತ್ತ ಇಂಗು ಗುಂಡಿಗಳನ್ನು ನಿರ್ಮಿಸುವುದರಿಂದಲೂ ಒಳ್ಳೆಯ ನೀರು ಸಂಗ್ರಹಣೆಯಾಗುವುದೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಗ್ರಾ.ಕು.ನೀ.ನೈ, ವಿಭಾಗದ ವತಿಯಿಂದ ಪಿಟ್‌ಗಳನ್ನು ರೀ ಚಾರ್ಜ್ ಮಾಡಿರುವ ಮತ್ತು ಬತ್ತಿ ಹೋಗಿರುವ ಕೊಳವೆಬಾವಿಗಳ ಕುರಿತು ಮಾಹಿತಿ ಪಡೆದು ಸಂಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚಿಸಿ ಸೂಕ್ತ ಮಾರ್ಗದರ್ಶನ ಪಡೆಯುವಂತೆ ಗ್ರಾ.ಕು.ನೀ.ನೈ.ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಸಭೆಯಲ್ಲಿ ಪತ್ರಿಕಾ ಮಾಧ್ಯಮದವರು ಉಪಸ್ಥಿತರಿರುವುದರಿಂದ ಈ ಯೋಜನೆಯ ಅನುಷ್ಠಾನದ ಕುರಿತು ಜನಸಾಮಾನ್ಯರಿಗೆ ಅರ್ಥವಾಗುವ ನಿಟ್ಟಿನಲ್ಲಿ ಮಾಹಿತಿ ತಿಳಿಸುವಂತೆ ಸಂಸ್ಥಾಪಕ ನಿರ್ದೇಶಕರನ್ನು ಕೋರಿದರು. ಅದರಂತೆ ಸಂಸ್ಥಾಪಕ ನಿರ್ದೇಶಕರು ವಿವಿಧ ಪ್ರಾತ್ಯಕ್ಷಿಕೆಗಳೊಂದಿಗೆ ಸಭೆಗೆ ಸೂಕ್ತ ಮಾಹಿತಿಯನ್ನು ನೀಡಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ನದಿಗಳ ಅಚ್ಚುಕಟ್ಟು ಪ್ರದೇಶಗಳನ್ನು ಆಧರಿಸಿ ಗದಗ ಮತ್ತು ಮಹಾರಾಷ್ಟ್ರಗಳಲ್ಲಿ ಅನುಷ್ಟಾನಗೊಳಿಸಿರುವ ಯೋಜನೆಯ ಉದ್ದೇಶದ ಕುರಿತು ಸಭೆಗೆ ವಿವರವಾಗಿ ತಿಳಿಸುವಂತೆ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ಆಗಮಿಸಿದ್ದ ಪ್ರತಿನಿಧಿಯವರನ್ನು ಕೋರಿದರು. ಅದರಂತೆ ಸದರಿ ಪ್ರತಿನಿಧಿಯವರು ಮಾತನಾಡಿ, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ವತಿಯಿಂದ ವೇದವತಿ, ಕುಮುದ್ವತಿ ಮತ್ತು ಪಾಲಾರ್ ನದಿಯ ಅಚ್ಚುಕಟ್ಟು ಪ್ರದೇಶಗಳ ವ್ಯಾಪ್ತಿಯ 8 ವಿವಿಧ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 210 ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಅಭಿವೃದ್ಧಿಪಡಿಸಿರುವುದಾಗಿ ಹಾಗೂ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನರಗುಂದ ಗ್ರಾಮದಲ್ಲಿಯೂ ಸಹ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ನರೇಗಾ ಯೋಜನೆಯಡಿ ಕಾಮಗಾರಿಗಳಿಗೆ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿ ನದಿಗಳಲ್ಲಿನ ಹೂಳು ತೆಗೆಸಬೇಕು ಎಂದು ತಿಳಿಸಿ ಸಿಂದಿಗೆರೆಯಲ್ಲಿ ಅನುಷ್ಟಾನಗೊಳಿಸಲಾಗಿರುವ ಕಾಮಗಾರಿಯನ್ನು ಉದಾಹರಿಸಿ, ಯೋಜನೆಯ ತಂತ್ರಜ್ಞಾನದ (ಸಬ್‌ಸರ್‌ಪೇಸ್‌ಟೈಪ್, ರೀಚಾರ್ಜ್‌ವೆಲ್, ಮೈಕ್ರೋವಾಟರ್‌ಶೆಡ್ (ಅನುಕ್ರಮವಾಗಿ 5 ಅಂಶಗಳನ್ನಾಧರಿಸಿ ರೀಚಾರ್ಜ್ ಮಾಡಿದರೆ ಸತತ 10 ವರ್ಷಗಳ ಕಾಲ ಸಮರ್ಪಕ ವಾಗಿ ಕಾರ್ಯನಿರ್ವಹಿಸುತ್ತದೆ) ) ಕುರಿತು ಪ್ರಾತ್ಯಕ್ಷಿಕೆಗಳೊಂದಿಗೆ ಸಭೆಗೆ ಸೂಕ್ತ ಮಾಹಿತಿಯನ್ನು ನೀಡಿದರು. ಮುಂದುವರೆದು ಮಾತನಾಡುತ್ತಾ, ನರೇಗಾ ಕಾರ್ಯಕ್ರಮದಡಿ ಸಾಕಷ್ಟು ಸಮಸ್ಯೆಯೂ ಆಗಿರುವುದಾಗಿ ಸಭೆಯ ಗಮನಕ್ಕೆ ತರುತ್ತಾ ಕೆಲವೊಂದು ಸಮಸ್ಯೆಗಳ ಕುರಿತು ಸಭೆಗೆ ಬೆಳಕು ಚೆಲ್ಲಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಜಯಮಂಗಲಿ ನದಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿ., ತುಮಕೂರು ರವರಿಂದ ಮಾಹಿತಿ ಪಡೆದರು. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರತಿನಿಧಿಯವರು ಮಾತನಾಡಿ, ಪ್ರಸ್ತುತ, ಮಾರ್ಕೋನಹಳ್ಳಿ, ಮಂಗಳ ಮತ್ತು ಶಿಂಷಾ ಸೇರಿದಂತೆ ಮೂರು ಯೋಜನೆಗಳನ್ನು ವಹಿಸಲಾಗಿದೆ; ಜೊತೆಗೆ ಈಗ ತುಮಕೂರು–ರಾಮನಗರ ಮತ್ತು ಮಂಡ್ಯ ಜಿಲ್ಲೆಗಳಿಗೆ ಯೋಜನೆ ರೂಪಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸದರಿ ಯೋಜನೆಯ ಕುರಿತು ಗ್ರಾಮ ಪಂಚಾಯತಿ ಮತ್ತು ಅನುಷ್ಠಾನ

ಏಜೆನ್ಸಿಯವರೊಂದಿಗೆ ಚರ್ಚಿಸಿ ತೀರ್ಮಾನಿಸುವುದಾಗಿ ಸಭೆಗೆ ಭರವಸೆಯಿತ್ತರು. ಪೂರಕವಾಗಿ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಕುರಿತು ಅತ್ಯಂತ ತ್ವರಿತವಾಗಿ ಚರ್ಚಿಸಿ ಸಂವಾದ ಮತ್ತು ತರಬೇತಿಗೆ ದಿನಾಂಕವನ್ನು ನಿಗಧಿಪಡಿಸಿ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಮಳೆಗಾಲಕ್ಕೆ ಮುಂಚಿತವಾಗಿಯೇ ಯೋಜನೆಯನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರತಿನಿಧಿಯವರು ಮಾತನಾಡಿ, ಬಿ.ಎಫ್.ಟಿ.ಗಳ ಹುದ್ದೆ ತಾತ್ಕಾಲಿಕವಾಗಿರುವುದರಿಂದ ಸದ್ಯಕ್ಕೆ ಬಿ.ಎಫ್.ಟಿ.ಗಳ ಕೊರತೆ ಇರುವುದಾಗಿ ಸಭೆಯ ಗಮನಕ್ಕೆ ತಂದ ಮೇರೆಗೆ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಎನ್.ಆರ್.ಎಲ್.ಎಂ. ಕಾರ್ಯಕ್ರಮದಡಿ ಈಗಾಗಲೇ ಸಿದ್ಧಪಡಿಸಲಾಗಿರುವ ಪಟ್ಟಿಯನ್ವಯ ತರಬೇತಿ ನೀಡಲು ಪ್ರಾರಂಭಿಸುವಂತೆ ಯೋಜನಾ ನಿರ್ದೇಶಕರಿಗೆ ತಿಳಿಸಿದರು. ಅದರಂತೆ ಮತ್ತಿತರ ಸರ್ಕಾರೇತರ ಸಂಘ ಸಂಸ್ಥೆಗಳ ಸದಸ್ಯರುಗಳಿಗೆ ತರಬೇತಿ ನೀಡಲು ಸಂಬಂಧಪಟ್ಟವರಿಂದ ದಿನಾಂಕಗಳನ್ನು ಪಡೆದು ತರಬೇತಿಗೆ ಕ್ರಮವಹಿಸುವಂತೆ ತಿಳಿಸಿದರು. ಹಾಗೆಯೇ, ಎನ್.ಆರ್.ಎಲ್.ಎಂ. ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಯಾವುದಾದರೂ ಯೋಜನೆಗೆ ಜೋಡಣೆ (ಲಿಂಕ್) ಮಾಡಿದರೆ ಶಾಶ್ವತ ಅವಕಾಶ ಸಿಗಬಹುದೇ ಎಂಬುದರ ಕುರಿತು ಪ್ರಸ್ತಾಪಿಸಿದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರತಿನಿಧಿಯವರು ಮಾತನಾಡಿ, Women empowerment ಪ್ರಕಾರ ಮಹಿಳೆಯರಿಗೆ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗಿರುವ ಕುರಿತು ಪ್ರಾತ್ಯಕ್ಷಿಕೆಯ ಮೂಲಕ ಸಭೆಗೆ ಮಾಹಿತಿ ವಿವರಿಸಿದರು.

ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ನೀರಿನ ಸಮಸ್ಯೆಯ ಕುರಿತಾದ ಸಹಾಯವಾಣಿಯ ಬಗ್ಗೆ, ಬೆಳೆನಷ್ಟ ಪರಿಹಾರದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಪಶುಪಾಲನಾ ಇಲಾಖೆಯಡಿ ಮೇವಿನ ಲಭ್ಯತೆ/ಕೊರತೆಯ ಬಗ್ಗೆ ಹಾಗೂ ಬೈಬ್ಯಾಕ್ ಆಧಾರದಲ್ಲಿ ಮೇವು ಖರೀದಿಗೆ ಕ್ರಮವಹಿಸಿರುವ ಬಗ್ಗೆ ಸಭೆಗೆ ಪರಿಪೂರ್ಣ ಮಾಹಿತಿ ಒದಗಿಸಿದರು. ಮುಂದುವರೆದು ಮಾತನಾಡುತ್ತಾ, ಪಾವಗಡ ತಾಲ್ಲೂಕು ನಾಗಲಮಡಿಕೆ, ಸಿ.ಕೆ.ಪುರ ಮತ್ತು ವೈ.ಎನ್.ಹೊಸಕೋಟೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದ್ದು, ಮುಂದಿನ 12 ವಾರಗಳವರೆಗೆ ಸಾಕಾಗುವಷ್ಟು ಮೇವಿನ ದಾಸ್ತಾನು ಇರುವುದಾಗಿ ತಿಳಿಸಿ, ವಿವರವಾದ ಅಂಕಿ-ಅಂಶಗಳನ್ನು ಒದಗಿಸಿದರು. ಪೂರಕವಾಗಿ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರು ಮಾತನಾಡಿ, ಶೇಕಡ 80%ರಷ್ಟು ಮೇವಿನ ಸಮಸ್ಯೆಯನ್ನು ಇತ್ಯರ್ಥಪಡಿಸಲಾಗಿದ್ದು, ಇನ್ನೂ ಶೇಕಡ 20%ರಷ್ಟು ಮೇವಿನ ಕೊರತೆ ಇರುವುದಾಗಿ ಸಭೆಗೆ ಸ್ಪಷ್ಟಪಡಿಸಿದರು.

ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ಸಣ್ಣ ಪ್ರಾಣಿಗಳಿಗೆ ಮೇವನ್ನು ಸಣ್ಣ-ಸಣ್ಣದಾಗಿ ಕತ್ತರಿಸಿ ಹಾಕಲು ಅಗತ್ಯವಿರುವ ಮೇವುಕಟರ್ ಬಗ್ಗೆ ಪ್ರಸ್ತಾಪಿಸುತ್ತಾ, ಈ ಕುರಿತು ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು; ಮುಂದುವರೆದು, ಪಾವಗಡ ತಾಲ್ಲೂಕಿನಲ್ಲಿ ಮೇವುಕಟರನ್ನು ಹೊಂದಿರುವ ಒಬ್ಬ ವೆಂಡರ್‌ದಾರನು ಮೇವನ್ನು ಸಣ್ಣದಾಗಿ ಕತ್ತರಿಸಿ ಬಾಡಿಗೆ ಆಧಾರದಲ್ಲಿ ಮೇವು ಬ್ಯಾಂಕ್‌ಗಳಿಗೆ ಸರಬರಾಜು ಮಾಡಲು ಒಪ್ಪಿದ್ದು. ಪ್ರತಿಯಾಗಿ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದಿಂದ ಸೂಕ್ತ ನಿರ್ದೇಶನ ಬರುವವರೆಗೆ ಪ್ರಾಣಿಗಳಿಗೆ ಮೇವು ಸರಬರಾಜು ಮಾಡಲು ವಿಳಂಬವಾಗುವುದು ಬೇಡ; ಆದುದರಿಂದ ಈಗ ಮೇವು ಕಟರನ್ನು ಹೊಂದಿರುವ ರೈತನಿಗೆ ಕನಿಷ್ಠ ರೂ.20/-ರಂತೆ ಛಾಪಿಂಗ್ ಚಾರ್ಜ್ ನೀಡಿ ಮೇವು

ಸರಬರಾಜು ಪಡೆಯಲು ಕ್ರಮವಹಿಸುವಂತೆ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಯವರು ಮಾತನಾಡಿ, ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಇತ್ಯರ್ಥದ ಬಗ್ಗೆ ಕ್ರಮವಹಿಸಿರುವ ಕುರಿತು ಸಭೆಗೆ ಮಾಹಿತಿ ನೀಡಿದರು. ಪೂರಕವಾಗಿ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಕಳೆದ ಸಭೆಯ ತೀರ್ಮಾನದಂತೆ ಕುಡಿಯುವ ನೀರಿನ ಸಮಸ್ಯೆಯ ಇತ್ಯರ್ಥಕ್ಕೆ ಅಗತ್ಯ ಕ್ರಮವಹಿಸಿರುವ ಕುರಿತು ಮಧುಗಿರಿ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಇಂಜಿನಿಯರ್‌ಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಹಾಗೂ ಪಾವಗಡ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಕಡಿಮೆಯಾಗಿರುವ ಕುರಿತು ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಮಾಹಿತಿ ಸ್ಪಷ್ಟಪಡಿಸಿಕೊಂಡರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಮಧುಗಿರಿ ಮತ್ತು ಪಾವಗಡ ತಾಲ್ಲೂಕಗಳ ವ್ಯಾಪ್ತಿಯಲ್ಲಿ ಒಟ್ಟು 26 ಶುದ್ಧ ಕುಡಿಯುವ ನೀರಿನ ಘಟಕಗಳು ಎಷ್ಟೇ ಬಾರಿ ದುರಸ್ಥಿ ಪಡಿಸಿದರೂ ಸಹ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವಾದ ಕಾರಣ ಸದರಿ 26 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಡೀಕಮಿಷನ್ ಮಾಡಲು ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ಸಭೆಯ ಗಮನಕ್ಕೆ ತಂದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, Sri Siddhartha Academy of Higher Eductions ವತಿಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ರೈತರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉತ್ಸುಕರಾಗಿದ್ದು;

1. Green graduation (planting of tree saplings by Medical/Dental students)
2. Pleas project ( Students of Higher Eduction teach in rural schools, create awareness programme in computer education through laptap at Govt. High Schools)
3. Water Projects ( Lake rejuvenation like, Heggere, Beemasandra, Kumkumanahalli, Mallasandra, Mukanahalli Patna, Ballapura, Adagooru and Kanenahalli lakes which are already been selected)
4. Rural School projects ( R.R.W.H., sports like running track around the school, jumping pit and football)
5. Increase HER (Motivate teachers and parents of Rural Schools for Higher Education enrollment)

ಅದರಂತೆ, ಯೋಜನೆಯ ಅನುಷ್ಠಾನಕ್ಕೆ ಪೂರ್ಣಪ್ರಮಾಣದ ಸಹಕಾರ ನೀಡಬೇಕೆಂದು ಕೋರಿ ಸಲ್ಲಿಸಿರುವ ಮನವಿಯನ್ನು ಸಭೆಯ ಗಮನಕ್ಕೆ ತರುತ್ತಾ, ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದ್ದರಿಂದ ಉಪ ಕಾರ್ಯದರ್ಶಿ (ಆಡಳಿತ)ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

(ಡಾ:ಶಾಲಿನಿರಜನೀಶ್)
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ತುಮಕೂರು ಜಿಲ್ಲೆ.

ಕ್ಷೇತ್ರಾಧ್ಯಯನ

ದಿನಾಂಕ:20-04-2019 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರಪೀಡಿತ ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿನ ಬರ ಪರಿಸ್ಥಿತಿ ಹಾಗೂ ಪರಿಹಾರ ಕಾರ್ಯಗಳ ಕುರಿತಾಗಿ ಜರುಗಿದ ಸಭೆಯ ಸಭಾ ನಡವಳಿ.

ಅಧ್ಯಕ್ಷತೆ:- ಶ್ರೀ.ಪಂಕಜ್‌ಕುಮಾರ್ ಪಾಂಡೇ, ಭಾ.ಆ.ಸೇ
ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಇಲಾಖೆ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು.

ಉಪಸ್ಥಿತಿ:- 1) ಶ್ರೀಮತಿ ಆರ್.ವಿನೋತ್‌ಪ್ರಿಯಾ. ಭಾ.ಆ.ಸೇ,
ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ
2) ಶ್ರೀಮತಿ ಸಿ.ಸತ್ಯಭಾಮ, ಭಾ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ

----

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-

1. ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ
2. ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ
3. ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ, ಚಿತ್ರದುರ್ಗ
4. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿತ್ರದುರ್ಗ
5. ಉಪ ನಿರ್ದೇಶಕರು, ಪಶು ಪಾಲನಾ & ಪಶು ವೈದ್ಯ ಸೇವಾ ಇಲಾಖೆ, ಚಿತ್ರದುರ್ಗ
6. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಸ & ನೈ.ವಿಭಾಗ, ಚಿತ್ರದುರ್ಗ
7. ತಹಶೀಲ್ದಾರ್, ಚಿತ್ರದುರ್ಗ ತಾಲ್ಲೂಕು
8. ತಹಶೀಲ್ದಾರ್, ಚಳ್ಳಕೆರೆ ತಾಲ್ಲೂಕು
9. ತಹಶೀಲ್ದಾರ್, ಹಿರಿಯೂರು ತಾಲ್ಲೂಕು
10. ತಹಶೀಲ್ದಾರ್, ಹೊಳಲ್ಕೆರೆ ತಾಲ್ಲೂಕು
11. ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು
12. ತಹಶೀಲ್ದಾರ್, ಮೊಳಕಾಲ್ಮೂರು ತಾಲ್ಲೂಕು
13. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ
14. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಳ್ಳಕೆರೆ
15. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮೊಳಕಾಲ್ಮೂರು
16. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ
17. ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಸದುರ್ಗ
18. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ಉಪವಿಭಾಗ, ಚಿತ್ರದುರ್ಗ
19. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ಉಪವಿಭಾಗ, ಚಳ್ಳಕೆರೆ
20. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ಉಪವಿಭಾಗ, ಹೊಳಲ್ಕೆರೆ
21. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ಉಪವಿಭಾಗ, ಮೊಳಕಾಲ್ಮೂರು

---

ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಸಭಾಧ್ಯಕ್ಷರು ಮಾತನಾಡಿ, ಪ್ರಸ್ತುತ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಬರಪೀಡಿತ ತಾಲ್ಲೂಕುಗಳಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಜಾನುವಾರುಗಳ ಸಂರಕ್ಷಣೆ ಕ್ರಮಗಳು, ಉದ್ಯೋಗ ಖಾತ್ರಿ ಯೋಜನೆಯಡಿ ಗರಿಷ್ಟ ಪ್ರಮಾಣದಲ್ಲಿ

ಉದ್ಯೋಗವನ್ನು ನೀಡಿ, ಜನರು ಗುಳೇ ಹೋಗುವುದನ್ನು ತಪ್ಪಿಸುವ ಕಾರ್ಯವನ್ನು ಕೈಗೊಳ್ಳಬೇಕು. ಈ ತಿಂಗಳು ಹಾಗೂ ಮುಂದಿನ ತಿಂಗಳು ಬರದ ತೀವ್ರತೆ ಹೆಚ್ಚಾಗುವುದರಿಂದ ಅನುಷ್ಠಾನ ಇಲಾಖೆಯವರು ಈ ಬಗ್ಗೆ ವೈಯಕ್ತಿಕ ಗಮನ ಹಿರಿಸಿ, ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಬೇಕೆಂದು ಸೂಚಿಸಿದರು.

ಕುಡಿಯುವ ನೀರಿನ ವ್ಯವಸ್ಥೆ:-

ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರು ಮಾತನಾಡಿ, ಪ್ರಸ್ತುತ ಜಿಲ್ಲೆಯ 132 ಗ್ರಾಮಗಳಲ್ಲಿ ಪ್ರತಿನಿತ್ಯ 173 ಟ್ಯಾಂಕರ್‌ಗಳಲ್ಲಿ 541 ಟ್ರಿಪ್‌ಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. 31 ಗ್ರಾಮಗಳಲ್ಲಿ 36 ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ರೂಪದಲ್ಲಿ ಅಧಿಗ್ರಹಣ ಮಾಡಿ, ಇದರಿಂದ ಸಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಜಿಲ್ಲೆಯ ಬಹುತೇಕ ಪ್ರದೇಶವು ಅಂತರ್ಜಲದ ಆಧಾರದ ಮೇಲೆ ಅವಲಂಭನೆಯಾಗಿದ್ದು, ಬರ ಪರಿಸ್ಥಿತಿಯಿಂದಾಗಿ ಅಂತರ್ಜಲದ ಮಟ್ಟ ಕುಸಿಯುತ್ತಿದ್ದು, ಇದರಿಂದಾಗಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರಿನ ಗ್ರಾಮಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ವಿವರಿಸಿದರು. ಈ ಬಗ್ಗೆ ಮಾತನಾಡಿದ ಸಭಾಧ್ಯಕ್ಷರು, ಜನ-ಜಾನುವಾರುಗಳಿಗೆ ಅಗತ್ಯ ಕುಡಿಯುವ ನೀರನ್ನು ಒದಗಿಸುವುದು ಪ್ರಥಮ ಕರ್ತವ್ಯವಾಗಿರುತ್ತದೆ. ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬರುತ್ತದೆಯೋ ಅಂತಹ ಕಡೆ ಕೂಡಲೇ ಪರ್ಯಾಯವಾಗಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು. ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಸಂಬಂಧ ದಾಖಲಾತಿಗಳನ್ನು ಪರಿಶೀಲಿಸಿ ಪ್ರತಿ 15 ದಿನಗಳಿಗೊಮ್ಮೆ ಬಿಲ್ಲುಗಳ ಪಾವತಿಗೆ ಕ್ರಮ ವಹಿಸುವಂತೆ ಸೂಚಿಸಿದರು. ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ಈಗಾಗಲೇ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಸಂಬಂಧ ರೂ.35.15 ಲಕ್ಷ ಅನುದಾನವನ್ನು ಎಸ್‌ಡಿಆರ್‌ಎಫ್ ನಿಧಿಯಡಿ ಬಿಡುಗಡೆ ಮಾಡಲಾಗಿದೆ. ಅನುಷ್ಠಾನಾಧಿಕಾರಿಗಳಾದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗಿರುವ ಬಗ್ಗೆ ಜಿಪಿಎಸ್ ಆಧಾರಿತ ಛಾಯಾಚಿತ್ರ, ಸ್ಥಳೀಯ ಮಹಜರ್, ಟ್ರಿಪ್ ಶೀಟ್ ಇತ್ಯಾದಿಗಳನ್ನು ಸಕಾಲದಲ್ಲಿ ಒದಗಿಸುತ್ತಿಲ್ಲವಾದ್ದರಿಂದ ಬಾಕಿ ಬಿಲ್ಲು ಪಾವತಿಗೆ ವಿಳಂಬವಾಗುತ್ತಿದೆ. ಈ ಬಗ್ಗೆ ಪೂರಕ ದಾಖಲಾತಿಗಳನ್ನು ಸಲ್ಲಿಸುವಂತೆ ಈಗಾಗಲೇ ಹಲವಾರು ಬಾರಿ ಸೂಚಿಸಲಾಗಿದೆ. ಒಟ್ಟು ರೂ.46.70 ಲಕ್ಷ ಬಾಕಿ ಮೊತ್ತ ಪಾವತಿಗೆ ಇದ್ದು, ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ, ಕೂಡಲೇ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಸಭಾಧ್ಯಕ್ಷರು ಮಾತನಾಡಿ, ಕುಡಿಯುವ ನೀರಿನ ಸಮಸ್ಯೆ, ಕೈಗೊಂಡಿರುವ ಪರಿಹಾರ ಕ್ರಮಗಳು, ವೆಚ್ಚದ ಬಿಲ್ಲುಗಳ ಪಾವತಿ ಇತ್ಯಾದಿ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯಮಿತವಾಗಿ ಸಭೆ ಸೇರಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಮಾನ್ಯ ಮುಖ್ಯಕಾರ್ಯದರ್ಶಿಗಳ ನಿರ್ದೇಶಾನುಸಾರ ಜಿಲ್ಲಾಧಿಕಾರಿಗಳ ಕಚೇರಿ, ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ರವರ ಕಚೇರಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಚೇರಿ, ಎಲ್ಲಾ ತಾಲ್ಲೂಕಿನ ಕಾರ್ಯನಿರ್ವಾಹಣಾಧಿಕಾರಿಗಳ ಕಚೇರಿ, ಹಾಗೂ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಹಾಯವಾಣಿಯನ್ನು ಪ್ರಾರಂಭಿಸಿದ್ದು, ಸಹಾಯವಾಣಿಗಳಲ್ಲಿ ಸ್ವೀಕೃತವಾಗುವ ಕರೆಗಳ ಬಗ್ಗೆ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುತ್ತಿರುವುದಾಗಿ ವಿವರಿಸಿದರು.

ಜಾನುವಾರುಗಳ ಸಂರಕ್ಷಣೆ ಕ್ರಮಗಳು:-

ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರು ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿ 9 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿರುವುದೆಂದು ಅಂದಾಜಿಸಲಾಗಿದೆ. ಆದರೆ ಮುಂಗಾರು ಹಾಗೂ ಹಿಂಗಾರು

ಹಂಗಾಮಿನ ಬೆಳೆಗಳು ಬಹುತೇಕ ವಿಫಲಗೊಂಡಿರುವುದರಿಂದ ಮೇವಿನ ಲಭ್ಯತೆ ಅಂದಾಜಿಸಿರುವ ಪ್ರಮಾಣದಲ್ಲಿ ಇರುವುದಿಲ್ಲವೆಂದು ವಿವರಿಸಿದರು. ಈ ಹಿನ್ನಲೆಯಲ್ಲಿ ಜಾನುವಾರುಗಳ ಸಂರಕ್ಷಣೆಗಾಗಿ ಪ್ರಾರಂಭಿಸಲಾಗುವ ಮೇವು ನಿಧಿಗಳು ಹಾಗೂ ಗೋಶಾಲೆಗಳಿಗೆ ಉತ್ತಮ ಗುಣಮಟ್ಟದ ಮೇವನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ನಡೆಸಿ, ಸರಬರಾಜುದಾರರನ್ನು ಸಹ ಗುರುತಿಸಲಾಗಿದೆ. ಈಗಾಗಲೇ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕು ವ್ಯಾಪ್ತಿಯಲ್ಲಿ ತಲಾ 3 ರಂತೆ ಒಟ್ಟು 6 ಗೋಶಾಲೆಗಳನ್ನು ಪ್ರಾರಂಭಿಸಿದ್ದು, ಅಂದಾಜು 5938 ಜಾನುವಾರುಗಳನ್ನು ಸಂರಕ್ಷಿಸಲಾಗುತ್ತಿದೆ. ಗೋಶಾಲೆಗಳ ನಿರ್ವಹಣೆಗಾಗಿ ಸಿಬ್ಬಂದಿಗಳ ನಿಯೋಜನೆ, ಸಿ.ಸಿ. ಕ್ಯಾಮರಾಗಳ ಅಳವಡಿಕೆ ಮಾಡಲಾಗಿದೆ. ಮೊಳಕಾಲ್ಮೂರು ತಾಲ್ಲೂಕು ವ್ಯಾಪ್ತಿಯಲ್ಲಿ 5 ಮೇವು ಬ್ಯಾಂಕ್ ಸಹ ಪ್ರಾರಂಭಿಸಲಾಗಿದೆ. ಮೇವಿನ ಕೊರತೆ ನಿವಾರಣೆಗಾಗಿ ಪ್ರತಿ 5 ಕಿ.ಮೀ ವ್ಯಾಪ್ತಿಯಲ್ಲಿ ಒಂದು ಮೇವು ಬ್ಯಾಂಕ್ ಪ್ರಾರಂಭಿಸುವಂತೆ ಈಗಾಗಲೇ ತಹಶೀಲ್ದಾರ್‌ಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ವಿವರಿಸಿದರು. ಈ ಬಗ್ಗೆ ಮಾತನಾಡಿದ ಸಭಾಧ್ಯಕ್ಷರು, ಗೋಶಾಲೆಗಳ ನಿರ್ವಹಣೆ ಕಷ್ಟಸಾಧ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಅಗತ್ಯ ಸ್ಥಳಗಳಲ್ಲಿ ಮೇವು ಬ್ಯಾಂಕ್‌ಗಳನ್ನು ಪ್ರಾರಂಭಿಸಿ, ಸಬ್ಸಿಡಿ ದರದಲ್ಲಿ ಮೇವನ್ನು ವಿತರಣೆ ಮಾಡುವ ಕಾರ್ಯಕ್ಕೆ ಒತ್ತು ನೀಡುವುದು ಸೂಕ್ತ ಎಂದು ಸಲಹೆ ನೀಡಿದರು. ಎಲ್ಲಿ ಬೇಡಿಕೆ ಇರುತ್ತದೆಯೋ ಅಲ್ಲಿ ಕಡ್ಡಾಯವಾಗಿ ಮೇವು ಬ್ಯಾಂಕ್‌ಗಳನ್ನು ಪ್ರಾರಂಭಿಸಬೇಕೆ ಎಂದು ಸೂಚಿಸಿದರು.

ಇನ್‌ಪುಟ್ ಸಬ್ಸಿಡಿ ಪ್ರಗತಿ:-

ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಇವರು ಮಾತನಾಡಿ, 2018-19ನೇ ಸಾಲಿನ ಮುಂಗಾರು ಹಂಗಾಮಿಗೆ ಬರಪೀಡಿತ ಎಂದು ಘೋಷಣೆಯಾಗಿರುವ ತಾಲ್ಲೂಕು ವ್ಯಾಪ್ತಿಯಲ್ಲಿ ಮೊಬೈಲ್ ಆಪ್ ಮೂಲಕ ನಡೆಸಲಾದ ಬೆಳೆಹಾನಿ ಸಮೀಕ್ಷೆಯನ್ವಯ ಬೆಳೆನಷ್ಟ ಸಂಬಂಧ ರೂ.245.56 ಕೋಟಿ ಇನ್‌ಪುಟ್ ಸಬ್ಸಿಡಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೇಲೆ ಜಿಲ್ಲೆಯಲ್ಲಿ ಒಟ್ಟು 29,137 ಅರ್ಹ ರೈತರ ಬ್ಯಾಂಕ್ ಖಾತೆಗೆ ರೂ.7.25 ಕೋಟಿ ಇನ್‌ಪುಟ್ ಸಬ್ಸಿಡಿ ಪರಿಹಾರ ತಂತ್ರಾಂಶದ ಮೂಲಕ ಜಮೆಯಾಗಿರುತ್ತದೆ. ಉಳಿದ ರೈತರ ಮೊತ್ತವು ಹಂತ ಹಂತವಾಗಿ ಸರ್ಕಾರದಿಂದ ನೇರವಾಗಿ ಫಲಾನುಭವಿಗಳ ಖಾತೆಗೆ ಹಂಚಿಕೆಯಾಗುತ್ತದೆ ಎಂದು ವಿವರಿಸಿದರು. ಬೆಳೆವಿಮೆ ಸಂಬಂಧ ರೂ.12 ಕೋಟಿ ಮೊತ್ತದ ವಿಮಾ ಮೊತ್ತ ಇನ್‌ಶೀಯೇಟ್ ಆಗಿರುತ್ತದೆ. ಬೆಳೆ ವಿಫಲವಾಗಿರುವ ಪ್ರಕರಣಗಳ ವಿಮಾ ಮೊತ್ತ ಇನ್ನು ಇನ್‌ಶೀಯೇಟ್ ಆಗಲು ಬಾಕಿ ಇರುತ್ತದೆ ಎಂದು ವಿವರಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ:-

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಇವರು ಮಾತನಾಡಿ, ಎಂಜಿಎನ್‌ಆರ್‌ಇಜಿ ಅಡಿ ಉದ್ಯೋಗ ಸೃಜನೆಯೊಂದಿಗೆ ಆಸ್ತಿಗಳ ನಿರ್ಮಾಣಕ್ಕೆ ಅವಕಾಶವಿದ್ದು, ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಸಣ್ಣ ನೀರಾವರಿ ಇಲಾಖೆಯ ಕೆರೆಗಳು ಸೇರಿದಂತೆ ಚೆಕ್‌ಡ್ಯಾಂ, ಗೋಕಟ್ಟೆ, ಕಲ್ಯಾಣಿಗಳು ಇತ್ಯಾದಿಗಳು ಸೇರಿದಂತೆ ಒಟ್ಟು 1000 ಜಲ ಮೂಲಗಳ ಹೂಳೆತ್ತುವ ಕಾರ್ಯವನ್ನು ನಿರ್ವಹಿಸಲು ಕೆರೆ ಅಭಿವೃದ್ದಿ ಕಾರ್ಯಕ್ರಮದಡಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ಅಂದಾಜು 3.78 ಲಕ್ಷ ಪರಿಶಿಷ್ಟ ಜಾತಿ ಕುಟುಂಬ, 3.05 ಲಕ್ಷ ಪರಿಶಿಷ್ಟ ವರ್ಗಗಳ ಕುಟುಂಬ, 2.93 ಲಕ್ಷ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಇರುವುದಾಗಿ ಅಂದಾಜಿಸಿದ್ದು, ಅಂದಾಜು 16 ಲಕ್ಷ ಜನರನ್ನು ಎಂಜಿಎನ್‌ಆರ್‌ಇಜಿ ಅಡಿ ಕವರ್ ಮಾಡಲು ಸಿದ್ದತೆ ಮಾಡಿಕೊಳ್ಳುತ್ತಿರುವುದಾಗಿ ವಿವರಿಸಿದರು. ಡಬ್ಲ್ಯೂಪಿಪಿ ಅಡಿ 1080 ಘಟಕಗಳು ಇದ್ದು, ಈ ಪೈಕಿ 91 ಘಟಕಗಳು ಕಾರ್ಯನಿರ್ವಹಣೆ ಮಾಡುತ್ತಿಲ್ಲ. ಇವುಗಳನ್ನು ಕೂಡಲೇ ದುರಸ್ಥಿಪಡಿಸಿ, ಸಾರ್ವಜನಿಕ ಬಳಕೆಗೆ ಒದಗಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಸಭಾಧ್ಯಕ್ಷರು ಮಾತನಾಡಿ, ಯಾವ ಯಾವ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಆಗುತ್ತಿದೆಯೋ ಆ ಗ್ರಾಮಗಳಲ್ಲಿ ಲಭ್ಯವಿರುವ ಖಾಸಗಿ ಕೊಳವೆಬಾವಿಗಳ ಅಧಿಗ್ರಹಣ ಕಾರ್ಯ ಕೈಗೊಳ್ಳಬೇಕು. ದಾಖಲಾತಿಗಳ ನಿರ್ವಹಣೆ ಸರಿಯಾಗಿ ನಿರ್ವಹಿಸಿ, ಬಿಲ್ಲುಗಳನ್ನು ಕಾಲಮಿತಿಯೊಳಗೆ ಸಲ್ಲಿಸಬೇಕು. ಸರ್ಕಾರದ ಅನುದಾನ ದುರುಪಯೋಗವಾಗುವಂತಹ ಕಾರ್ಯ ನಡೆಯಬಾರದು. ಬರ ಪರಿಹಾರ ಕಾರ್ಯಗಳು ಸಮರ್ಪಕವಾಗಿ ಅನುಷ್ಠಾನವಾಗಬೇಕು. ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯಮಿತವಾಗಿ ಬರ ಪರಿಹಾರ ಕಾರ್ಯಗಳ ಪರಿಶೀಲನೆ ಕೈಗೊಳ್ಳುವ ಮೂಲಕ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪಂಕಜ್‌ಕುಮಾರ್ ಪಾಂಡೆ)
ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಸಂಖ್ಯೆ:ಸಿಎಎಲ್:ಸಿಆರ್:1/2018-19
ಪ್ರತಿಯನ್ನು ಸಂಬಂಧಪಟ್ಟ ಇಲಾಖೆಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಜಿಲ್ಲಾ ಪ್ರಗತಿ ಪರಿಶೀಲನಾ ವರದಿ:-

| ಕ್ರ ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಕೊಡಗು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ವಿ. ಅನ್ಬುಕುಮಾರ್ ಭಾ.ಆ.ಸೇ |
| 3 | ಭೇಟಿಯಾದ/ಪ್ರವಾಸದ ದಿನಾಂಕ | ಏಪ್ರಿಲ್-2019 ದಿನಾಂಕ:10.04.2019 ರಿಂದ ದಿನಾಂಕ: 11.04.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಈ ಕೆಳಗಿನಂತಿದೆ. |

ಮಾರ್ಚ್ ದಿನಾಂಕ:10.04.2019 ರಿಂದ ದಿನಾಂಕ:11.04.2019 ರವರೆಗೆ ಕೊಡಗು ಜಿಲ್ಲೆಗೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಲಾಗಿದೆ. ವಿವರ ಈ ಕೆಳಗಿನಂತಿದೆ.

## ಸಂಕ್ಷಿಪ್ತ ಮಾಹಿತಿ:-

ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನೆಯ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

- ಬರ ಪೀಡಿ ಪ್ರದೇಶಗಳ ಕಾಮಗಾರಿ ಪ್ರಗತಿ ಪರಿಶೀಲನೆ
- ಸಂತ್ರಸ್ಥರಿಗೆ ನಿರ್ಮಿಸಲಾಗುತ್ತಿರುವ ಮನೆಗಳ ಪ್ರಗತಿ ಪರಿಶೀಲನೆ.
- ಕುಡಿಯುವ ನೀರು ಮತ್ತು ನೈರ್ಮಲ್ಯದ ಬಗ್ಗೆ ಪರಿಶೀಲನೆ.
- ರಸ್ತೆ/ಡಾಂಬರೀಕರಣ/ಒಳಚರಂಡಿ ವ್ಯವಸ್ಥೆಯ ಕಾಮಗಾರಿ.
- ಇತರೆ ವಿಷಯಗಳು

**ಸಭೆಯ ಛಾಯಚಿತ್ರ:-**



## ಪ್ರಸ್ತುತ ಮನೆ ಕಾಮಗಾರಿಯ ವಿವರ:-

| ಕ್ರ.ಸಂ; | ಬಡಾವಣೆ | ಮನೆಗಳ ಸಂ: | No. of Houses site clearance | Started | Foundation | Roofing | 80% Finishing |
|---|---|---|---|---|---|---|---|
| 1 | ಮಧೆ | 175 | 80 | 80 | 52 | 28 | - |
| 2 | ಕರ್ಣಂಗೇರಿ | 40 | 38 | 35 | 0 | 0 | 35 |
| 3 | ಮಾದಪುರ | 400 | 318 | 318 | 312 | 06 | - |
| | ಒಟ್ಟು | 615 | 436 | 433 | 364 | 34 | 35 |

## ಕರ್ಣಂಗೇರಿ ಪ್ರದೇಶ;-









## ಮದೆ ಪ್ರದೇಶ;-








## ಮಾದಾಪುರ ಪ್ರದೇಶ;-









## ವಿವಿಧ ಕಾಮಗಾರಿಯ ಪ್ರಗತಿಯ ವಿವರ:

| ಮಳೆಹಾನಿ ಕಾಮಗಾರಿಗಳ ಪ್ರಗತಿ ವಿವರ (ಎನ್‌ಡಿಆರ್‌ಎಫ್) | | | | | | |
|---|---|---|---|---|---|---|
| | | | | (ರೂ.ಲಕ್ಷಗಳಲ್ಲಿ) | | |
| ಕ್ರ.ಸಂ. | ಅನುಷಾನಾಧಿಕಾರಿ ವಿವರ | ಮಂಜೂರಾದ ಕಾಮಗಾರಿಗಳು | ಅಂದಾಜು ಮೊತ್ತ | ಬಿಡುಗಡೆಗೊಳಿಸಿದ ಶೇ.75ರ ಮೊತ್ತ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ವೆಚ್ಚ |
| 1 | ಲೋಕೋಪಯೋಗಿ ಇಲಾಖೆ | 53 | 50.00 | 50.00 | 53 | 46.00 |
| 2 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | 198 | 286.50 | 214.20 | 176 | 82.08 |
| 3 | ಪಂಚಾಯತ್ ರಾಜ್ ಇಲಾಖೆ | 648 | 1055.30 | 786.66 | 524 | 476.99 |
| 4 | ಪಿ.ಎಂ.ಜಿ.ಎಸ್.ವೈ. ವಿಭಾಗ | 11 | 31.21 | 23.37 | 10 | 21.13 |
| 5 | ಸಣ್ಣನೀರಾವರಿ ಉಪವಿಭಾಗ | 0 | 0.00 | 0.00 | 0 | 0.00 |
| 6 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕುಶಾಲನಗರ | ಇತರೆ | 10.00 | 10.00 | ಎಲ್ಲಾ ಕಾಮಗಾರಿ ಮುಗಿದಿದೆ. | 10.00 |
| 7 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಸೋಮವಾರಪೇಟೆ | 5 | 10.00 | 10.00 | 5 | 10.00 |
| 8 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವಿರಾಜಪೇಟೆ | ಇತರೆ | 10.00 | 10.00 | ಎಲ್ಲಾ ಕಾಮಗಾರಿ ಮುಗಿದಿದೆ. | 10.00 |
| 9 | ನಗರಸಭೆ, ಮಡಿಕೇರಿ | 9 | 35.80 | 35.80 | 9 | 27.93 |
| 10 | ಚೆಸ್ಕಾಂ ಇಲಾಖೆ | 25 | 25.00 | 25.00 | 25 | 25.00 |
| **ಒಟ್ಟು** | | **949** | **1513.81** | **1165.03** | **802** | **709.13** |

| ಮಳೆಹಾನಿ ಕಾಮಗಾರಿಗಳ ಪ್ರಗತಿ ವಿವರ (ವಿಶೇಷ ಅನುದಾನ) | | | | | | |
|---|---|---|---|---|---|---|
| | | | | (ರೂ.ಲಕ್ಷಗಳಲ್ಲಿ) | | |
| ಕ್ರ.ಸಂ. | ಅನುಷ್ಠಾನಾಧಿಕಾರಿ ವಿವರ | ಮಂಜೂರಾದ ಕಾಮಗಾರಿಗಳು | ಅಂದಾಜು ಮೊತ್ತ | ಬಿಡುಗಡೆಗೊಳಿಸಿದ ಶೇ.75ರ ಮೊತ್ತ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ವೆಚ್ಚ |
| 1 | ಲೋಕೋಪಯೋಗಿ ಇಲಾಖೆ | 81 | 4435.00 | 4435.00 | 56 | 2100.00 |
| 2 | ಪಂಚಾಯತ್ ರಾಜ್ ಇಲಾಖೆ | 166 | 2800.00 | 2100.00 | 56 | 0.00 |
| 3 | ಪಿ.ಎಂ.ಜಿ.ಎಸ್.ವೈ. ವಿಭಾಗ | 6 | 515.00 | 386.25 | 0 | 16.81 |
| 4 | ಸಣ್ಣನೀರಾವರಿ, ಉಪವಿಭಾಗ | 30 | 182.00 | 136.46 | 13 | 0.00 |
| 5 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಕುಶಾಲನಗರ | 3 | 30.00 | 22.50 | 3 | 22.50 |
| 6 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಸೋಮವಾರಪೇಟೆ | 5 | 20.00 | 14.99 | 5 | 12.37 |
| 7 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವಿರಾಜಪೇಟೆ | 4 | 20.00 | 14.99 | 4 | 11.25 |
| 8 | ನಗರಸಭೆ, ಮಡಿಕೇರಿ | 5 | 292.00 | 138.75 | 4 | 138.75 |
| 9 | ಚೆಸ್ಕಾಂ ಇಲಾಖೆ | 3 | 206.00 | 206.00 | 3 | 206.00 |
| **ಒಟ್ಟು** | | **303** | **8500.00** | **7454.94** | **144** | **2507.68** |

## ಪ್ರಕೃತಿ ವಿಕೋಪದಿಂದ ಮರಣ ಹೊಂದಿದವರ ವಾರಸುದಾರರಿಗೆ ಹಾಗೂ ಗಾಯಗೊಂಡವರಿಗೆ ಮಾನ್ಯ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ;-

| ಕ್ರ.ಸಂ. | ಜಿಲ್ಲೆ | ಸರ್ಕಾರದಿಂದ ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ಮರಣ ಹೊಂದಿದವರ ವಾರಸುದಾರರಿಗೆ ಅನುಕಂಪ ಭತ್ಯೆ ಪಾವತಿಸಿದ ವಿವರ | | ಗಾಯಗೊಂಡವರ ವಿವರ | |
|---|---|---|---|---|---|---|
| | | | ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) | ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
| 1 | ಕೊಡಗು | 37.00 | 16 | 32.00 | 2 | 1.00 |

**ಷರಾ:** 18 ಜೀವಹಾನಿ ಪ್ರಕರಣಗಳ ಪೈಕಿ 02 ಪ್ರಕರಣಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಪರಿಹಾರ ಪಾವತಿಸಿರುವುದರಿಂದ ಕೊಡಗು ಜಿಲ್ಲೆಯಲ್ಲಿ 16 ಪ್ರಕರಣಗಳಿಗೆ ಸರ್ಕಾರದಿಂದ ಬಿಡುಗಡೆಯಾದ ರೂ.37.00 ಲಕ್ಷ ಮೊತ್ತದಲ್ಲಿ ರೂ.32.00 ಲಕ್ಷ ಮೊತ್ತವನ್ನು ಸಂಬಂಧಿಸಿದ ಸಂತ್ರಸ್ಥರ ಕುಟುಂಬದ ಅವಲಂಬಿತರ ಬ್ಯಾಂಕ್ ಖಾತೆಗೆ ಮತ್ತು ಗಾಯಗೊಂಡ ಸಂತ್ರಸ್ಥರಿಗೆ ತಲಾ ರೂ.50,000/-

ದಂತೆ ರೂ.1.00 ಲಕ್ಷ ಒಟ್ಟಾಗಿ ರೂ.33.00 ಲಕ್ಷ ಮೊತ್ತವನ್ನು ಆರ್‌ಟಿಜಿಎಸ್ ಮೂಲಕ ವರ್ಗಾವಣೆ ಮಾಡಲಾಗಿದೆ.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರಗತಿ ಪರಿಶೀಲನೆ ಕುರಿತು ದಿನಪತ್ರಿಕೆಗಳಲ್ಲಿ ವರದಿ:-**

## ಸಂತ್ರಸ್ತರ ಮನೆಗಳ ಕಾಮಗಾರಿ ತ್ವರಿತಕ್ಕೆ ಸೂಚನೆ



12/04/2019

## ಮನೆಗಳ ನಿರ್ಮಾಣ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ : ಅನ್ಬುಕುಮಾರ್

ಮಡಿಕೇರಿ : ಪ್ರಕೃತಿ ವಿಕೋಪದಡಿ ನಿರ್ಮಾಣವಾಗುತ್ತಿರುವ ಮನೆಗಳ ನಿರ್ಮಾಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಅವರು ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ಮದೆನಾಡಿನಲ್ಲಿ ಏಪ್ರಿಲ್, 30 ರೊಳಗೆ ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಬೇಕು.

ಪುಟ 3



ಈ ಬಗ್ಗೆ ಮಾಹಿತಿ ನೀಡಿದ ಹೆಬಿಟೇಟ್ ಸಂಸ್ಥೆಯ ಎಂಜಿನಿಯರ್ ಶ್ರೀನಿವಾಸ್ ಅವರು ಈಗಾಗಲೇ ಕರ್ಣಂಗೇರಿಯಲ್ಲಿ 25 ಮನೆಗಳ ಕಾಮಗಾರಿ ಶೇ.80ರಷ್ಟು ಪೂರ್ಣಗೊಂಡಿದೆ. ಉಳಿದಂತೆ ಮದೆನಾಡು ಗ್ರಾಮದಲ್ಲಿ 45, ಕರ್ಣಂಗೇರಿ 10 ಹಾಗೂ ಮಾದಾಪುರದಲ್ಲಿ 43 ಮನೆಗಳ ಕಾಮಗಾರಿ ಮೇಲ್ಛಾವಣಿ ಹಂತ ತಲುಪಿದೆ ಎಂದರು.

ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್ ಅವರು ಪ್ರಥಮ ಹಂತದಲ್ಲಿ 417 ಕುಟುಂಬಗಳನ್ನು ಆಯ್ಕೆ ಮಾಡಲಾಗಿದೆ. ಎರಡನೇ ಹಂತದಲ್ಲಿ 411 ಮನೆಗಳ ಪಟ್ಟಿ ಸಿದ್ಧಪಡಿಸಲಾಗಿದ್ದು, ಒಟ್ಟು 829 ಮನೆಗಳನ್ನು ನಿರ್ಮಿಸಲಾಗುತ್ತಿದೆ. ಬಾಕಿ ಇರುವುದನ್ನು ಪಟ್ಟಿ ಮಾಡಿ ಮನೆ ನಿರ್ಮಿಸಲಾಗುವುದು ಎಂದು ಅವರು ಹೇಳಿದರು.

ಮೊದಲನೆ ಪುಟದಿಂದ

## ಮನೆಗಳ ನಿರ್ಮಾಣ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ : ಅನ್ಬುಕುಮಾರ್

# Expedite construction of calamity victims' houses, says officer

**MADIKERI:** District in-charge Secretary V Anbu Kumar directed officials to expedite the construction of houses being built for natural calamity victims of Kodagu.

Chairing a progress review meeting at the DC's office in Madikeri on Thursday, he said that the work pending in Madenadu should be completed before April 30. In other places, the work should be completed before June end, he ordered.

### '80% done'

Engineer Shrinivas said that 80 per cent progress was achieved. As many as 25 houses in Karnangeri and 45 houses in Madenadu, 10 in Karnangeri and 43 in Madapura were nearing completion, he added.

Deputy Commissioner Annies Kanmani Joy said that 417 families affected by the natural calamity were selected in the first phase. In the second phase, a list of 411 beneficiaries was drawn and 828 houses are being constructed.

### Beneficiary list

Houses would also be constructed for the remaining beneficiaries after listing them. "As many as 828 houses will be handed over to the beneficiaries soon. The rent for the houses they are currently staying in is being borne by the government till March end," she informed.

"The drinking water problem in Kushalnagar is solved. The problem persists in tribal hamlets," the DC said.

Zilla Panchayat CEO K Lakshmipriya was present at the meeting.

**DH News Service**



District in-charge Secretary V Anbu Kumar chairs a progress review meet at the DC's office on Thursday.

Mangaluru

*-*-*-*-*-*-*

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:09.04.2019 ರಂದು ಸಂಜೆ 6.00 ಗಂಟೆಗೆ ಬರಗಾಲ ಪರಿಸ್ಥಿತಿಯ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
3. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
4. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
5. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
6. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
7. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
8. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
9. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
10. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
11. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
12. ಉಪ-ನಿರ್ದೇಶಕರು ತೋಟಗಾರಿಕೆ ಬೆಳಗಾವಿ.
13. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಳಗಾವಿ.
14. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
15. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
16. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
17. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
19. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
20. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಅಭಿನಂದಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಇತ್ತೀಚಿನ ಬರಗಾಲ ಪರಿಸ್ಥಿತಿಯಿಂದ ಹಾನಿಯಾಗಿರುವ ಕುರಿತು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ಈ ಕೆಳಕಂಡಂತೆ ಸಭೆಗೆ ವಿವರಿಸಿದರು. ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಮಾಣ ಗಮನಿಸಿದಾಗ ಅಕ್ಟೋಬರ 2018 ರಿಂದ ಡಿಶೆಂಬರ 2018ರವರೆಗೆ 153 ಮೀ.ಮೀ. ವಾಡಿಕೆ ಮಳೆಯಾಗಬೇಕಿದ್ದು ವಾಸ್ತವಿಕವಾಗಿ 51 ಮೀ.ಮೀ. ಮಳೆಯಾಗಿದೆ. ಶೇ-67ರಷ್ಟು ಮಳೆ ಕೊರತೆಯಾಗಿದೆ. ತಾಲೂಕುವಾರು ಮಳೆಯ ಪ್ರಮಾಣವನ್ನು ಪರಿಶೀಲಿಸಿದಾಗ ಎಲ್ಲ ತಾಲೂಕುಗಳಲ್ಲಿ ಮಳೆಯ

ಕೊರತೆಯಿರುತ್ತದೆ. ಇದೇ ಪರಿಸ್ಥಿತಿ ಮುಂದುವರೆದಲ್ಲಿ ತೇವಾಂಶ ಕೊರತೆಯುಂಟಾಗಿ ಬೆಳೆಗಳು ಒಣಗುವ ಸಾಧ್ಯತೆಗಳಿವೆ. ಸರ್ಕಾರವು ಘೋಷಿಸಿರುವ ಮುಂಗಾರು ಹಂಗಾಮಿನ ರಾಮದುರ್ಗ, ಸವದತ್ತಿ, ಅಥಣಿ ಹಾಗೂ ಕಾಗವಾಡ ತಾಲೂಕುಗಳಲ್ಲಿ ಬರ ಪರಿಸ್ಥಿತಿಯಿಂದಾಗಿ ಬೆಳೆ ಹಾನಿಯಾದ ಬಗ್ಗೆ ಕೃಷಿ, ಕಂದಾಯ, ತೋಟಗಾರಿಕೆ ಇಲಾಖೆಗಳ ಜಂಟಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಿ ರಾಮದುರ್ಗ ತಾಲೂಕಿನಲ್ಲಿ 34,294ಹೆಕ್ಟೇರ್, ಸವದತ್ತಿ ತಾಲೂಕಿನಲ್ಲಿ 18358.77ಹೆಕ್ಟೇರ್, ಅಥಣಿ ತಾಲೂಕಿನಲ್ಲಿ 27895 ಹೆಕ್ಟೇರ್ ಹೀಗೆ ಒಟ್ಟು80547.77 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಿಂಗಾರು ಹಂಗಾಮಿನಲ್ಲಿ 3.32ಲಕ್ಷ ಹೆ.ಪ್ರದೇಶ ಬಿತ್ತನೆಯಾಗಬೇಕಿದ್ದು ಇದುವರೆಗೆ 2.92 ಲಕ್ಷ ಹೆ.ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಒಟ್ಟು 87.8% ರಷ್ಟು ಬಿತ್ತನೆಯಾಗಿದೆ. ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳು ಎಂದು ಮಾನ್ಯ ಸರ್ಕಾರದವರು ಘೋಷಣೆ ಮಾಡಿರುತ್ತಾರೆ. ಸದರಿ ವಿಷಯದ ಕುರಿತು ಬರ ಪರಿಸ್ಥಿತಿಯಿಂದಾಗಿ ಬೆಳೆ ಹಾನಿಯಾದ ಬಗ್ಗೆ ಕೃಷಿ,ಕಂದಾಯ, ತೋಟಗಾರಿಕೆ ಇಲಾಖೆಗಳ ಜಂಟಿ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ, 124126 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಉಪನಿರ್ದೇಶಕರು, ಪಶು ಪಾಲನೆ & ಪಶುವೈದ್ಯಕೀಯ ಸೇವಾ ಇಲಾಖೆ ಬೆಳಗಾವಿ ಇವರು ಬೆಳಗಾವಿ ಜಿಲ್ಲೆಯಲ್ಲಿ 2012ರ ಜಾನುವಾರುಗಳ ಗಣತಿಯಂತೆ ಒಟ್ಟು 14.22ಲಕ್ಷ ಜಾನುವಾರುಗಳಿದ್ದು, ರೈತರಲ್ಲಿ ಅಂದಾಜು 08 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯತೆಯಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಅಥಣಿ ತಾಲೂಕಿನ 19 ಗ್ರಾಮಗಳಲ್ಲಿ ಹಾಗೂ ಚಿಕ್ಕೋಡಿ ತಾಲೂಕಿನ 01 ಗ್ರಾಮ ಹೀಗೆ ಒಟ್ಟು 20 ಗ್ರಾಮಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಲಾಗಿದೆ. ಮುಂಬರುವ ದಿನಗಳಲ್ಲಿ ಮೇವಿನ ಸಮಸ್ಯೆ ಎದುರಾದಲ್ಲಿ ಜಿಲ್ಲೆಯ ಬರಪೀಡಿತ ತಾಲೂಕುಗಳಲ್ಲಿ 41 ಗ್ರಾಮಗಳನ್ನು ಮತ್ತು ಆ ಗ್ರಾಮಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಬೇಕು ಎನ್ನುವ ಕುರಿತು ಸ್ಥಳವನ್ನು ಗುರುತಿಸಿ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಜಿಲ್ಲೆಯ ರೈತರಲ್ಲಿ ಮೇವಿನ ಲಭ್ಯತೆಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ನೀರಾವರಿ ಸೌಲಭ್ಯ ಹೊಂದಿದ ರೈತರಿಗೆ ಒಟ್ಟು 78632 ಮೇವಿನ ಕಿಟ್‌ಗಳನ್ನು ಹಂಚಿಕೆ ಮಾಡಿದ್ದು, ಪೂರೈಕೆಯಾದ ಮೇವಿನ ಮಿನಿಕಿಟ್ಟಗಳಿಂದ ಒಟ್ಟು 393160 ಮೆ.ಟನ್ ಹಸಿ ಮೇವಿನ ಇಳುವರಿ ಬರಬಹುದೆಂದು ಅಂದಾಜಿಸಲಾಗಿದ್ದು, ಈ ಮೇವು 03 ವಾರಗಳ ವರೆಗೆ ಸಾಕಾಗಬಹುದು ಎಂದು ಅಧ್ಯಕ್ಷರಿಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಮಾತನಾಡಿ 2018-19ನೇ ಸಾಲಿನಲ್ಲಿ ಮುಂಗಾರು & ಹಿಂಗಾರು ಮಳೆಯು ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೇ ಇರುವುದರಿಂದ ಮೇವು ಆಧಾರಿತ ಬಿತ್ತನೆ ಕ್ಷೇತ್ರವು ಕುಂಠಿತವಾಗಿರುವುದರಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯ ಜಾನುವಾರುಗಳಿಗೆ ಆಂತರಿಕ ಮೇವಿನ ಪ್ರಮಾಣವನ್ನು ಸರಿದೂಗಿಸುವ ಹಿತದೃಷ್ಟಿಯಿಂದ ಮತ್ತು ಜಿಲ್ಲೆಯಿಂದ ಹೊರ ರಾಜ್ಯಗಳಿಗೆ ಮೇವು ಸಾಗಾಣಿಕೆ ಮಾಡುವುದನ್ನು ಹಾಗೂ ಒಣ ಮೇವುನ್ನು ಯಾವುದೇ ರೂಪದಲ್ಲಿ ಸಂಸ್ಕರಿಸಿ ಸಾಗಾಣಿಕೆ ಮಾಡುವುದನ್ನು, ಮಾನ್ಯ ಸರ್ಕಾರದ ಆದೇಶದ ದಿನಾಂಕ:23.12.2018 ರನ್ವಯ ದಿನಾಂಕ:31.05.2019ರ ಅವಧಿಯವರೆಗೆ ಜಿಲ್ಲೆಯಾದ್ಯಾಂತ ಮೇವು ಸಾಗಾಣಿಕೆಯನ್ನು ನಿಷೇಧಿಸಿ ಆದೇಶಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ, ಬೆಳಗಾವಿ ಇವರು ಮಾತನಾಡಿ ಪ್ರಸ್ತುತವಾಗಿ ಜಿಲ್ಲೆಯ ಅಥಣಿ ತಾಲೂಕಿನ 21 ಗ್ರಾಮಗಳು,

ಚಿಕ್ಕೋಡಿ ತಾಲೂಕಿನ 08 ಗ್ರಾಮಗಳು ಹಾಗೂ ಸವದತ್ತಿ ತಾಲೂಕಿನ 01 ಗ್ರಾಮ ಹೀಗೆ ಒಟ್ಟು 30 ಗ್ರಾಮಗಳು/ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು. ಅದೇ ರೀತಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ ಇವರು ಜಿಲ್ಲೆಯ ನಗರಪ್ರದೇಶಗಳಲ್ಲಿ ಸಧ್ಯಕ್ಕೆ ಯಾವುದೇ ನಗರ/ಪಟ್ಟಣಕ್ಕೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿಲ್ಲ ಎಂದು ಸಭೆಗೆ ವಿವರಿಸಿದರು.

ಮುಂದುವರೆದು ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಬೆಳಗಾವಿ ಇವರು ಮಾತನಾಡಿ ಮುಂಬರುವ ದಿನಗಳಲ್ಲಿ ಜಿಲ್ಲೆಯಾದ್ಯಾಂತ ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡಬಹುದಾದ ಸಮಸ್ಯಾತ್ಮಕ ಒಟ್ಟು 175 ಗ್ರಾಮಗಳನ್ನು ಗುರುತಿಸಿ, 150 ದಿನಗಳ ಕ್ರೀಯಾ ಯೋಜನೆಯನ್ನು ತಯಾರಿಸಲಾಗಿದೆ ಹಾಗೂ ಪ್ರತಿಯೊಂದು ಗ್ರಾಮದಲ್ಲಿ ಲಬ್ಯವಿರುವ ಹಾಗೂ ತುರ್ತು ಸಂದರ್ಭದಲ್ಲಿ ಬಾಡಿಗೆ ಆಧಾರದಲ್ಲಿ ತೆಗೆದುಕೊಳ್ಳಬಹುದಾದ ಖಾಸಗಿ ಕೊಳವೆ ಭಾವಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಸಿ.ಆರ್.ಎಫ್ ಅಡಿಯಲ್ಲಿ ಈಗಾಗಲೇ ಮುಂಗಾರು ಹಂಗಾಮಿನ 03 ಬರಪೀಡಿತ ತಾಲೂಕುಗಳಲ್ಲಿ ರೂ.148.50 ಲಕ್ಷಗಳ ಅಂದಾಜು ಮೊತ್ತದಲ್ಲಿ ಒಟ್ಟು 105 ಕಾಮಗಾರಿಗಳನ್ನು ಅನುಮೋದನೆಯನ್ನು ನೀಡಿ, ಶೇ 75ರಷ್ಟು ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ 95 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 10 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು. ಅಲ್ಲದೇ ಹಿಂಗಾರು ಹಂಗಾಮಿನಲ್ಲಿ ಬರಪೀಡಿತ ಎಂದು ಘೋಷಿತವಾದ ಬೆಳಗಾವಿ, ಖಾನಪೂರ, ಕಿತ್ತೂರ, ಬೈಲಹೊಂಗಲ ತಾಲೂಕುಗಳಲ್ಲಿ ಒಟ್ಟು ರೂ. 193.50ಲಕ್ಷಗಳ ಮೊತ್ದಲ್ಲಿ 138 ಕಾಮಗಾರಿಗಳನ್ನು ಅನುಮೋದನೆಯನ್ನು ನೀಡಲಾಗಿದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ. ತುರ್ತು ಕಾಮಗಾರಿಗಳು (ಟಾಸ್ಕ ಫೋರ್ಸ) ಯೋಜನೆಯಡಿ ರೂ. 650.00 ಲಕ್ಷಗಳ ಅಂದಾಜು ಮೊತ್ತದಲ್ಲಿ 337 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಈ ಪೈಕಿ 328 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು. ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 66 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿದ್ದು, ಸದರಿ ಯೋಜನೆಗಳಲ್ಲಿ ಒಟ್ಟು 552 ಗ್ರಾಮಗಳು ಒಳಗೊಂಡಿರುತ್ತವೆ ಎಂದು ತಿಳಿಸಿದರು. ಎನ್.ಆರ್.ಡಿ.ಡಬ್ಲ್ಯು.ಪಿ ಯೋಜನೆಯಡಿ 1442 ಮುಂದುವರೆದ ಕಾಮಗಾರಿಗಳು ಮತ್ತು 960 ಹೊಸ ಕಾಮಗಾರಿಗಳು ಇರುತ್ತವೆ. ಒಟ್ಟು ರೂ. 11268.61 ಲಕ್ಷ ಅನುದಾನ ಹಂಚಿಕೆಯಾಗಿದ್ದು ಈ ಪೈಕಿ ರೂ 8541.41 ಲಕ್ಷ ಅನುದಾನ ಖರ್ಚಾಗಿದೆ ಎಂದು ಸಭೆಗೆ ತಿಳಿಸಿದರು.

ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರು ಮಾತನಾಡಿ ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ನಗರ ಪ್ರದೇಶದಲ್ಲಿ ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು. ಕುಡಿಯುವ ನೀರು ಸರಬರಾಜು ಕುರಿತು ಒಟ್ಟು ರೂ1781.61 ಲಕ್ಷ ಅನುದಾನ ಲಭ್ಯವಿರುತ್ತದೆ ಇದರಲ್ಲಿ ಈವರೆಗೆ ರೂ.179.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ ಎಂದು ವಿವರಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಮಾತನಾಡಿ, ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಸರಬರಾಜಿಗೆ ಸಮಸ್ಯೆಯಾಗದಂತೆ ನೊಡಿಕೊಳ್ಳಲು ಜಿಲ್ಲಾಡಳಿತ ಸರ್ವರೀತಿ ಸನ್ನದ್ಧವಾಗಿದೆ. ಚಿಕ್ಕೋಡಿ ತಾಲೂಕಿನಲ್ಲಿ 22 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 96 ಗ್ರಾಮ/ತೋಟದ ವಸತಿಗಳು, ರಾಯಬಾಗ ತಾಲೂಕಿನಲ್ಲಿ 05 ಬಹುಗ್ರಾಮ ಕುಡಿಯುವ ನೀರು ಸರಬರಾಜು

ಯೋಜನೆಗಳಿಂದ 31 ಗ್ರಾಮ/ತೋಟದ ವಸತಿಗಳು, ಅಥಣಿ ತಾಲೂಕಿನಲ್ಲಿ 06 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 82 ಗ್ರಾಮ/ತೋಟದ ವಸತಿಗಳು ಹೀಗೆ ಒಟ್ಟು 33 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 209 ಗ್ರಾಮ/ತೋಟದ ವಸತಿಗಳಿಗೆ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಸಧ್ಯಕ್ಕೆ ಬರಗಾಲದ ತೀವ್ರತೆಯಿಂದ ಕೃಷ್ಣಾ ನದಿಯಲ್ಲಿ ನೀರಿನ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿದ್ದು ಇದರಿಂದ ಮುಂದಿನ 3 ರಿಂದ 4 ತಿಂಗಳುಗಳವರೆಗೆ ನೀರು ಇಲ್ಲದೇ ಜನ ಜಾನುವಾರುಗಳಿಗೆ ತುಂಬಾ ಉಂಟಾಗುವ ಸಾಧ್ಯತೆಗಳು ಇರುತ್ತವೆ. ಈಗಾಗಲೇ ಅಥಣಿ ತಾಲೂಕಿನ 13 ಗ್ರಾಮಗಳ ತೋಟದ ವಸತಿಗಳು ಹಾಗು ಚಿಕ್ಕೋಡಿ ತಾಲೂಕಿನ 05 ಗ್ರಾಮಗಳ ತೋಟದ ವಸತಿಗಳಿಗೆ ಕುಡಿಯುವ ನೀರನ್ನು ಟ್ಯಾಂಕರ ಮೂಲಕ ಪೂರೈಕೆ ಮಾಡಲಾಗುತ್ತಿದೆ. ಇದೇ ರೀತಿ ಸಮಸ್ಯೆ ಮುಂದುವರೆದಲ್ಲಿ ಮುಂಬರುವ ದಿನಗಳಲ್ಲಿ ಮೇಲಿನ ಗ್ರಾಮಗಳ್ನು ಹೊರತುಪಡಿಸಿ ಇನ್ನೂಳಿದ ಗ್ರಾಮ/ತೋಟದ ವಸತಿಗಳಿಗೆ ಕುಡಿಯುವ ನೀರನ್ನು ಟ್ಯಾಂಕರ ಮೂಲಕ ಪೂರೈಸಲು ಪ್ರಾರಂಭಿಸಬೇಕಾಗುತ್ತದೆ. ಮುಂಬರುವ ದಿನಗಳಲ್ಲಿ ಚಿಕ್ಕೋಡಿ, ರಾಯಬಾಗ, ಅಥಣಿ ಹಾಗೂ ಕಾಗವಾಡ ತಾಲೂಕುಗಳಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಮಹಾರಾಷ್ಟ್ರ ರಾಜ್ಯದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರು ಮಾತನಾಡಿ ಮುಂಜಾಗೃತಾ ಕ್ರಮ ಹಾಗೂ ಅನಾವೃಷ್ಠಿಯ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

1. ಮಾನ್ಯ ಸರ್ಕಾರವು 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ, ರಾಮದುರ್ಗ, ಅಥಣಿ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಹಾಗೂ ಹಿಂಗಾರಿ ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಈ ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆ ಉಂಟಾಗದಂತೆ ಸಂಬಂಧಿಸಿದ ಕಂದಾಯ, ಪಂಚಾಯತರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಪಶುಪಾಲನೆ ಇಲಾಖೆಗಳ ಸಹಯೋಗದಲ್ಲಿ ಎಲ್ಲ ಮುನ್ನೇಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
2. ಸಧ್ಯಕ್ಕೆ ಜಿಲ್ಲೆಯಲ್ಲಿ ಅಥಣಿ ತಾಲೂಕಿನ 21 ಗ್ರಾಮಗಳ ತೋಟದ ವಸತಿಗಳಿಗೆ, ಚಿಕ್ಕೋಡಿ ತಾಲೂಕಿನ 08 ಗ್ರಾಮಗಳು ಹಾಗೂ ಸವದತ್ತಿ ತಾಲೂಕಿನ 01 ಗ್ರಾಮ ಹೀಗೆ ಒಟ್ಟು 30 ಗ್ರಾಮಗಳು/ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದಾದ ಗ್ರಾಮಗಳನ್ನು ಗುರುತಿಸಿ, ಅಲ್ಲಿನ ಸಮಸ್ಯೆಗಳಿಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಒಂದು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸದರಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಂಡು ಸಮಸ್ಯೆಗಳು ಬರದಂತೆ ಕ್ರಮಗಳನ್ನು ಜರುಗಿಸಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಲ್ಲ ಕೈಗೊಂಡ ಕ್ರಮಗಳು ವಿಫಲವಾದ ನಂತರವೇ ಕೊನೆಯ ಪರಿಹಾರದ ಕ್ರಮವಾಗಿ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು ಎಂದು ಸಭೆಯಲ್ಲಿದ್ದ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ,

ಕೋಶ ಬೆಳಗಾವಿ ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ, ಚಿಕ್ಕೋಡಿ ಇವರಿಗೆ ಸೂಚನೆಗಳನ್ನು ನೀಡಿದರು.

3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಹೆಚ್ಚಿನ ಮಾನವ ದಿನಗಳನ್ನು ಸೃಜನೆಯನ್ನು ಮಾಡಿ ಉದ್ಯೋಗ ಕೇಳಿಕೊಂಡು ಬರುವ ಜನರಿಗೆ ಉದ್ಯೋಗವನ್ನು ಒದಗಿಸಬೇಕು. ಜನರು ಉದ್ಯೋಗವಿಲ್ಲದೇ ಬೇರೆ ಕಡೆಗೆ ವಲಸೆ ಹೋಗದಂತೆ ಹಾಗೂ ಯಾವುದೇ ದೂರಗಳು ಬರಂದತೆ ಎಚ್ಚರಿಕೆಯನ್ನು ವಹಿಸಬೇಕು ಎಂದು ನಿರ್ದೇಶನಗಳನ್ನು ನೀಡಲಾಯಿತು.

4. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ ಇವರಿಗೆ ಸಿಆರ್‌ಎಫ್ ನಡಿ ಈಗಾಗಲೇ ಅನುಮೋದನೆ ನೀಡಿದ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಉಳಿದ ಶೇ25 ರಷ್ಟು ಅನುದಾನದ ಬಿಡುಗಡೆಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

5. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ ಇವರು ಟಾಸ್ಕ್‌ಪೋರ್ಸ, ಎನ್‌ಆರ್‌ಡಿಡಬ್ಲುಪಿ, ಎಮ್‌ವ್ಹಿಎಸ್ ನಲ್ಲಿನ ಎಲ್ಲ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಮುಂಬರುವ ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅವಶ್ಯಕವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಅನವಶ್ಯಕವಾಗಿ ಟ್ಯಾಂಕರ ಮೂಲಕ ನೀರು ಪೂರೈಕೆ ಮಾಡುವುದನ್ನು ತಪ್ಪಿಸಲು ಮುನ್ನೇಚ್ಚರಿಕೆ ಕ್ರಮಗಳನ್ನು ಜರುಗಿಸಬೇಕು.

6. ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ, ಕೋಶ ಬೆಳಗಾವಿ ಇವರು ಕುಡಿಯುವ ನೀರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸ ಬೇಕು. ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಜರುಗಿಸತಕ್ಕದ್ದು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ವಿಭಾಗ,ಬೆಳಗಾವಿ